ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 20 ಗುರುವಾರ 2023

ಸಂಪುಟ: 44 | ಸಂಚಿಕೆ: 95 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರು ಅರಸರ ಜನಪರ ಕಾರ್ಯ ಬಿಂಬಿಸುವುದರೊಂದಿಗೆ ದಸರಾ ಅದ್ದೂರಿ ಆಚರಣೆ

● ಉಸ್ತುವಾರಿ ಸಚಿವ ಡಾ.ಮಹದೇವಪ್ಪ ವಿವರಣೆ ● ಕಲೆ, ಸಂಸ್ಕೃತಿ ಜೊತೆಗೆ ನಾಲ್ವಡಿಯವರ ಕೊಡುಗೆ ಅನಾವರಣ



ಬೆಂಗಳೂರು, ಜು.19(ಕೆಎಂಶಿ)– ಮೈಸೂರು ಅರಸರ ಜನಪರ ಕಾರ್ಯಗಳ ಬಗ್ಗೆ ಮುಂದಿನ ಪೀಳಿಗೆಗೆ ಪರಿಚಯಿಸುವ ಮೂಲಕ ವಿಶ್ವವಿಖ್ಯಾತ ಮೈಸೂರು ದಸರಾವನ್ನು ಈ ಬಾರಿ ಅದ್ಧೂರಿಯಾಗಿ ಆಚರಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ದಸರಾ ಮಹೋತ್ಸವ ಆಚರಣೆಗೆ ಸಂಬಂಧಿಸಿದಂತೆ ಈ ತಿಂಗಳ ಅಂತ್ಯದ ವೇಳೆಗೆ ಇಲ್ಲವೇ ಆಗಸ್ಟ್ ಮೊದಲ ವಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ನಡೆಸಿ ಅಂತಿಮ ರೂಪು–ರೇಷೆ ಸಿದ್ಧಗೊಳಿಸಲಾಗುವುದು.

ಜಿಲ್ಲಾ ಉಸ್ತುವಾರಿ ಹಾಗೂ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ.ಮಹದೇವಪ್ಪ ಸುದ್ದಿಗಾರರಿಗೆ ಈ ಮಾಹಿತಿ ನೀಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ರಾಜ್ಯಕ್ಕೆ ನೀಡಿದ ಕೊಡುಗೆಗಳನ್ನು ಬಿಂಬಿಸುವ ಮೂಲಕ ನಾಡಹಬ್ಬವನ್ನು ಅದ್ದೂರಿಯಾಗಿ ಆಚರಿಸಲಾಗುವುದು ಎಂದರು. ಕಲೆ,



ಸಂಸ್ಕೃತಿಯನ್ನು ಬಿಂಬಿಸಲಷ್ಟೇ ದಸರಾ ಮಹೋತ್ಸವ ಸೀಮಿತಗೊಳ್ಳುತ್ತಿತ್ತು. ಮೈಸೂರು ರಾಜವಂಶಸ್ಥರು ಅಂದೇ ಜನರಿಗೆ ಸಂವಿಧಾನದತ್ತ ಸೌಲಭ್ಯಗಳನ್ನು ಒದಗಿಸಿದ್ದರು. ಅರಸರ ಕೊಡುಗೆಯನ್ನು ಈ ಬಾರಿ ದಸರಾದಲ್ಲಿ ಬಿಂಬಿಸುವುದಕ್ಕೆ ಆದ್ಯತೆ ನೀಡುತ್ತೇವೆ. ರಾಷ್ಟ್ರದ ಅನೇಕ ರಾಜರು ತಮ್ಮ ಸಂಸ್ಥಾನಗಳನ್ನು ವಿಸ್ತರಿಸುವ ಉದ್ದೇಶದೊಂದಿಗೆ ಆಡಳಿತ ನಡೆಸುತ್ತಿದ್ದ ಕಾಲದಲ್ಲಿ ನಮ್ಮ ಅರಸರು ಸಾಮಾಜಿಕ ವ್ಯವಸ್ಥೆಯಲ್ಲಿನ ತಾರತಮ್ಯ ನಿವಾರಿಸಿ ಅಭಿವೃದ್ಧಿಗೆ ಇಂಬು ಕೊಟ್ಟಿದ್ದರು. ಇದರೊಂದಿಗೆ ಶಿಕ್ಷಣ ಕೊಡಿಸುವ ಮೂಲಕ ರಾಜ್ಯದ ಸಂಪನ್ಮೂಲ ಸೂಕ್ತ ಬಳಕೆಗೆ ಒತ್ತು ನೀಡಿದ್ದರು.

ಮೈಸೂರು ಅರಸರಿಂದ ಪ್ರಾರಂಭವಾದ ದಸರಾ ಮಹೋತ್ಸವವನ್ನು ಒಂದು ಆಚರಣೆಯಾಗಿ ನಡೆಸುವುದರ ಜೊತೆಗೆ ಅವರ ಜನಪರ ಧೋರಣೆಗಳನ್ನು ವಿವರಿಸುವ ಸಂದರ್ಭವಾಗಿಯೂ ಬಳಸಿಕೊಳ್ಳಲಾಗುವುದು. ದಸರಾ ಎಂದರೆ ಜಗಮಗಿಸುವ ಬೆಳಕು, ಸಾಂಸ್ಕೃತಿಕ ಕಾರ್ಯಕ್ರಮಗಳು ಮತ್ತಿತರ ಆಚರಣೆಗಳಿಗೆ ಸೀಮಿತ ಎಂಬುದು ಸಹಜ. ಅದರೊಂದಿಗೆ ಅರಸರು ರಾಜ್ಯದ ಪ್ರಗತಿಗೆ ಹೇಗೆ ಕಾರಣರಾದರು ಎಂಬುದನ್ನು ವಿವರಿಸುವುದು ನಮ್ಮ ಉದ್ದೇಶವಾಗಿದೆ ಎಂದರು.

ವಿಧಾನಸಭೆಯಲ್ಲಿ ಗದ್ದಲ–ಗಲಾಟೆ; ಸ್ಪೀಕರ್ ಪೀಠಕ್ಕೆ ಅಗೌರವ

ಬಿಜೆಪಿಯ ಹತ್ತು ಶಾಸಕರು ಅಮಾನತು



● ಕಾಂಗ್ರೆಸ್ ನೇತೃತ್ವದ ವಿಪಕ್ಷಗಳ ನಾಯಕರ ಸ್ವಾಗತಕ್ಕೆ ಐಎಎಸ್, ಐಪಿಎಸ್ ಅಧಿಕಾರಿಗಳ ಬಳಸಿಕೊಂಡ ವಿಚಾರವಾಗಿ ಕಾವೇರಿದ ಚರ್ಚೆ, ಗದ್ದಲ–ಗಲಾಟೆ ● ಸದನದ ಬಾವಿಗಿಳಿದು ಧಿಕ್ಕಾರ ಕೂಗುತ್ತಾ ಡೆಪ್ಯುಟಿ ಸ್ಪೀಕರ್ ಮೇಲೆ ಕಾಗದ–ಪತ್ರ ಹರಿದು ತೂರಿದ ಬಿಜೆಪಿ ಸದಸ್ಯರು ● ಅಮಾನತುಗೊಂಡರೂ ಧರಣಿ ಮುಂದುವರೆಸಿದ ಬಿಜೆಪಿ ಸದಸ್ಯರ ಎತ್ತಿ ಸದನದಿಂದ ಹೊರ ಹಾಕಿದ ಮಾರ್ಷಲ್‌ಗಳು

ಬೆಂಗಳೂರು, ಜು. 19– ಕರ್ನಾಟಕ ವಿಧಾನಸಭೆ ಇಂದು ಅಕ್ಷರಶಃ ರಣಾಂಗಣವಾಯಿತು. ಭಾರೀ ಗದ್ದಲ–ಗಲಾಟೆ. ಯಾರು ಏನು ಹೇಳುತ್ತಿದ್ದಾರೆ ಎಂಬುದು ಒಂದೂ ತಿಳಿಯದಂತಹ ಪರಿಸ್ಥಿತಿ ಉಂಟಾಯಿತು. ಇದೇ ವೇಳೆ ಕಾಗದಪತ್ರಗಳನ್ನು ಹರಿದು ಡೆಪ್ಯುಟಿ ಸ್ಪೀಕರ್ ಮೇಲೆ ಎಸೆದ 10 ಮಂದಿ ಬಿಜೆಪಿ ಶಾಸಕರನ್ನು ಈ ಅಧಿವೇಶನ ಮುಗಿಯುವವರೆಗೂ ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅಮಾನತುಗೊಳಿಸಿದ್ದಾರೆ.

ಬಿಜೆಪಿ ಶಾಸಕರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ, ಆರಗ ಜ್ಞಾನೇಂದ್ರ, ವೇದವ್ಯಾಸ ಕಾಮತ್, ಅರವಿಂದ ಬೆಲ್ಲದ್, ಧೀರಜ್ ಮುನಿರಾಜು, ಯಶಪಾಲ್ ಸುವರ್ಣ, ಸುನಿಲ್ ಕುಮಾರ್, ಉಮಾನಾಥ್ ಕೋಟ್ಯಾನ್ ಮತ್ತು ಭರತ್ ಶೆಟ್ಟಿ ಅಮಾನತಾದವರಾಗಿದ್ದು, ಸ್ಪೀಕರ್ ರೂಲಿಂಗ್ ನಂತರವೂ ವಿಧಾನಸಭೆಯ ಬಾವಿಯಲ್ಲೇ ಧರಣಿ ಕುಳಿತಿದ್ದ ಈ ಶಾಸಕರನ್ನು ಮಾರ್ಷಲ್‌ಗಳು ಬಲವಂತವಾಗಿ ಹೊತ್ತೊಯ್ದು ವಿಧಾನಸಭೆಯಿಂದ ಹೊರ ಹಾಕಿದರು.

ವಿವರ: ಬೆಂಗಳೂರಿನಲ್ಲಿ ಜು.18, 19ರಂದು ನಡೆದ ದೇಶದ ವಿಪಕ್ಷ ನಾಯಕರ ಸಭೆಗೆ ಭಾಗವಹಿಸಲು ಆಗಮಿಸಿದ್ದ ಕಾಂಗ್ರೆಸ್ ಹಾಗೂ ಇತರ ಪಕ್ಷಗಳ ಮುಖಂಡರನ್ನು ಆಹ್ವಾನಿಸಲು ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಬಳಸಿಕೊಳ್ಳಲಾಯಿತು ಎಂದು ಆರೋಪಿಸಿ, ಈ ಬಗ್ಗೆ ಚರ್ಚೆ ನಡೆಸಲು ಅವಕಾಶ ನೀಡಬೇಕೆಂದು ಇಂದು ಬೆಳಗ್ಗೆ ಸದನ ಆರಂಭವಾಗುತ್ತಿದ್ದಂತೆಯೇ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಪಟ್ಟು ಹಿಡಿದರು. ವಿಧಾನಸಭೆ ಬಾವಿಗಿಳಿದು ಪ್ರತಿಭಟನೆ ನಡೆಸಿದರು. ಈ ಸಂದರ್ಭದಲ್ಲಿ 10 ನಿಮಿಷ ಕಾಲ ಸದನವನ್ನು ಸ್ಪೀಕರ್ ಯು.ಟಿ. ಖಾದರ್ ಮುಂದೂಡಿದರು. ಮತ್ತೆ ಸಭೆ ಸೇರಿದಾಗಲೂ ಬಿಜೆಪಿ ಮತ್ತು ಜೆಡಿಎಸ್ ಶಾಸಕರ ಪ್ರತಿಭಟನೆ ಮುಂದುವರೆಯಿತು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾತನಾಡಿ,

● 6ನೇ ಪುಟಕ್ಕೆ

ಅಮಾನತ್ತಾದವರು

- ಡಾ.ಅಶ್ವತ್ಥನಾರಾಯಣ
- ವೇದವ್ಯಾಸ ಕಾಮತ್
- ಅರವಿಂದ ಬೆಲ್ಲದ್
- ಧೀರಜ್ ಮುನಿರಾಜು
- ಯಶಪಾಲ್ ಸುವರ್ಣ
- ಸುನೀಲ್‌ಕುಮಾರ್
- ಆರ್.ಅಶೋಕ್
- ಉಮಾನಾಥ್ ಕೋಟ್ಯಾನ್
- ಆರಗ ಜ್ಞಾನೇಂದ್ರ
- ಭರತ್ ಶೆಟ್ಟಿ

ಧರಣಿ ವೇಳೆ ನೂಕಾಟ–ತಳ್ಳಾಟದಲ್ಲಿ ಯತ್ನಾಳ್ ಅಸ್ವಸ್ಥ

ಬೆಂಗಳೂರು, ಜು.19– ವಿಧಾನಸಭೆ ಅಧಿವೇಶನದಿಂದ ಬಿಜೆಪಿಯ 10 ಶಾಸಕರನ್ನು ಅಮಾನತುಗೊಳಿಸಿದ ಸ್ಪೀಕರ್ ಕ್ರಮವನ್ನು ಖಂಡಿಸಿ ಬಿಜೆಪಿ ಶಾಸಕರು ಪ್ರತಿಭಟನೆ ನಡೆಸುತ್ತಿದ್ದ ವೇಳೆ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದು, ಅವರನ್ನು ಚಿಕಿತ್ಸೆಗಾಗಿ ಫೋರ್ಟಿಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.



ಶಾಸಕರು ಅಮಾನತುಗೊಂಡು ಮಾರ್ಷಲ್‌ಗಳಿಂದ ಹೊರ ಹಾಕಲ್ಪಟ್ಟ ನಂತರ ಬಿಜೆಪಿ ಶಾಸಕರು ಕೆಲಕಾಲ ಸ್ಪೀಕರ್ ಕಚೇರಿ ಮುಂದೆ ಪ್ರತಿಭಟನೆ ನಡೆಸಿದ ನಂತರ ವಿಧಾನಸೌಧದ ಕೆಂಗಲ್ ಹನುಮಂತಯ್ಯನವರ ದ್ವಾರದ ಮೆಟ್ಟಿಲುಗಳ ಮೇಲೆ

● 6ನೇ ಪುಟಕ್ಕೆ



ಗೃಹಲಕ್ಷ್ಮಿ ಯೋಜನೆಗೆ ಸಿಎಂ ಸಿದ್ದರಾಮಯ್ಯ ಚಾಲನೆ

ಬೆಂಗಳೂರು, ಜು.19– ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹಲಕ್ಷ್ಮಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಚಾಲನೆ ನೀಡಿದರು.

ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ನಡೆದ ಸಮಾರಂಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಹಾಜರಿದ್ದರು. ಯೋಜನೆಗೆ ಅರ್ಹರಾಗಿರುವ ಮಹಿಳೆಯರು ಇಂದಿನಿಂದ ಅರ್ಜಿಗಳನ್ನು ಸಲ್ಲಿಸಲು ಪ್ರಾರಂಭಿಸಬಹುದಾಗಿದೆ.

ಅರ್ಜಿ ಸಲ್ಲಿಕೆ ಆರಂಭ

ಆಗಸ್ಟ್ 15 ಮತ್ತು 20ರ ನಂತರ ಮಹಿಳೆಯರು ತಿಂಗಳಿಗೆ 2,000 ರೂಪಾಯಿಗಳನ್ನು ಪಡೆಯಲು ಪ್ರಾರಂಭಿಸುತ್ತಾರೆ ಮತ್ತು ಯೋಜನೆಯ ನೋಂದಣಿ ಒಂದು ವರ್ಷದವರೆಗೆ ಮುಂದುವರಿಯುತ್ತದೆ ಎಂದು ಕಾಂಗ್ರೆಸ್ ಪಕ್ಷವು ಟ್ವೀಟ್‌ನಲ್ಲಿ ತಿಳಿಸಿದೆ. ಕರ್ನಾಟಕದ 11 ಕೋಟಿಗೂ ಹೆಚ್ಚು ಮಹಿಳೆಯರು ಈ ಯೋಜನೆಯಿಂದ ಪ್ರಯೋಜನ ಪಡೆಯಲಿದ್ದಾರೆ ಮತ್ತು ಸರ್ಕಾರವು ಈ ಯೋಜನೆಗೆ 18,000 ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದೆ ಎಂದು ಕಾಂಗ್ರೆಸ್ ಟ್ವೀಟ್ ಉಲ್ಲೇಖಿಸಿದೆ.

ಗೃಹಲಕ್ಷ್ಮಿ ಯೋಜನೆಯು ಭಾರತದ ಅತಿದೊಡ್ಡ ಮಹಿಳಾ–ಆಧಾರಿತ ನೇರ ನಗದು ವರ್ಗಾವಣೆ ಯೋಜನೆಯಾಗಿದೆ. ಈ ಯೋಜನೆಯು ಬೆಲೆ ಏರಿಕೆಯ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ ಎಂದು ಕಾಂಗ್ರೆಸ್ ನಾಯಕ ರಣದೀಪ್ ಸಿಂಗ್ ಸುರ್ಜೇವಾಲ ಹೇಳಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ, ಬಡತನ ರೇಖೆಗಿಂತ

● 9ನೇ ಪುಟಕ್ಕೆ

ಮೈಸೂರಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಆರಂಭ

ಮೊದಲ ಹಂತದಲ್ಲಿ ಮೈಸೂರಿನ ಹೃದಯ ಭಾಗದ ಕೆ.ಆರ್.ಸರ್ಕಲ್ || ಸಯ್ಯಾಜಿರಾವ್ ರಸ್ತೆ || ಮಕ್ಕಾಜಿ ಚೌಕ || ಗಾಂಧಿ ವೃತ್ತ || ಓಲ್ಡ್ ಬ್ಯಾಂಕ್ ರಸ್ತೆ || ಶಿವರಾಂಪೇಟೆ || ಸಂತೇಪೇಟೆ || ಇರ್ವಿನ್ ರಸ್ತೆ || ಅಶೋಕ ರಸ್ತೆ || ಬಿ.ಎನ್.ರಸ್ತೆ ಸೇರಿ ಹಲವೆಡೆ ಕಾರ್ಯಾಚರಣೆ ಮುಂದುವರಿಕೆ





ಮೈಸೂರು, ಜು.19(ಆರ್‌ಕೆ)–ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಇಂದಿನಿಂದ ಮೈಸೂರು ನಗರದ ಹೃದಯ ಭಾಗದಲ್ಲಿ ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆ ಆರಂಭಿಸಿದ್ದಾರೆ.

ಪಾಲಿಕೆ ಕೌನ್ಸಿಲ್ ಸಭೆ ನಿರ್ಣಯದಂತೆ ಮೇಯರ್ ಶಿವಕುಮಾರ್ ಅವರು ಮಂಗಳವಾರ ನಗರ ಪ್ರದಕ್ಷಿಣೆ ಹಾಕಿ, ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿರುವುದನ್ನು ಪ್ರತ್ಯಕ್ಷವಾಗಿ ಕಂಡು, ಒತ್ತುವರಿ ತೆರವುಗೊಳಿಸುವಂತೆ ಸೂಚಿಸಿದ್ದರು. ಪಾಲಿಕೆ ಆಯುಕ್ತ ಜಿ. ಲಕ್ಷ್ಮೀಕಾಂತ್ ರೆಡ್ಡಿ ಅವರ ನಿರ್ದೇಶನದಂತೆ ಪಾಲಿಕೆ ಅಧಿಕಾರಿಗಳು ಅಭಯ ತಂಡದ ನೆರವಿನೊಂದಿಗೆ ಇಂದಿನಿಂದ ಕಾರ್ಯಾಚರಣೆ ಆರಂಭಿಸಿದ್ದಾರೆ.

> ಪಾದಚಾರಿಗಳಿಗೆ ಮೀಸಲಾಗಿರುವ ಮಾರ್ಗವನ್ನು ಒತ್ತುವರಿ ಮಾಡಿ ವಿವಿಧ ವಸ್ತುಗಳನ್ನು ವ್ಯಾಪಾರ ಮಾಡುತ್ತಿರುವುದರಿಂದ ತಮಗೆ ಆಗುತ್ತಿರುವ ತೊಂದರೆ ಬಗ್ಗೆ ಸಾರ್ವಜನಿಕರಿಂದ ವ್ಯಾಪಕ ದೂರುಗಳು ಕೇಳಿ ಬಂದವು. ನಗರ ಪಾಲಿಕೆ ಸದಸ್ಯರೂ ಕೌನ್ಸಿಲ್ ಸಭೆಯಲ್ಲಿ ಇದೇ ವಿಷಯ ಪ್ರಸ್ತಾಪ ಮಾಡಿದ ಹಿನ್ನೆಲೆಯಲ್ಲಿ ಸಭೆಯಲ್ಲಿ ನಿರ್ಣಯ ಕೈಗೊಂಡು ಮೈಸೂರಲ್ಲಿ ಫುಟ್‌ಪಾತ್ ತೆರವು ಕಾರ್ಯಾಚರಣೆ ಆರಂಭಿಸಿದ್ದೇವೆ. ಸ್ಥಳದಲ್ಲಿ ಸೂಚನಾ ಫಲಕಗಳನ್ನೂ ಹಾಕುತ್ತೇವೆ. ಮತ್ತೆ ಆ ಜಾಗದಲ್ಲಿ ವ್ಯಾಪಾರ ಆರಂಭಿಸಿದಲ್ಲಿ ಅಂತಹವರ ವಿರುದ್ಧ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕಾಗುತ್ತದೆ.
>
> –ಶಿವಕುಮಾರ್, ಮೇಯರ್

> ಮೈಸೂರು ಸುಂದರ ನಗರ. ಇಂತಹ ಪಾರಂಪರಿಕ ನಗರಿಯಲ್ಲಿ ಫುಟ್‌ಪಾತ್ ಮೇಲೆ ಅಡ್ಡಾದಿಡ್ಡಿಯಾಗಿ ನಾನಾ ಪದಾರ್ಥಗಳ ವ್ಯಾಪಾರ ನಡೆಸುತ್ತಿರುವುದರಿಂದ ಪಾದಚಾರಿಗಳಿಗಷ್ಟೇ ಅಲ್ಲದೆ, ವಾಹನ ಸಂಚಾರಕ್ಕೂ ಅಡ್ಡಿಯಾಗುತ್ತಿದೆ ಎಂದು ದೂರುಗಳು ಬಂದಿತ್ತು. ಹಲವು ಬಾರಿ ನಮ್ಮ ಅಧಿಕಾರಿಗಳು ಮೌಖಿಕವಾಗಿ ಎಚ್ಚರಿಸಿದ್ದರೂ ವ್ಯಾಪಾರಿಗಳು ತೆರವುಗೊಳಿಸದ ಕಾರಣ ಸಾರ್ವಜನಿಕರ ಹಿತದೃಷ್ಟಿಯಿಂದ ಪಾಲಿಕೆಯಿಂದಲೇ ಫುಟ್‌ಪಾತ್ ಒತ್ತುವರಿ ತೆರವುಗೊಳಿಸುವುದು ಅನಿವಾರ್ಯವಾಗಿದೆ. ಮುಂದೆಯೂ ಕಾರ್ಯಾಚರಣೆಯನ್ನು ಮುಂದುವರೆಸುತ್ತೇವೆ.
>
> –ಜಿ.ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಆಯುಕ್ತ

ಪಾಲಿಕೆ ಹಿರಿಯ ಆರೋಗ್ಯಾಧಿಕಾರಿ ಡಾ. ಡಿ.ಜಿ. ನಾಗರಾಜ್, ವಲಯ ಕಚೇರಿ–6ರ ವಲಯಾಧಿಕಾರಿ ಮಂಜುನಾಥ್ ನೇತೃತ್ವದ ಸಿಬ್ಬಂದಿ ಇಂದು ಬೆಳಗ್ಗೆ 11.30 ಗಂಟೆಯಿಂದ ಸಯ್ಯಾಜಿರಾವ್ ರಸ್ತೆಯಲ್ಲಿ ತೆರವು ಕಾರ್ಯಾಚರಣೆ ಆರಂಭಿಸಿದರು.

ಚಿಕ್ಕಗಡಿಯಾರದ ಎದುರು ಸಯ್ಯಾಜಿರಾವ್ ರಸ್ತೆ, ಇಂದ್ರ ಕೆಫೆ ಪಕ್ಕದ ಮಕ್ಕಾಜಿ ಚೌಕಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ, ಕೆ.ಆರ್.ಸರ್ಕಲ್, ಪುರಭವನದ ಎದುರಿನ ಫುಟ್‌ಪಾತ್ ಮೇಲೆ ಬಟ್ಟೆ, ಆಟಿಕೆ ವಸ್ತು, ಚಪ್ಪಲಿ, ಹಣ್ಣು–ತರಕಾರಿ, ಗೃಹೋಪಯೋಗಿ ವಸ್ತುಗಳನ್ನು ಮಾರಾಟ ಮಾಡುತ್ತಿದ್ದವರನ್ನು ಪಾಲಿಕೆ ಅಧಿಕಾರಿಗಳು ಇಂದು ತೆರವುಗೊಳಿಸಿದರು.

● 9ನೇ ಪುಟಕ್ಕೆ

ಬೆಂಗಳೂರಿನ 10 ಕಡೆ ಸ್ಫೋಟಕ್ಕೆ ಸಂಚು ರೂಪಿಸಿದ್ದ

ಐವರು ಶಂಕಿತ ಉಗ್ರರ ಬಂಧನ

● ಬಂಧಿತರಿಂದ 40 ಸಜೀವ ಗುಂಡು, ಎರಡು ಡ್ರ್ಯಾಗರ್, ರಿವಾಲ್ವರ್, ಮೊಬೈಲ್, ಸ್ಫೋಟಕ ವಸ್ತು ವಶ ● ಜೈಲಿನಲ್ಲಿರುವವರೊಂದಿಗೆ ನಿರಂತರ ಸಂಪರ್ಕ ಹೊಂದಿ ವಿಧ್ವಂಸಕ ಕೃತ್ಯಕ್ಕೆ ಸಂಚು ಬಯಲು ● ಎನ್‌ಐಎ ಮಾಹಿತಿ ಆಧರಿಸಿ ಸಿಸಿಬಿ ಪೊಲೀಸರಿಂದ ಬಂಧನ



ಬೆಂಗಳೂರು, ಜು.19(ಕೆಎಂಶಿ)– ರಾಜ್ಯದಲ್ಲಿ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದ ಆರೋಪದ ಮೇಲೆ ಐವರು ಶಂಕಿತ ಉಗ್ರರನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ಎನ್‌ಐಎ ಅಧಿಕಾರಿಗಳು ನೀಡಿದ ಮಾಹಿತಿ ಆಧಾರದ ಮೇಲೆ ಸಿಸಿಬಿ ಪೊಲೀಸರು ಮುದಾಸಿರ್,

● 9ನೇ ಪುಟಕ್ಕೆ

ಗೃಹಲಕ್ಷ್ಮಿ ಪರಿಣಾಮಕಾರಿ ಅನುಷ್ಠಾನಕ್ಕೆ ಡಿಸಿ ಸೂಚನೆ



ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಗೃಹಲಕ್ಷ್ಮಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ಬುಧವಾರ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚಿಸಿದರು.

ಮೈಸೂರು,ಜು.19(ಆರ್‌ಕೆ)– ಗೃಹ ಲಕ್ಷ್ಮಿ ಯೋಜನೆಗೆ ಮುಖ್ಯಮಂತ್ರಿ ಸಿದ್ದ ರಾಮಯ್ಯ ಅವರು ಬುಧವಾರ ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಚಾಲನೆ ನೀಡಿದ್ದು, ಮೈಸೂರು ಜಿಲ್ಲೆಯಲ್ಲಿಯೂ ಈ ಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಮುತುವರ್ಜಿಯಿಂದ ಕೆಲಸ ಮಾಡುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಅಧಿಕಾರಿಗಳಿಗೆ ಸೂಚಿಸಿದರು.

ಗೃಹಲಕ್ಷ್ಮಿ ಯೋಜನೆಯ ಪರಿಣಾಮಕಾರಿ ಅನುಷ್ಠಾನದ ಕುರಿತು ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 256 ಬಾಪೂಜಿ ಸೇವಾ ಕೇಂದ್ರಗಳು, 222 ಗ್ರಾಮ ಒನ್ ಕೇಂದ್ರಗಳು, 30 ಕರ್ನಾಟಕ ಒನ್ ಕೇಂದ್ರಗಳು ಹಾಗೂ ಮಹಾನಗರ ಪಾಲಿಕೆಯ 9 ವಲಯ ಕಚೇರಿಗಳು ಸೇರಿದಂತೆ ಜಿಲ್ಲೆಯ ಎಲ್ಲಾ ಕೇಂದ್ರಗಳಲ್ಲಿಯೂ ಸಮರ್ಪಕವಾಗಿ ಕೆಲಸ ಆಗಬೇಕು ಎಂದು ತಹಸೀಲ್ದಾರ್ ಹಾಗೂ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದರು.

ಗೃಹಲಕ್ಷ್ಮಿ ಯೋಜನೆಗೆ ನೋಂದಾಯಿಸಿಕೊಳ್ಳಲು ಯಾವುದೇ ಕೊನೆ ದಿನಾಂಕ ನಿಗದಿಯಾಗಿರುವುದಿಲ್ಲ. ಮಹಿಳೆಯರು ನಿರಾತಂಕವಾಗಿ ಅವರಿಗೆ ಮೆಸೇಜ್ ಬಂದಾಗ ನಿಗದಿಪಡಿಸಿದ ದಿನಾಂಕದಂದು ಹತ್ತಿರದ ಕೇಂದ್ರಗಳಿಗೆ ಆಧಾರ್ ಕಾರ್ಡ್, ಗಂಡನ ಆಧಾರ್ ಕಾರ್ಡ್, ರೇಷನ್ ಕಾರ್ಡ್ ಹಾಗೂ ಆಧಾರ್ ಲಿಂಕ್ ಆಗಿರುವ ಬ್ಯಾಂಕ್ ಖಾತೆಯ ಮುಖಪುಟದ ಜೆರಾಕ್ಸ್ ಪ್ರತಿಯನ್ನು ತೆಗೆದುಕೊಂಡು ಹೋಗಿ ನೋಂದಾಯಿಸಿಕೊಳ್ಳಬೇಕು. ಒಂದು ವೇಳೆ ಆ ಸಮಯದಲ್ಲಿ ಅರ್ಜಿ ಸಲ್ಲಿಸಲು ಸಾಧ್ಯವಾಗದಿದ್ದರೆ, ಮುಂದಿನ ದಿನದ ಸಂಜೆ 5ರಿಂದ 7 ಗಂಟೆಯವರೆಗೆ ಅದೇ ಕೇಂದ್ರಗಳಿಗೆ ಹೋಗಿ ಅರ್ಜಿ ಸಲ್ಲಿಸಬಹುದು. ಈ ಯೋಜನೆಗೆ ನೋಂದಾಯಿಸಿಕೊಳ್ಳಲು ಯಾವುದೇ ಶುಲ್ಕವಿರುವುದಿಲ್ಲ ಎಂದು ಮಾಹಿತಿ ನೀಡಿದರು.

ಈಗಾಗಲೇ ನೋಡಲ್ ಅಧಿಕಾರಿಗಳ ನೇಮಕ ಮಾಡಲಾಗಿದ್ದು, ಪ್ರಜಾಪ್ರತಿನಿಧಿಗಳ ಆಯ್ಕೆ ಪೂರ್ಣಗೊಳಿಸಿ. ನೋಂದಾವಣೆ ಪ್ರಕ್ರಿಯೆಯಲ್ಲಿ ಪ್ರಜಾಪ್ರತಿನಿಧಿಗಳು ದುಡ್ಡು ತೆಗೆದುಕೊಳ್ಳುವಂತಿಲ್ಲ. ಆ ರೀತಿ ಕಂಡುಬಂದಲ್ಲಿ ಕ್ರಮ ಜರುಗಿಸಲಾಗುವುದು ಎಂದು ಹೇಳಿದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಅಪರ ಜಿಲ್ಲಾಧಿಕಾರಿ ಕವಿತಾ ರಾಜರಾಮ್, ಮೈಸೂರು ಮಹಾನಗರ ಪಾಲಿಕೆ ಹೆಚ್ಚುವರಿ ಆಯುಕ್ತರಾದ ರೂಪ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಡಿ.ಬಸವರಾಜು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಕೆಆರ್ ಕ್ಷೇತ್ರದ ಬಿಜೆಪಿ ಕಾರ್ಯಕರ್ತರಿಗೆ ವಿಧಾನಸಭೆ ಕಲಾಪ ವೀಕ್ಷಣೆಗೆ ಅವಕಾಶ

ಪ್ರಥಮ ಬಾರಿ ಶಾಸಕ ಶ್ರೀವತ್ಸರಿಂದ ವಿನೂತನ ಪ್ರಯೋಗ



ಮೈಸೂರು,ಜು.19(ಆರ್‌ಕೆ)– ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಟಿ.ಎಸ್.ಶ್ರೀವತ್ಸ ತಮ್ಮ ಕೆಆರ್ ಕ್ಷೇತ್ರದ ಬಿಜೆಪಿ ಕಾರ್ಯಕರ್ತರಿಗೆ ವಿಧಾನಸಭೆ ಕಲಾಪ ವೀಕ್ಷಣೆಗೆ ಅನುವು ಮಾಡಿಕೊಟ್ಟಿದ್ದಾರೆ.

ಕಲಾಪ ಆರಂಭವಾದಾಗಿಂದ ಪ್ರತೀ ದಿನ ಒಂದು ವಾರ್ಡಿನ 50 ಮಂದಿಯಂತೆ ಬೆಂಗಳೂರಿಗೆ ಕರೆದೊಯ್ದು ವಿಧಾನಸೌಧ ವೀಕ್ಷಣೆ ಹಾಗೂ ಅರ್ಧ ತಾಸು ಕಲಾಪ ವೀಕ್ಷಿಸಲು ಅವಕಾಶ ಕಲ್ಪಿಸಲಾಗುತ್ತಿದೆ. (ಜು.18) ನಗರಪಾಲಿಕೆ ಸದಸ್ಯರಾದ ಬಿ.ವಿ.ಮಂಜುನಾಥ್, ಮ.ವಿ. ರಾಮಪ್ರಸಾದ್ ಸೇರಿದಂತೆ ಕೆ.ಆರ್. ಕ್ಷೇತ್ರ ವ್ಯಾಪ್ತಿಯ 51ನೇ ವಾರ್ಡ್‌ನ 50 ಮಂದಿ ಬಿಜೆಪಿ ಕಾರ್ಯಕರ್ತರು ಬೆಂಗಳೂರಿಗೆ ತೆರಳಿ ವಿಧಾನಸಭೆ ಅಧಿವೇಶನ ವೀಕ್ಷಿಸಿದರು.

ಇಂದು 54ನೇ ವಾರ್ಡಿನ ಪಾಲಿಕೆ ಸದಸ್ಯರು, ಬೂತ್, ಮಂಡಲ ಮಟ್ಟದ ಕಾರ್ಯಕರ್ತರು ವಿಧಾನಸೌಧ ವೀಕ್ಷಿಸಿದ ನಂತರ ಕಲಾಪದಲ್ಲೂ ಪಾಲ್ಗೊಂಡು ಸಂಜೆ ಮೈಸೂರಿಗೆ ಹಿಂದಿರುಗಿದರು. ತಾವೂ ಮೊದಲ ಬಾರಿ ಕರ್ನಾಟಕ ವಿಧಾನಸಭೆ ಅಧಿವೇಶನದಲ್ಲಿ ಪಾಲ್ಗೊಂಡು ಅಲ್ಲಿ ನಡೆಯುವ ಅಧಿವೇಶನದಲ್ಲಿ ಚರ್ಚಿಸುವ ವಿಷಯಗಳನ್ನು ವೀಕ್ಷಿಸಿ ಪಡೆದ ಅನುಭವದಿಂದ ಪ್ರೇರೇಪಣೆಗೊಂಡು ಕ್ಷೇತ್ರದ ಇತರರಿಗೂ ಅದನ್ನು ಪರಿಚಯಿಸುವ ಉದ್ದೇಶದಿಂದ ಈ ಪ್ರಯತ್ನ ಮಾಡಿರುವುದಾಗಿ ಶಾಸಕ ಶ್ರೀವತ್ಸ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಕಲಾಪ ನೋಡಿಕೊಂಡು ಬಂದಿರುವ ಕಾರ್ಪೊರೇಟರ್ ಬಿ.ವಿ. ಮಂಜುನಾಥ್ ತಮಗಾದ ಅನುಭವವನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡರು. ನಾವು ಪಾಲಿಕೆ ಕೌನ್ಸಿಲ್ ಸಭೆಗಳಲ್ಲಿ ಚರ್ಚಿಸುವುದಕ್ಕೂ ಸ್ಪೀಕರ್, ಡೆಪ್ಯೂಟಿ ಸ್ಪೀಕರ್ ಎದುರು ಕುಳಿತು ರಾಜ್ಯದ ಆಗು–ಹೋಗುಗಳ ಬಗ್ಗೆ ನಿಯಮಾನುಸಾರ ಚರ್ಚಿಸುವುದಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಅದೊಂದು ಉತ್ತಮ ಹಾಗೂ ವಿಶೇಷ ಅನುಭವವೇ ಸರಿ. ನಾವು ಅರ್ಧ ತಾಸು ಕಲಾಪ ವೀಕ್ಷಿಸಲು ಅವಕಾಶ ಸಿಕ್ಕಿದ್ದೇ ಒಂದು ದೊಡ್ಡ ಅನುಭವ ಎಂದರು.

ಇದೇ ಮೊದಲ ಸಲ ನಮ್ಮ ಶಾಸಕರು ಈ ಪ್ರಯತ್ನ ಮಾಡಿದ್ದಾರೆ. ಕಳೆದ ಒಂದು ವಾರದಿಂದ ದಿನಕ್ಕೊಂದು ವಾರ್ಡ್‌ನಂತೆ ಪ್ರತೀ ದಿನ 50 ಮಂದಿಗೆ ಈ ಅವಕಾಶ ಸಿಗುತ್ತದೆ. ಅಧಿವೇಶನ ಮುಗಿಯುವವರೆಗೂ ನಮ್ಮ ಬಿಜೆಪಿ ಕಾರ್ಯಕರ್ತರು ಈ ಅವಕಾಶವನ್ನು ಬಳಸಿಕೊಂಡು ಕಲಾಪ ವೀಕ್ಷಿಸಲಿದ್ದಾರೆ ಎಂದು ತಿಳಿಸಿದರು.

ಬಡವರು, ರೈತರ ಪ್ರಕರಣಗಳು ಶೀಘ್ರ ಇತ್ಯರ್ಥಕ್ಕೆ ಅನುವಾಗುವ ಕಾನೂನು ಪ್ರಕ್ರಿಯೆ ಸಂಹಿತೆಗೆ ತಿದ್ದುಪಡಿ

ಬೆಂಗಳೂರು, ಜು.19(ಕೆಎಂಶಿ)–ಬಡವರ ಹಾಗೂ ಸಣ್ಣ ರೈತರ ಪ್ರಕರಣವನ್ನು ಆರು ತಿಂಗಳೊಳಗಾಗಿ ಇತ್ಯರ್ಥಪಡಿಸಲು ಅನುಕೂಲವಾಗುವಂತೆ ಸಿವಿಲ್ ನ್ಯಾಯಾಲಯಗಳಲ್ಲಿ ಕಾನೂನು ಪ್ರಕ್ರಿಯೆ ಸಂಹಿತೆ ತಿದ್ದುಪಡಿಗೆ ವಿಧಾನಸಭೆಯಲ್ಲಿ ಬುಧವಾರ ಅಂಗೀಕಾರ ನೀಡಲಾಯಿತು.

ರಾಜ್ಯದ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ಹತ್ತಾರು ವರ್ಷಗಳಿಂದ ಬಾಕಿ ಉಳಿದಿದ್ದು ಬಡವರಿಗೆ ನ್ಯಾಯ ದೊರೆಯುತ್ತಿಲ್ಲ. ನ್ಯಾಯಾಲಯದ ವೆಚ್ಚ ಭರಿಸುವ ಆರ್ಥಿಕ ಶಕ್ತಿಯೂ ಕುಗ್ಗುತ್ತಿದೆ ಎಂದು ವಿಧೇಯಕ ಮಂಡಿಸಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ್ ಹೇಳಿದರು.

ಈ ಹಿನ್ನೆಲೆಯಲ್ಲಿ ಸರ್ಕಾರ ಸಿಪಿಸಿಗೆ ತಿದ್ದುಪಡಿ ತರುತ್ತಿದೆ. ಇದರ ಪ್ರಕಾರ ಬಡವರ ಪ್ರಕರಣಗಳು ತ್ವರಿತವಾಗಿ ವಿಚಾರಣೆಯಾಗಿ 6 ತಿಂಗಳಲ್ಲಿ ವಿಲೇವಾರಿ ಆಗಬೇಕಿದೆ. ಮಹತ್ವದ ಈ ತಿದ್ದುಪಡಿ ಬಡವರಿಗೆ ಹಾಗೂ ರೈತರಿಗೆ ವರದಾನವಾಗಲಿದೆ ಎಂದರು.ಇದರೊಂದಿಗೆ 2023ನೇ ಸಾಲಿನ ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ ಸೇರಿದಂತೆ ನಾಲ್ಕು ವಿಧೇಯಕಗಳು ಬಿಜೆಪಿ–ಜೆಡಿಎಸ್ ಧರಣಿ ಗದ್ದಲದ ನಡುವೆ ಅಂಗೀಕಾರವಾದವು.

ಮೈಸೂರು ಅರಮನೆಗೆ ಅಖಿಲೇಶ್ ಯಾದವ್ ಭೇಟಿ



ಮೈಸೂರು,ಜು.19(ಆರ್‌ಕೆ)–ಉತ್ತರ ಪ್ರದೇಶದ ವಿರೋಧ ಪಕ್ಷದ ನಾಯಕ, ಸಮಾಜವಾದಿ ಪಾರ್ಟಿ ನಾಯಕರಾದ ಅಖಿಲೇಶ್ ಯಾದವ್ ಬುಧವಾರ ಸಂಜೆ ಮೈಸೂರು ಅರಮನೆಗೆ ಭೇಟಿ ನೀಡಿ, ವೀಕ್ಷಿಸಿದರು. ಬೆಂಗಳೂರಿನಿಂದ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಿದ ಅವರು, ನೇರ ವಾಗಿ ಅಂಬಾ ವಿಲಾಸ ಅರಮನೆಗೆ ಭೇಟಿ ನೀಡಿದರು. ಅರಮನೆ ಭದ್ರತಾ ವಿಭಾಗದ ಎಸಿಪಿ ಚಂದ್ರಶೇಖರ್, ಅರಮನೆ ಮಂಡಳಿ ಅಧಿಕಾರಿಗಳು ಅಖಿಲೇಶ್ ಯಾದವ್ ಅವರನ್ನು ಬರಮಾಡಿಕೊಂಡು ಅರಮನೆ ವೀಕ್ಷಣೆ ವೇಳೆ ಮಾಹಿತಿ ನೀಡಿದರು. ಅರಮನೆಯ ಸೌಂದರ್ಯ, ರಾಜಮನೆತನದವರ ಆಳ್ವಿಕೆ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ ಅಖಿಲೇಶ್, ನಿರ್ವಹಣೆ ಬಗ್ಗೆಯೂ ಪ್ರಶಂಸಿಸಿದರು. ದೇವರಾಜ ಠಾಣೆ ಇನ್ಸ್‌ಪೆಕ್ಟರ್ ನೇತೃತ್ವದಲ್ಲಿ ಈ ಸಂದರ್ಭದಲ್ಲಿ ಬಿಗಿ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ವಿವಿಧ ಸೌಲಭ್ಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.19–ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಕಾರ್ಯಾಲಯದ ವತಿಯಿಂದ ಪಂಚಾಯಿತಿ ವ್ಯಾಪ್ತಿಯ ಸಾರ್ವಜನಿಕರಿಗೆ 2023–24ನೇ ಸಾಲಿನ ಶೇ.24.10, ಶೇ.7.25 ಮತ್ತು ಶೇ.5ರ ಎಸ್‌ಎಫ್‌ಸಿ ಮತ್ತು ಪಟ್ಟಣ ಪಂಚಾಯಿತಿ ನಿಧಿಯಡಿ ಪರಿಶಿಷ್ಟ ಜಾತಿ ಜನಾಂಗದವರಿಗೆ ಶೌಚಾಲಯ ನಿರ್ಮಿಸಲು ಸಹಾಯಧನವನ್ನು ನೀಡಲಾಗುವುದು. ಬಿಇ, ಎಂಬಿಬಿಎಸ್ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಸಲು ಸಹಾಯಧನ, ಪರಿಶಿಷ್ಟ ಪಂಗಡದವರಿಗೆ ನೋಂದಾಯಿತ ಚಾಲನಾ ತರಬೇತಿ ಸಂಸ್ಥೆಗಳಿಂದ ಲಘು ವಾಹನ ಚಾಲನೆ ತರಬೇತಿ ಹಾಗೂ ವಿದ್ಯಾರ್ಥಿಗಳಿಗೆ ಮತ್ತು ಹಿಂದುಳಿದ ಜನರ ವಿದ್ಯಾವಂತ ನಿರುದ್ಯೋಗಿಗಳಿಗೆ ನೋಂದಾಯಿತ ಚಾಲನಾ ತರಬೇತಿ ಸಂಸ್ಥೆಗಳಿಂದ ಲಘು ವಾಹನ ತರಬೇತಿ ನೀಡಲಾಗುವುದು. ವಿಶೇಷಚೇತನರ ಕಲ್ಯಾಣಕ್ಕಾಗಿ ಬ್ಯಾಂಕ್‌ಗಳ ಮೂಲಕ ಸಣ್ಣ ಉದ್ಯಮಿಗಳಿಗೆ ಸಹಾಯಧನ ವಿತರಿಸುವುದು. ಆರೋಗ್ಯ ಯೋಜನೆಯ ವಾರ್ಷಿಕ ಪ್ರೀಮಿಯಂ ಕಂತುಗಳನ್ನು ವಿಶೇಷಚೇತನರಿಗೆ ಮಾಡಿಸುವುದು ಮತ್ತು ವಿವಿಧ ವೈಯಕ್ತಿಕ ಸೌಲಭ್ಯ ಕಲ್ಪಿಸುವ ಉದ್ದೇಶಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಸಂಬಂಧಿತ ದಾಖಲೆಗಳೊಂದಿಗೆ ಆ.30ರೊಳಗೆ ಅರ್ಜಿಗಳನ್ನು ಸಲ್ಲಿಸುವಂತೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶೇಷಾದ್ರಿಪುರಂ ಕಾಲೇಜಲ್ಲಿ ವಿದ್ಯಾರ್ಥಿಗಳ ಕಲರವ





ಮೈಸೂರು, ಜು.19– ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿಪೂರ್ವ ಕಾಲೇಜಿನಲ್ಲಿ ಮೂರು ದಿನಗಳ ಕಾಲ 'ಕಲರವ' ವಿದ್ಯಾರ್ಥಿಗಳ ಪ್ರತಿಭೆ ಅನಾವರಣ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರು ಆಕಾಶವಾಣಿಯ ಉದ್ಘೋಷಕರಾದ ಅಬ್ದುಲ್ ರಷಿದ್ ಕಾರ್ಯಕ್ರಮ ಉದ್ಘಾಟಿಸಿ ಹೇಗೆ ನಮ್ಮ ಪ್ರತಿಭೆಗಳನ್ನು ಅನಾವರಣ ಮಾಡಬೇಕು ಎಂಬುದನ್ನು ವಿದ್ಯಾರ್ಥಿಗಳಿಗೆ ಕಥೆಯೊಂದರ ಮುಖಾಂತರ ತಿಳಿಸಿಕೊಟ್ಟರು. ನಂತರ ಮಕ್ಕಳಿಗೆ ವಿವಿಧ ಸ್ಪರ್ಧೆಗಳಾದ ಹಾಡುಗಾರಿಕೆ, ಚರ್ಚಾಸ್ಪರ್ಧೆ, ಹೂ ಕುಂದ ರಚನೆ, ಹೂ ಮುಖಾಂತರ ರಂಗೋಲಿ ಸ್ಪರ್ಧೆ, ಮುಖಕ್ಕೆ ಬಣ್ಣ ಹಚ್ಚುವುದು, ಕೇಶ ಶೃಂಗಾರ, ಪೋಸ್ಟರ್ ಮೇಕಿಂಗ್, ಹಾಗೂ ನೃತ್ಯ ಪ್ರದರ್ಶನ ಸ್ಪರ್ಧೆಗಳನ್ನು ಮೂರು ದಿನಗಳ ಕಾಲ ಹಮ್ಮಿಕೊಳ್ಳಲಾಗಿತ್ತು. ಈ ಸ್ಪರ್ಧೆಗಳ ತೀರ್ಪುಗಾರರಾಗಿ ವಿವಿಧ ಶಾಲಾ ಕಾಲೇಜಿನ ಉಪನ್ಯಾಸಕರು ಆಗಮಿಸಿದ್ದರು. ಕೊನೆಯ ದಿನ ವಿದ್ಯಾರ್ಥಿಗಳಿಗೆ ಬಹುಮಾನ ಪಡೆದವರ ಹೆಸರನ್ನು ಸೂಚಿಸಲಾಯಿತು.

ಕಾಲೇಜಿನ ಪ್ರಾಂಶುಪಾಲರಾದ ಅರ್ಚನ ಸ್ವಾಮಿ, ಕಾಲೇಜಿನ ಉಪನ್ಯಾಸಕರು, ವಿದ್ಯಾರ್ಥಿಗಳು ಹಾಜರಿದ್ದರು.



ಇನ್ನರ್ ವ್ಹೀಲ್ ಕ್ಲಬ್ ಮೈಸೂರು ಆಗ್ನೇಯದ 2023–24ನೇ ಸಾಲಿನ ನೂತನ ಪದಾಧಿಕಾರಿಗಳ ಸಮಾರಂಭ ಮೈಸೂರು ಜಯನಗರದ ಶುಭಾಂಗಿ ಭವನದಲ್ಲಿ ಇತ್ತೀಚೆಗೆ ನಡೆಯಿತು. ಚಿತ್ರದಲ್ಲಿ ಕುಳಿತವರು (ಎಡದಿಂದ) ನಿಕಟಪೂರ್ವ ಅಧ್ಯಕ್ಷೆ ವೀಣಾ ರವೀಂದ್ರ, ಜಿಲ್ಲಾ ಘಟಕದ ಮಾಜಿ ಛೇರ್ಮನ್ ರಾಜೇಶ್ವರಿಗೌಡ, ಅಧ್ಯಕ್ಷೆ ಮೇಘ್ನ ಗುರುರಾಜ್, ಕಾರ್ಯದರ್ಶಿ ಶ್ರೀಲಕ್ಷ್ಮಿ ವಾಸುದೇವನ್, ಜಿಲ್ಲಾ ಎಡಿಟರ್ ಉಮಾ ಮಹೇಶ್, ಜಿಲ್ಲಾ ಐಎಸ್‌ಓ ಅನಿತಾ ಸುರೇಶ್, ನಿಂತವರು (ಎಡದಿಂದ) ಕಮಿಟಿ ಸದಸ್ಯೆ ಶೈಲಶ್ರೀ ಜ್ಞಾನಶಂಕರ್, ಉಪಾಧ್ಯಕ್ಷೆ ಗೀತಾ ವಿಶ್ವನಾಥ್, ಜಂಟಿ ಕಾರ್ಯದರ್ಶಿ ಲಲಿತಾ ರಂಗನಾಥ್, ಖಜಾಂಚಿ ಸರಳ ಕೇಶವಮೂರ್ತಿ, ಸಂಪಾದಕಿ ವೀಣಾ ಎಸ್.ಎ. ಮತ್ತು ಐಎಸ್‌ಓ ಸೀಮಾ ಮರಿಸ್ವಾಮಿ ಇದ್ದಾರೆ.

ಅಕ್ರಮ ಗಾಂಜಾ ಮಾರಾಟ: ಆರೋಪಿ ಬಂಧನ

ಮೈಸೂರು, ಜು.19(ಎಸ್‌ಪಿಎನ್)– ಅಕ್ರಮ ಗಾಂಜಾ ಮಾರಾಟ ಮಾಡುತ್ತಿದ್ದ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಅಕ್ರಮವಾಗಿ ಮಾರಾಟ ಮಾಡಲು ಗಾಂಜಾ ಸಾಗಾಣಿಕೆ ಮಾಡುತ್ತಿದ್ದ ಓರ್ವ ಆರೋಪಿಯನ್ನು ಸಾತಗಳ್ಳಿ ಗ್ರಾಮದ ಬಳಿ ವಶಕ್ಕೆ ಪಡೆದಿದ್ದು, ಒಂದು ಕೆಜಿ 555 ಗ್ರಾಂ ತೂಕದ ಗಾಂಜಾ ವಶಕ್ಕೆ ಪಡೆದಿದ್ದಾರೆ.

ಮೈಸೂರು ಜಿಲ್ಲಾ ಪೊಲೀಸ್ ಸೆನ್ (ಸೈಬರ್ ಕ್ರೈಂ ಠಾಣೆ) ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಪುರುಷೋತ್ತಮ್ ಮತ್ತು ಅವರ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ವ್ಯಕ್ತಿಯನ್ನು ವಶಕ್ಕೆ ಪಡೆದರು. ಈ ಕೃತ್ಯಕ್ಕೆ ಬಳಸಿದ್ದ ಹೋಂಡಾ ಆಕ್ಟಿವಾ ಸ್ಕೂಟರ್ ಅನ್ನು ವಶಪಡಿಸಿಕೊಂಡಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ತನಿಖೆ ಮುಂದುವರೆಸಲಾಗಿದೆ. ಈ ಪತ್ತೆ ಕಾರ್ಯದಲ್ಲಿ ಭಾಗಿಯಾಗಿದ್ದ ಪೊಲೀಸರಿಗೆ ಪೊಲೀಸ್ ಅಧೀಕ್ಷಕರಾದ ಸೀಮಾಲಾಟ್ಕರ್ ಶ್ಲಾಘಿಸಿದ್ದಾರೆ.

ಉಪ ಕಾರಾಗೃಹಕ್ಕೆ ಡಿಎಸ್‌ಪಿ ಭೇಟಿ: ಪೊಲೀಸ್ ಅಧೀಕ್ಷಕರ ಸೂಚನೆಯಂತೆ ಮೈಸೂರು ಗ್ರಾಮಾಂತರ ಉಪವಿಭಾಗದ ಡಿಎಸ್‌ಪಿ ಪೂರ್ಣ ಚಂದ್ರತೇಜಸ್ವಿ ಅವರು ಜು.18ರಂದು ರಾತ್ರಿ 7.30ಕ್ಕೆ ಕೆ.ಆರ್. ನಗರ ಉಪಕಾರಾಗೃಹಕ್ಕೆ ಅನಿರೀಕ್ಷಿತವಾಗಿ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಜು.23ರಂದು ಸಂತೆ, ಜಾತ್ರೆ ನಿಷೇಧ

ಮೈಸೂರು,ಜು.19–ಗ್ರಾಮ ಪಂಚಾಯತ್ ಉಪಚುನಾವಣೆ–2023ರ ಮತದಾನದ ಸಂಬಂಧ ಜಿಲ್ಲೆಯ ವ್ಯಾಪ್ತಿಯಲ್ಲಿ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಮತ್ತು ಶಾಂತಿಯುತವಾಗಿ ಮತದಾನ ನಡೆಸುವ ಸಂಬಂಧ ನಂಜನಗೂಡು ತಾಲೂಕಿನ ದೇವನೂರು, ದೇವರಾಯಶೆಟ್ಟಿ, ನರಸೀಪುರ ತಾಲೂಕಿನ ಹೆಮ್ಮಿಗೆ, ಹುಣಸೂರು ತಾಲೂಕಿನ ಜಾಬಗೆರೆ, ತಟ್ಟೆಕೆರೆ, ಕಟ್ಟೆಮನುಗನಹಳ್ಳಿ, ಕೃಷ್ಣರಾಜನಗರ ತಾಲೂಕಿನ ಹಂಪಾಪುರ, ಹೆಚ್.ಡಿ.ಕೋಟೆ ತಾಲೂಕಿನ ಮಾದಾಪುರ, ಎನ್.ಬೇಗೂರು ಗ್ರಾಪಂ ವ್ಯಾಪ್ತಿಗಳಲ್ಲಿ ಜು.22ರ ಮಧ್ಯರಾತ್ರಿ 12ರಿಂದ ಜು.23ರ ಮಧ್ಯರಾತ್ರಿ 12ರವರೆಗೆ ವಿಧದ ಸಂತೆ ಜಾತ್ರೆಗಳನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ.

ಜು.28ರಂದು ಕೈಗಾರಿಕಾ ಸ್ಪಂದನಾ ಸಭೆ

ಮೈಸೂರು,ಜು.19–ಜು.28ರಂದು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೈಗಾರಿಕಾ ಸ್ಪಂದನಾ ಸಭೆಯನ್ನು ಏರ್ಪಡಿಸಿದ್ದು, ಕೈಗಾರಿಕೋದ್ಯಮಿಗಳು ತಮ್ಮ ಘಟಕಕ್ಕೆ ಸಂಬಂಧಪಟ್ಟಂತೆ ಸಮಸ್ಯೆಗಳಿದ್ದಲ್ಲಿ ದಾಖಲೆ ಸಮೇತ ಜು.25ರೊಳಗೆ ಜಿಲ್ಲಾ ಕೈಗಾರಿಕಾ ಕೇಂದ್ರ ಕಚೇರಿಗೆ ಪತ್ರವನ್ನು ಸಲ್ಲಿಸುವಂತೆ ಪ್ರಕಟಣೆ ತಿಳಿಸಿದೆ.

ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಜು.19–2023–24ನೇ ಸಾಲಿನ ಶಿಕ್ಷಕರ ದಿನಾಚರಣೆ ಅಂಗವಾಗಿ ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಾಗಿ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲಾ ಶಿಕ್ಷಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಶಿಕ್ಷಕರು ಅರ್ಜಿ ಸಲ್ಲಿಸಲು ಆ.7 ಕೊನೆ ದಿನ ಎಂದು ನರಸೀಪುರ ಕ್ಷೇತ್ರ ಶಿಕ್ಷಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಕೊನೆ ಆಷಾಢ ಶುಕ್ರವಾರದಂದು ತಾಯಿ ಶ್ರೀ ಚಾಮುಂಡೇಶ್ವರಿ ಪೂಜಾ ಕಾರ್ಯಕ್ರಮದ ಅಂಗವಾಗಿ ಮೈಸೂರು ವಿಜಯನಗರ 2ನೇ ಹಂತ ರೈಲ್ವೆ ಕಾಲೋನಿಯ ಜಗದಾಂಬ ಶ್ರೀ ಆದಿಶಕ್ತಿ ದೇವಸ್ಥಾನದಲ್ಲಿ ಕಾಲೋನಿಯ ಅತೀ ಹೆಚ್ಚು ಅಂಕವನ್ನು ಪಡೆದ ವಿದ್ಯಾರ್ಥಿಗಳಿಗೆ ಶಾಲಾ ಪುಸ್ತಕ ಹಾಗೂ ಬ್ಯಾಗನ್ನು ವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಚಲನಚಿತ್ರ ಹಿರಿಯ ನಟರಾದ ಮೈಸೂರು ಲೋಕೇಶ್ ಅವರ ಪತ್ನಿ ಶ್ರೀಮತಿ ಪಾರ್ವತಿ, ಬಿಜೆಪಿ ಹಿರಿಯ ಮುಖಂಡ ಎಸ್.ಜಯಪ್ರಕಾಶ್, ಚೇತನ್, ರಮೇಶ್, ಮಹೇಶನಾಯಕ, ಹನುಮಂತೇಗೌಡ ಮತ್ತಿತರರು ಹಾಜರಿದ್ದರು.

ಎಪಿಎಂಸಿ ತಿದ್ದುಪಡಿ ಕಾಯ್ದೆ ರದ್ದು: ಹಿಂದಿನ ಕಾಯ್ದೆ ಜಾರಿ ನಿರ್ಧಾರ ಸ್ವಾಗತಿಸಿದ ರೈತಸಂಘ

ಮೈಸೂರು, ಜು.19(ಎಂಕೆ)– ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಎಪಿಎಂಸಿ ತಿದ್ದುಪಡಿ ಕಾಯ್ದೆ–2020 ಅನ್ನು ರದ್ದುಪಡಿಸಿ ಹಿಂದಿನ ಕಾಯ್ದೆ ಜಾರಿ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರದ ಕ್ರಮವನ್ನು ಕರ್ನಾಟಕ ರಾಜ್ಯ ರೈತಸಂಘ ಸ್ವಾಗತಿಸಿದೆ.

ರೈತಾಪಿ ಕೃಷಿ ನಾಶ ಮಾಡಿ, ಕಾರ್ಪೊರೇಟ್ ಕೃಷಿ ಉತ್ತೇಜಿಸುವ ಉದ್ದೇಶದಿಂದ ಜಾರಿಗೆ ತಂದಿದ್ದ ಕೇಂದ್ರ ಕೃಷಿ ಕಾಯ್ದೆಗಳು ರದ್ದಾದ ನಂತರವೂ ಅದೇ ಉದ್ದೇಶದ ರಾಜ್ಯ ಕೃಷಿ ಕಾಯ್ದೆಗಳು ಮುಂದುವರೆಸಿದ್ದನ್ನು ರಾಜ್ಯದ ರೈತರು ಪ್ರಬಲವಾಗಿ ವಿರೋಧಿಸಿದ್ದರು. ಕೃಷಿ ಬಿಕ್ಕಟ್ಟನ್ನು ತೀವ್ರಗೊಳಿಸುವ, ರಾಜ್ಯದ ರೈತರಿಗೆ ಬೆಂಬಲ ಬೆಲೆ ನಿರಾಕರಿಸುವ ವ್ಯಾಪಾರಿಗಳ ಮರ್ಜಿಗೆ ರೈತರನ್ನು ದಯನೀಯವಾಗಿ ನೂಕುವ ಎಪಿಎಂಸಿ ತಿದ್ದುಪಡಿ ಕಾಯ್ದೆ–2020 ರದ್ದತಿ ಐಕ್ಯ ಹೋರಾಟಕ್ಕೆ ಸಿಕ್ಕ ಜಯವಾಗಿದೆ.

ದುರ್ಬಲಗೊಂಡಿರುವ ಎಪಿಎಂಸಿಯನ್ನು ಬಲಪಡಿಸಲು ಹಾಗೂ ರೈತಸ್ನೇಹಿಯನ್ನಾಗಿಸಲು ಎಪಿಎಂಸಿ ಸೆಸ್ ಮೂಲಕ ಸಂಗ್ರಹವಾಗುವ ಆವರ್ತ ನಿಧಿಯನ್ನು ಸಮರ್ಥವಾಗಿ ರೈತರ ಹಿತ ರಕ್ಷಣೆಗೆ ಬಳಸಬೇಕು. ಉದಾರೀಕರಣ ನೀತಿಗಳ ಒತ್ತಡಕ್ಕೆ ಜಾರಿಗೆ ತಂದಿರುವ ಖಾಸಗಿ ಕಂಪನಿಗಳ ಪರವಾದ ಈ ಹಿಂದಿನ ತಿದ್ದಪಡಿಗಳಾದ ಆನ್‌ಲೈನ್ ಮಾರಾಟ, ಕೋಲ್ಡ್ ಸ್ಟೋರೇಜ್, ಹಣ್ಣು–ತರಕಾರಿ ಮಾರುಕಟ್ಟೆಯಲ್ಲಿ ಎಪಿಎಂಸಿಯನ್ನು ಬೈಪಾಸ್ ಮಾಡುವ ರೈತ ವಿರೋಧಿ ತಿದ್ದುಪಡಿಗಳು ಕೂಡ ರದ್ದಾಗಬೇಕು ಹಾಗೂ ನಾಯಿಕೊಡೆಗಳಂತೆ ತಲೆ ಎತ್ತಿರುವ ಖಾಸಗಿ ಕೃಷಿ ಮಾರುಕಟ್ಟೆಗಳಿಗೆ ಕಡಿವಾಣ ಹಾಕಿ ರೈತರ ಉತ್ಪನ್ನಗಳಿಗೆ ವೈಜ್ಞಾನಿಕ ಬೆಲೆ ನಿಗದಿ ಸಾಧ್ಯವಾಗದಿದ್ದರೂ ಕನಿಷ್ಠ ಡಾ.ಎಂ.ಎಸ್. ಸ್ವಾಮಿನಾಥನ್ ಆಯೋಗದ ವರದಿಯ ಶಿಫಾರಸ್ಸಿನಂತಾದರೂ ಕನಿಷ್ಠ ಬೆಂಬಲ ಬೆಲೆ ಸಿಗುವಂತಾಗಬೇಕು ಎಂದು ಸಂಘ ಆಗ್ರಹಿಸಿದೆ.

ಮನವಿ: ಹಾಗೆಯೇ ಉಳಿದ ರೈತ ವಿರೋಧಿ ಕೃಷಿ ಕಾಯ್ದೆಗಳಾದ ಕರ್ನಾಟಕ ರಾಜ್ಯ ಭೂ ಸುಧಾರಣಾ ತಿದ್ದುಪಡಿ ಕಾಯ್ದೆ–2020, ಕರ್ನಾಟಕ ಜಾನುವಾರು ಸಂರಕ್ಷಣಾ ಹಾಗೂ ಹತ್ಯೆ ನಿಷೇಧ ಕಾಯ್ದೆ–2020, ಕರ್ನಾಟಕ ರಾಜ್ಯ ಭೂ ಸ್ವಾಧೀನ ಕಾಯ್ದೆ–2019 ಅನ್ನು ಕೂಡ ರದ್ದುಪಡಿಸಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದ್ದು, ಹೋರಾಟಕ್ಕೆ ಸಹಕರಿಸಿದ ಎಲ್ಲರಿಗೂ ರಾಜ್ಯ ರೈತಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಗೌರವಾಧ್ಯಕ್ಷ ಚಾಮರಸ ಮಾಲೀ ಪಾಟೀಲ್, ಪ್ರಧಾನ ಕಾರ್ಯದರ್ಶಿ ರವಿಕಿರಣ್ ಪೂಣಚ್ಚ ಪತ್ರಿಕಾ ಪ್ರಕಟಣೆ ಮೂಲಕ ಧನ್ಯವಾದ ತಿಳಿಸಿದ್ದಾರೆ.

ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ



ಮೈಸೂರು, ಜು. 19– ಮೈಸೂರಿನ ಕಿರುರಂಗಮಂದಿರದಲ್ಲಿ ಬೆಂಗಳೂರಿನ ತಾಯ್ನಾಡು ಕನ್ನಡ ರಕ್ಷಣಾ ವೇದಿಕೆ ವತಿಯಿಂದ ನಡೆದ ರಾಜ್ಯಮಟ್ಟದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಂಗನಟ, ನಿರ್ದೇಶಕ, ಜಾನಪದ ಕಲಾವಿದ ಅಂಕರಾಜು ಎನ್. ಕೊಳ್ಳೇಗಾಲ, ರಂಗಭೂಮಿ ಕ್ಷೇತ್ರದಲ್ಲಿ ಸಲ್ಲಿಸಿರುವ ಗಣನೀಯ ಸೇವೆಯನ್ನು ಪರಿಗಣಿಸಿ, ಪ್ರಶಸ್ತಿ ನೀಡಿ ಗೌರವಿಸಲಾಯಿತು. ಜೊತೆಗೆ ರಾಜ್ಯದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 28 ಸಾಧಕರಿಗೂ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ಮಲ್ಲಿಕಾರ್ಜುನ ಸ್ವಾಮಿ, ಬಸವರಾಜಪ್ಪ, ಸಿದ್ದರಾಜು, ನಿರ್ಮಲ ಮಠಪತಿ, ಡಾ.ರಾಜೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಹಾರೋಹಳ್ಳಿಯ ವ್ಯಕ್ತಿ ನಾಪತ್ತೆ

ಮೈಸೂರು,ಜು.19– ಡಿ.ಶಿವಕುಮಾರ್ ಅವರ ಪುತ್ರ ಎಸ್.ಭರತ್‌ಕುಮಾರ್ (27) ಮೇ 30ರಂದು ಮೈಸೂರಿನ ಮೆಲ್ಲಹಳ್ಳಿ ಹಾಲಿನ ಡೈರಿ ಬಳಿ ಕಾಣೆಯಾಗಿದ್ದು, ವರುಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೂಲತಃ ಮೈಸೂರು ತಾಲೂಕಿನ ಹಾರೋಹಳ್ಳಿ ಗ್ರಾಮದ ನಿವಾಸಿಯಾಗಿದ್ದು, ದಪ್ಪ ದುಂಡುಮುಖ, ಗೋಧಿ ಮೈ ಬಣ್ಣವನ್ನು ಹೊಂದಿರುತ್ತಾರೆ. ವ್ಯಕ್ತಿ ಪತ್ತೆಯಾದಲ್ಲಿ ಮೈಸೂರು ಜಿಲ್ಲಾ ಕಂಟ್ರೋಲ್ ರೂಂ ದೂ.ಸಂ: 0821–2444800, ಪೊಲೀಸ್ ವರಿಷ್ಠಾಧಿಕಾರಿಗಳ ಕಚೇರಿ ದೂ.ಸಂ:0821–2520040 ಅಥವಾ ಮೈಸೂರು ವರುಣಾ ಪೊಲೀಸ್ ಠಾಣೆ ದೂ.ಸಂ. 0821–2594411 ಅನ್ನು ಸಂಪರ್ಕಿಸಬಹುದು ಎಂದು ವರುಣ ಪೊಲೀಸ್ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

20.7.2023 ಗುರುವಾರ, ಮಳೆ ನಕ್ಷತ್ರ: ಪುಷ್ಯ 06.07.2023ರಿಂದ 20.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಅಧಿಕ ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮಧುಮೇಹ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.
- **ಸಹರಾ ಆರ್ಟ್ ಅಂಡ್ ಕ್ರಾಫ್ಟ್:** ಶಾಪಿಂಗ್ ಫೆಸ್ಟಿವಲ್, ಹ್ಯಾಂಡಿಕ್ರಾಫ್ಟ್ ಅಂಡ್ ಹ್ಯಾಂಡ್‌ಲೂಮ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನ, ಜಿಲ್ಲಾಧಿಕಾರಿ ಕಚೇರಿ ಹಿಂಭಾಗ, ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ.
- **ಫೋಕಸ್ ಇನ್ಸ್‌ಟಿಟ್ಯೂಟ್:** ಉದ್ಘಾಟನಾ ಸಮಾರಂಭ, ಉದ್ಘಾಟನೆ: ಸಾಹಿತಿ ಬನ್ನೂರು ಕೆ.ರಾಜು, ಅಧ್ಯಕ್ಷತೆ: ನಗರಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಸಂಪನ್ಮೂಲ ವ್ಯಕ್ತಿ ಸದಾನಂದಮೂರ್ತಿ ಅವರಿಂದ ಅಧ್ಯಯನ ಕೌಶಲ್ಯಗಳು ಕುರಿತು ಭಾಷಣ, ಮುಖ್ಯ ಅತಿಥಿಗಳು: ನಟಿ ಸುಪ್ರೀತ್, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಎನ್.ಅನಂತ್, ಶಿವಸ್ವಾಮಿ, ಸ್ಥಳ: ಫೋಕಸ್ ಇನ್ಸ್‌ಟಿಟ್ಯೂಟ್, ಬೆಳಗ್ಗೆ 11.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 6.10ಕ್ಕೆ "ಒಂದೇ ಕಥೆ" ವಿವಿಧ ಮುಖ–ಬಾನುಲಿ ಸರಣೀ, ಪ್ರಸ್ತುತಿ–ಪ್ರಭುಸ್ವಾಮಿ ಮಳಿಮಠ, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ. ಕೆ.ಎಲ್.ಪ್ರಸನ್ನಾಕ್ಷಿ, 7.15 ಭಾವಗೀತೆ–ಮೈಸೂರು ಅನಂತಸ್ವಾಮಿ, ವೃಂದಗಾನ, 8.30 ಹಾಡು ಹೇಳಿದ ಕಥೆ, ಪ್ರಸ್ತುತಿ–ಮೈಸೂರು ಉಮೇಶ್, 8.40 ಪಂಪನ ಪೆಂಪು –ಪಂಪ ಭಾರತದ ನಾಟಕೀಯ ಸನ್ನಿವೇಶಗಳನ್ನಾಧರಿಸಿದ ಕಾರ್ಯಕ್ರಮ. ಪ್ರಸ್ತುತಿ–ಜಿ.ಶಾಂತಕುಮಾರ್, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಈ.ಗಾಯಿತ್ರಿ–ವೀಣಾವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ಎ.ಎನ್. ಶೀಲಾ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳುನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ –ಬಂಜೆತನ ಮತ್ತು ಅನುವಂಶೀಯತೆ ಕುರಿತು ಮಾತನಾಡುತ್ತಾರೆ. ಪ್ರೊ.ಸುತ್ತೂರು ಎಸ್.ಮಾಲಿನಿ, 5ಜಿ ತಂತ್ರಜ್ಞಾನ ಕುರಿತು ಮಾತನಾಡುತ್ತಾರೆ ಪಿ.ಚಂದ್ರಶೇಖರ್, ಪ್ರಸ್ತುತಿ–ಜಿ.ಶಾಂತಕುಮಾರ್, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ–ರೈತ ಉತ್ಪಾದಕ ಸಂಸ್ಥೆಗಳ ಅಭಿವೃದ್ಧಿಗೆ ನಬಾರ್ಡ್ ಯೋಜನೆಗಳನ್ನು ಕುರಿತು ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುವವರು–ಹರ್ಷಿತಾ ಮತ್ತು ಮಹೇಶ್ ಚಂದ್ರಗುರು, ಪ್ರಸ್ತುತಿ–ಎನ್.ಕೇಶವಮೂರ್ತಿ, 8.15 ಹಲೋ ಯುವವಾಣಿ –ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ವಿಶೇಷ ರಸಪ್ರಶ್ನೆ ಕಾರ್ಯಕ್ರಮ. ನಡೆಸಿ ಕೊಡುತ್ತಾರೆ ನಿವೇದಿತಾ ಎಚ್., 9.30 ಕನ್ನಡ ಭಾರತಿ, 10.00 ನಾಟಕ, 10.30 ಸವಿನೆನಪು

- **ಶ್ರೀರಾಮಕೃಷ್ಣ ಆಶ್ರಮ :** ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷ ಸ್ವಾಮಿ ಗೌತಮಾನಂದಜೀ ಮಹಾರಾಜ್ ಅವರಿಂದ ವಿಶೇಷ ಪ್ರವಚನ, ಆಶೀರ್ವಚನ, ಸ್ಥಳ: ಆಶ್ರಮದ ಆವರಣ, ಯಾದವಗಿರಿ, ಸಂಜೆ 6ಕ್ಕೆ.
- **ಚಿನ್ಮಯ ಮಿಷನ್ :** ವಿದ್ವಾನ್ ಕೃಷ್ಣರಾವ್ ಪ್ರಕಾಶ್ ಅವರಿಂದ ಪತಂಜಲಿಯ ಯೋಗ ಸೂತ್ರಗಳು–ಸಮಾಧಿ ಪಾದ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿನ್ಮಯ ಮಿಷನ್, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮಾನವಿಕ ವಿಭಾಗದ ವಿದ್ಯಾರ್ಥಿಗಳು ಇಂಗ್ಲಿಷ್ ಕಲಿಕೆಗೆ ಆದ್ಯತೆ ನೀಡಬೇಕು



ಮೈಸೂರು, ಜು.19(ಎಸ್‌ಪಿಎನ್)– ಇಂಗ್ಲಿಷ್ ಕಲಿಕೆಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಪ್ರಯತ್ನಿಸಬೇಕು. ಮುಂದೆ ವೃತ್ತಿ ಜೀವನದಲ್ಲಿ ಇಂಗ್ಲಿಷ್ ಭಾಷಾ ಕಲಿಕೆ ನೆರವಿಗೆ ಬರುತ್ತದೆ ಎಂದು ಮೈಸೂರು ವಿವಿ ಮಾನಸಗಂಗೋತ್ರಿಯ ಲಲಿತಕಲೆಗಳ ಕಾಲೇಜು ಪ್ರಾಂಶುಪಾಲರಾದ ಪ್ರೊ.ಅನಿಟಾ ವಿಮಲಾ ಬ್ರ್ಯಾಗ್ಸ್ ಅಭಿಪ್ರಾಯಪಟ್ಟರು.

ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು ಆವರಣದಲ್ಲಿ ಪಠ್ಯೇತರ ಚಟುವಟಿಕೆಗಳ ಸಮಿತಿ–2023ರ ಸಾಂಸ್ಕೃತಿಕ ಚಟುವಟಿಕೆ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರಂಭದಲ್ಲಿ ಮಾತನಾಡಿದರು.

ನಾನು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ನಮಗೆ ಐದನೇ ತರಗತಿಯಿಂದ ಇಂಗ್ಲಿಷ್ ಕಲಿಕೆ ಇತ್ತು. ಈಗಿನ ಸಂದರ್ಭದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಆಮೂಲಾಗ್ರ ಬದಲಾವಣೆಯಾಗುತ್ತಿದೆ. ಗ್ರಾಮೀಣ ಪ್ರದೇಶ ಮಕ್ಕಳಿಗೆ ಅದರಲ್ಲೂ ಮಾನವಿಕ ವಿಭಾಗದ ವಿದ್ಯಾರ್ಥಿಗಳು ಇಂಗ್ಲಿಷ್ ಜೊತೆಗೆ ಇತರೆ ಭಾಷೆಯ ಕಲಿಕೆಗೂ ಹೆಚ್ಚಿನ ಆದ್ಯತೆ ನೀಡಿದರೆ ಒಳಿತು ಎಂದು ತಿಳಿಸಿದರು.

ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ.ಎಚ್.ಸೋಮಶೇಖರಪ್ಪ ಮಾತನಾಡಿ, ಸಂಜೆ ಕಾಲೇಜಿನ ವಿದ್ಯಾರ್ಥಿಗಳು ಬೆಳಗ್ಗೆ ಬೇರೆಡೆ ಕೆಲಸ ಮಾಡಿ, ಸಂಜೆ ಕಲಿಕೆಗೆ ಆಸಕ್ತಿಯಿಂದ ಬರುತ್ತಾರೆ. ತಮಗೆ ಸಿಗುವ ಬಿಡುವಿನ ವೇಳೆ ಸಾಂಸ್ಕೃತಿಕ ಚಟುವಟಿಕೆ, ಎನ್‌ಎಸ್‌ಎಸ್ ಅಂತಹ ಚಟುವಟಿಕೆಗಳಲ್ಲಿ ಭಾಗವಹಿಸುವುದು ಉತ್ತಮ ಸಂಗತಿ ಎಂದು ತಿಳಿಸಿದರು.

ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಅನಸ್ ಬಿನ್ ಖಲೀಲ್, ಸೈಯದ್ ಶಬೀರ್ ಅಹ್ಮದ್, ಎಸ್.ಶಿವು, ಎಂ.ರಜನಿ, ವಿ.ವರುಣ್, ಎಂ.ದರ್ಶನ್ ಕುಮಾರ್, ಎಂ.ಲಲಿತ, ವಿ.ಮೋನಿಕಾ, ಸಿ.ಎಸ್.ದರ್ಶನ್, ರಕ್ಷಿತ್ ನಾರಾಯಣ್, ಶಿವಕುಮಾರ್, ವೇದಮೂರ್ತಿ, ಕಿರಣ್, ಚೇತನ್ ಭಾರದ್ವಜ್, ಎಂ.ಡಿ.ಸ್ವಾತಿ, ಎಂ.ವಿ.ಅಮಿತ್, ಎನ್.ಜೀವನ್, ಪಿ.ಯಮುನೇಶ್, ದರ್ಶನ್ ಅವರಿಗೆ ಪ್ರಮಾಣ ಪತ್ರ ನೀಡಿ, ಗೌರವಿಸಲಾಯಿತು. ವಿವಿ ಸಂಜೆ ಕಾಲೇಜು ಕನ್ನಡ ವಿಭಾಗದ ಪ್ರಾಧ್ಯಾಪಕಿ ಡಾ.ಸೌಭಾಗ್ಯವತಿ, ಡಾ.ಪವಮಾನ, ಡಾ.ವಿಜಯ ಕುಮಾರ್, ಡಾ.ಸಿ.ಡಿ.ಪರಶುರಾಮ್, ಪಠ್ಯೇತರ ಚಟುವಟಿಕೆಗಳ ಸಮಿತಿ ಸಂಚಾಲಕ ಡಾ.ನಿಂಗರಾಜು ಹಳೇಬೀಡು ಉಪಸ್ಥಿತರಿದ್ದರು. ಈ ವೇಳೆ ಮೈಸೂರು ಆಕಾಶವಾಣಿ ಎ ಗ್ರೇಡ್ ಕಲಾವಿದರಾದ ಡಾ.ಮೈಸೂರು ಗುರುರಾಜ್ ಇದ್ದರು.



ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಬುಧವಾರ ಭೇಟಿ ನೀಡಿದ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಆಶೀರ್ವಾದ ಪಡೆದರು. ಅವರೊಂದಿಗೆ ದಶರಥ ರೈ ಸೇರಿದಂತೆ ಎಸ್‌ಜೆಸಿಇ ಸಹಪಾಠಿಗಳು ಇದ್ದರು.

ವಿಪಕ್ಷಗಳ ಮೈತ್ರಿಕೂಟಕ್ಕೆ ಟ್ಯಾಗ್ ಲೈನ್ 'ಜೀತೇಗಾ ಭಾರತ್'

ನವದೆಹಲಿ: 2024ರ ಲೋಕಸಭೆ ಚುನಾವಣೆಗೆ ಮುನ್ನುಡಿಯಾಗಿ ರಾಷ್ಟ್ರ ಮಟ್ಟದಲ್ಲಿ ವಿರೋಧ ಪಕ್ಷಗಳು ತಮ್ಮ ಮೈತ್ರಿಕೂಟಕ್ಕೆ 'ಇಂಡಿಯಾ' ಹೆಸರನ್ನು ಘೋಷಿಸಿದ ಒಂದು ದಿನದ ನಂತರ, 'ಜೀತೇಗಾ ಭಾರತ್' ಎಂಬ ಅಡಿಬರಹವನ್ನು ಶೀರ್ಷಿಕೆಗೆ ನೀಡಿದ್ದಾರೆ. ನಿನ್ನೆ ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ, ಮೈತ್ರಿ ಹೆಸರಿನಲ್ಲಿ "ಭಾರತ್" ಎಂಬ ಪದ ಒಳಗೊಂಡಿರಬೇಕು ಎಂದು ಹಲವಾರು ನಾಯಕರು ಅಭಿಪ್ರಾಯಪಟ್ಟರು. ಅದನ್ನು ಅಡಿಬರಹವಾಗಿ ನೀಡಬಹುದು ಎಂದು ನಾಯಕರೊಬ್ಬರು ಸಲಹೆ ನೀಡಿದರು. ಟ್ಯಾಗ್‌ಲೈನ್ ಹಲವಾರು ನಾಯಕರ ಜಂಟಿ ಪ್ರಯತ್ನದ ಫಲಿತಾಂಶವಾಗಿದೆ ಎಂದು ಒತ್ತಿ ಹೇಳಿದರು.

ನವೋದಯ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಮೈಸೂರು: ಡಿ.ಎಂ.ಜಿ.ಹಳ್ಳಿಯಲ್ಲಿರುವ ಜವಾಹರ್ ನವೋದಯ ವಿದ್ಯಾಲಯಕ್ಕೆ 6ನೇ ತರಗತಿಗಾಗಿ 2024–25ರ ಶೈಕ್ಷಣಿಕ ವರ್ಷದ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದ್ದು, 2023–24ನೇ ಸಾಲಿನ 3 ಮತ್ತು 4ನೇ ತರಗತಿಗಳನ್ನು ಸರ್ಕಾರಿ ಅಥವಾ ಸರ್ಕಾರಿ ಮಾನ್ಯತೆ ಪಡೆದಿರುವ ಶಾಲೆಯಲ್ಲಿ ಓದಿರಬೇಕು. ವಿದ್ಯಾರ್ಥಿಯು 2012ರ ಮೇ1ರಿಂದ 2014ರ ಜುಲೈ 31ರೊಳಗೆ ಜನಿಸಿರಬೇಕು. ಆಸಕ್ತರು www.navoda ya.gov.in ಅಥವಾ https://navodaya.gov.in/nvs/nvs-school/MYSURU/en/contact-us/JNV ಮೂಲಕ ಅರ್ಜಿ ಆ.10ರೊಳಗೆ ಅರ್ಜಿ ಸಲ್ಲಿಸು ವುದು. 2024ರ ಜನವರಿ 20ರಂದು ಪರೀಕ್ಷೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ ದೂ.ಸಂ.0821–2970040 ಸಂಪರ್ಕಿಸಬಹುದು.

ನಿಧನ

ಪೈಲ್ವಾನ್ ಭೈರವ



ಮೈಸೂರಿನ ಪಡುವಾರಹಳ್ಳಿ ನಿವಾಸಿಯಾದ ಪೈಲ್ವಾನ್ ಕ್ಲಾಸಿಕ್ ಭೈರವ (45) ಅವರು ಮಂಗಳವಾರ ನಿಧನರಾದರು.

ಮೃತರು ಪತ್ನಿ ಲಕ್ಷ್ಮಿ, ಪುತ್ರ ವರುಣ್, ಪುತ್ರಿ ಅಮೂಲ್ಯ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ ಗೋಕುಲಂನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಮೂಲಗಳು ತಿಳಿಸಿವೆ.

ಬಿ.ಆರ್.ಪ್ರಸನ್ನ



ಮೈಸೂರಿನ ತಪೋವನ ಸೋಲೆಸ್ ಸೀನಿಯರ್ ಲಿವಿಂಗ್ ಸೆಂಟರ್‌ನ ನಿವಾಸಿ ಬಿ.ಆರ್.ಪ್ರಸನ್ನ (90) ಅವರು ಸೋಮವಾರ ನಿಧನರಾದರು. ಮೃತರು ಪುತ್ರಿ ಮೀರಾ, ಪುತ್ರ ಬದರಿನಾಥ್, ಮೂವರು ಮೊಮ್ಮಕ್ಕಳು, ಸಂಬಂಧಿಕರು, ಅಪಾರ ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಜು.18ರಂದು ಚಾಮುಂಡಿಬೆಟ್ಟದ ತಪ್ಪಲಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆ.ಎಸ್.ತ್ಯಾಗರಾಜು



ಹುಣಸೂರು ತಾಲೂಕಿನ ಕಣಗಾಲು ಶಾಲೆ ಶಿಕ್ಷಕರಾಗಿದ್ದ ಕೆ.ಎಸ್.ತ್ಯಾಗರಾಜು (57) ಬುಧವಾರ ರಾತ್ರಿ ನಿಧನರಾದರು. ಮೃತರು ತಾಯಿ, ಪತ್ನಿ, ಮಂಜುಳ, ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಕೆ.ಆರ್.ನಗರ ತಾಲೂಕು ಕೆಸ್ತೂರುಕೊಪ್ಪಲಲ್ಲಿ ಗುರುವಾರ(ಜು.20) ಮಧ್ಯಾಹ್ನ 12 ಗಂಟೆಗೆ ನೆರವೇರಲಿದೆ ಎಂದು ಕುಟುಂಬ ವರ್ಗ ತಿಳಿಸಿವೆ.



ಆರ್.ಪಿ.ಜಗದೀಶ್
ಹಿರಿಯ ಪತ್ರಕರ್ತರು
ಮೊ: 9845048051

ಸಕಾಲಿಕ

ಮುಂಬರುವ ಲೋಕಸಭಾ ಚುನಾವಣೆಯಲ್ಲಿ NDA-INDIA ನಡುವೆ ಹಣಾಹಣಿ





ರಾಷ್ಟ್ರದ ಬಹುತೇಕ ವಿರೋಧ ಪಕ್ಷಗಳು ಒಂದಾಗಿ ಪರಸ್ಪರ 'ಕೈ'ಜೋಡಿಸಿ ಪ್ರಧಾನಿ ನರೇಂದ್ರ ಮೋದಿ (ಬಿಜೆಪಿ) ವಿರುದ್ಧ ಮಹಾಯುದ್ಧ ಸಾರಿವೆ. ಲೋಕಸಭಾ ಚುನಾವಣೆಗೆ ಮುನ್ನ ಪಂಚರಾಜ್ಯಗಳ ವಿಧಾನಸಭಾ ಚುನಾವಣೆ ಫಲಿತಾಂಶ ಹೊಸ ಸಂಘಟನೆಯಾದ ಇಂಡಿಯಾ (India)ಗೆ ಸವಾಲಾಗಿದೆ.

ಇಡೀ ದೇಶದಲ್ಲಿ ಕಂಗೆಟ್ಟು ನೆಲಕಚ್ಚಿದ್ದ ಕಾಂಗ್ರೆಸ್‌ಗೆ ಕರ್ನಾಟಕ ವಿಧಾನಸಭಾ ಚುನಾವಣಾ ಫಲಿತಾಂಶ ಹೊಸ ಚೈತನ್ಯ ತಂದಿದೆ. ರಾಹುಲ್ ಗಾಂಧಿಯ ಭಾರತ್ ಜೋಡೋ ಯಾತ್ರೆ, ರಾಜ್ಯ ಕಾಂಗ್ರೆಸ್ಸಿಗರ ಸಂಘಟನಾ ಹೋರಾಟ ಅವರಿಗೆ ಲಾಭವಾದರೆ, ಹೊಸಬರಿಗೆ ಮಣೆ ಹಾಕಿದ ಬಿಜೆಪಿಯವರ ಪ್ರಯೋಗ ಅವರಿಗೆ ಮುಳುವಾಯಿತು. ಇವೆಲ್ಲವು ಸೇರಿ ಕಾಂಗ್ರೆಸ್‌ಗೆ ರಾಜ್ಯದಲ್ಲಿ ಮತ್ತೆ 'ಆಕ್ಸಿಜನ್' ನೀಡಿದಂತಾಯಿತು.

ಅಧಿಕಾರರೂಢ ಪಕ್ಷ ಹಾಗೂ ಅದರ ನೇತಾರನ ವಿರುದ್ಧ ಸಂಘಟಿತ ಹೋರಾಟ ಮಾಡುವುದು ಪ್ರಜಾಪ್ರಭುತ್ವ ತತ್ವ ಸಿದ್ಧಾಂತಗಳಿಗೆ ಅನುಗುಣವಾಗಿಯೇ ಇದೆ. ಹೀಗಾಗಿಯೇ ಇಂಡಿಯಾ ಉದಯವಾಗಿದೆ.

ಈ ಹಿಂದೆ ದಿವಂಗತ ಪ್ರಧಾನಿ ಇಂದಿರಾ ಗಾಂಧಿಯವರ ಸರ್ವಾಧಿಕಾರಿ ಧೋರಣೆ ವಿರುದ್ಧ ಅಂದಿನ ವಿರೋಧ ಪಕ್ಷಗಳೆಲ್ಲಾ ಒಂದಾಗಿ ಸಂಘಟಿತ ಹೋರಾಟ ಮಾಡಿದ್ದ ನಿದರ್ಶನವಿದೆ. ಈಗ ಮೋದಿ ವಿರುದ್ಧ ಹೋರಾಟವೆಂದೇ ಜನ್ಮ ತಾಳಿದ ಇಂಡಿಯಾಗೆ ಬೆಂಗಳೂರು ವೇದಿಕೆಯಾಗಿದೆ. ಮತ್ತೊಮ್ಮೆ ಇತಿಹಾಸ ಸೃಷ್ಟಿಸಿದೆ. ಸುಮಾರು 26 ರಾಜಕೀಯ ಪಕ್ಷಗಳ ಮಹಾನಾಯಕರು ಸಿಲಿಕಾನ್ ವ್ಯಾಲಿಯೆಂಬ ಪ್ರಸಿದ್ಧವಾದ ನಗರದಲ್ಲಿ ಒಟ್ಟಿಗೆ ಸೇರಿದ್ದಾರೆ.

ಲೋಕಸಭಾ ಚುನಾವಣೆಗೆ ಒಂದು ವರ್ಷ ಮೊದಲೇ ತಯಾರಿ ನಡೆಸುತ್ತಿರುವುದು ಚುನಾವಣಾ ಸಂಘರ್ಷಕ್ಕೆ ನಾಂದಿ ಹಾಡಲಿದೆ. ಅಲ್ಲದೆ ಮುಂಬರುವ ಪಂಚರಾಜ್ಯಗಳ ಚುನಾವಣಾ ಫಲಿತಾಂಶಕ್ಕೂ ಇದು 'Acid Test' ಇದ್ದಂತಾಗಲಿದೆ. ಒಗ್ಗಟ್ಟಿನಲ್ಲಿ ಬಲವಿದೆ ಎಂಬುದು ಸಾಬೀತಾಗಬೇಕಿದೆ. ಕಾದು ನೋಡೋಣ.

ಕಾಂಗ್ರೆಸ್ ನೇತೃತ್ವದಲ್ಲಿ ನಡೆದ ಈ ಸಭೆಗೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನೂತನ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಸಾರಥ್ಯ ವಹಿಸಿದ್ದರು. ಇದರ ಯಶಸ್ಸಿನ ಪಾಲು ಮಾತ್ರ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್‌ಗೆ ಸಲ್ಲಲೇಬೇಕಿದೆ.

ಪ್ರಧಾನಿ ಮೋದಿ ಅವರೀಗ ವಿಶ್ವದ ಅಗ್ರಗಣ್ಯ ನಾಯಕ. ದೇಶ, ವಿದೇಶಗಳಲ್ಲಿ ಪ್ರವಾಸ ಮಾಡಿ ಅಗ್ರಗಣ್ಯರಿಂದ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇತ್ತೀಚೆಗೆ ಅವರಿಗೆ ಸರಿಸಾಟಿ ಇಲ್ಲದ ನಾಯಕನ ಬಿರುದು ಜೊತೆಗೆ ಬಹುತೇಕ ಎಲ್ಲಾ ರಾಷ್ಟ್ರಗಳು ಮೋದಿಯವರಿಗೆ ಕೆಂಪು ಹಾಸುವಿನ ಸ್ವಾಗತ ನೀಡಿ ಆ ದೇಶದ ಅತ್ಯಂತ ದೊಡ್ಡ ದೊಡ್ಡ ಪ್ರಶಸ್ತಿಗಳನ್ನು ಪ್ರದಾನ ಮಾಡಿರುವುದು ದೇಶದ ಹೆಮ್ಮೆಯ ಸಂಗತಿ.

> **ಎಲ್ಲರೂ–ಎಲ್ಲಾ ಪಕ್ಷಗಳೂ ಮಾಡಿದ್ದನ್ನೇ ನಾವೂ ಮಾಡಿದರೆ ತಪ್ಪೇನು ಎಂಬ ತರ್ಕಕ್ಕೆ ಕಾಂಗ್ರೆಸ್ ಬಿದ್ದಂತಿದೆ. ರಾಜಕಾರಣ ಹಾಗೂ ರಾಜಕೀಯದಲ್ಲಿ ಎಲ್ಲಾ ಲೆಕ್ಕವೂ ಸರಿಯೇ? 'ಇಂಡಿಯಾ' ಸ್ಥಾಪನೆ ವಿಚಾರದಲ್ಲಿ ಆರಂಭದಲ್ಲಿಯೇ ಅಪಶಕುನ ಇಲ್ಲವೇ ಅಪಸ್ವರ ಎತ್ತುವುದು ಸರಿಯಲ್ಲ. ಆದರೆ 26 ಪಕ್ಷಗಳ ನಾಯಕರನ್ನು ಒಂದು ಸರ್ಕಲ್‌ನಲ್ಲಿ ಕೂಡಿ ಹಾಕಿದ್ದು ಸೊನ್ನೆ ಅಥವಾ ಶೂನ್ಯವೆಂಬಂತೆ ಪ್ರಚಾರ ಮಾಡಿದ್ದು ಜನರ ಕೊಂಕು ಮಾತಿಗೆ ಇಂಬು ಕೊಟ್ಟಿದೆ. ಹಿಂದೆ ಒಬ್ಬ ಕಾಂಗ್ರೆಸ್ ಮಹಾಶಯ ಅಂದರೆ ಡಿ.ಕೆ.ಬರುವಾ, ಇಂದಿರಾ ಎಂದರೆ ಇಂಡಿಯಾ ಎಂದು 'ಮಾತೆ'ಯನ್ನು ಹೊಗಳಿದ್ದರು. ಅದು ನಗೆಪಾಟಲಿಗೆ ಗುರಿಯಾಗಿತ್ತು. ಈಗ ಈ 'ಸೊನ್ನೆ' ಶೂನ್ಯದ ಸಂಕೇತವೋ ಅಥವಾ ದೇಶದ ಪ್ರಗತಿಯ ದಿಕ್ಸೂಚಿಯೋ?**

ಹೀಗೆ ಇಂಡಿಯಾ–ಎನ್‌ಡಿಎ ಬಲಪ್ರದರ್ಶನಕ್ಕೆ ವೇದಿಕೆ ಸಜ್ಜುಗೊಳಿಸುತ್ತಿವೆ. ಬೆಂಗಳೂರಿನಲ್ಲಿ ವಿರೋಧ ಪಕ್ಷಗಳ ಸಭೆ ಮುಕ್ತಾಯವಾಗುತ್ತಿದ್ದಂತೆಯೇ ಅತ್ತ ದೆಹಲಿಯಲ್ಲಿ ಪ್ರಧಾನಿ ನೇತೃತ್ವದಲ್ಲಿ ಎನ್‌ಡಿಎ ಹಾಗೂ 38 ಮಿತ್ರಪಕ್ಷಗಳ ಮಹಾಸಭೆ ನಡೆದಿದೆ. ಮುಂದಿನ ಗುರಿ ಹಾಗೂ ಸಂಘಟನೆಗೆ ಒತ್ತು ಕೊಟ್ಟಿದೆ.

ಪೈಪೋಟಿ ಹೀಗಿರುವಾಗ ಇಂಡಿಯಾ ಸಂಘಟನೆಗೆ ಇನ್ನೂ ನಾಯಕನ ಆಯ್ಕೆ ಆಗಿಲ್ಲ. ಅಲ್ಲದೆ ಮುಂದಿನ ಪ್ರಧಾನಿ ಅಭ್ಯರ್ಥಿ ಯಾರು ಎಂಬುದು ಯಕ್ಷ ಪ್ರಶ್ನೆಯಾಗಿದೆ. ಮುಂದಿನ ದಿನಗಳಲ್ಲಿ ಈ ಎರಡೂ ನಿಗೂಢ ಪ್ರಶ್ನೆಗಳಿಗೆ ಉತ್ತರ ದೊರೆಯಬೇಕಿದೆ.

ಲೋಕಸಭಾ ಚುನಾವಣೆ ಹಾಗೂ ಈ ಹೊಸ ಸಂಘಟನೆಯ ಉದಯದ ಹಿನ್ನೆಲೆಯಲ್ಲಿ ಎಲ್ಲಾ ರಾಜ್ಯಗಳಲ್ಲೂ ಆಯಾರಾಂ–ಗಯಾರಾಂಗಳ ದರ್ಬಾರ್‌ಗೂ ನಾಂದಿ ಹಾಡಲಿದೆ. ಶಾಸಕರು ಬಿಕರಿಗೆ (sale) ನಿಂತವರಂತೆ ಪೈಪೋಟಿಯಲ್ಲಿ ಆಡಳಿತ ಪಕ್ಷಗಳತ್ತ ಮುನ್ನುಗ್ಗುತ್ತಿರುವ ಸೂಚನೆಗಳಿವೆ. ಉದಾ: ಕರ್ನಾಟಕದಲ್ಲಿ ಇನ್ನು ಐದು ವರ್ಷ ಕಾಯುವ ಬದಲು ಸಂಘಟಿತರಾಗಿ ಇಲ್ಲವೇ ಗುಂಪು ಗುಂಪಾಗಿ ಆಡಳಿತ ಪಕ್ಷ ಸೇರಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ದಾಪುಗಾಲು ಹಾಕುತ್ತಿದ್ದಾರೆ. ಆಳುವ ಪಕ್ಷದ ನಾಯಕರೂ ಇದಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ.

ಎಲ್ಲರೂ–ಎಲ್ಲಾ ಪಕ್ಷಗಳೂ ಮಾಡಿದ್ದನ್ನೇ ನಾವೂ ಮಾಡಿದರೆ ತಪ್ಪೇನು ಎಂಬ ತರ್ಕಕ್ಕೆ ಕಾಂಗ್ರೆಸ್ ಬಿದ್ದಂತಿದೆ. ರಾಜಕಾರಣ ಹಾಗೂ ರಾಜಕೀಯದಲ್ಲಿ ಎಲ್ಲಾ ಲೆಕ್ಕವೂ ಸರಿಯೇ?

'ಇಂಡಿಯಾ' ಸ್ಥಾಪನೆ ವಿಚಾರದಲ್ಲಿ ಆರಂಭದಲ್ಲಿಯೇ ಅಪಶಕುನ ಇಲ್ಲವೇ ಅಪಸ್ವರ ಎತ್ತುವುದು ಸರಿಯಲ್ಲ. ಆದರೆ 26 ಪಕ್ಷಗಳ ನಾಯಕರನ್ನು ಒಂದು ಸರ್ಕಲ್‌ನಲ್ಲಿ ಕೂಡಿ ಹಾಕಿದ್ದು ಸೊನ್ನೆ ಅಥವಾ ಶೂನ್ಯವೆಂಬಂತೆ ಪ್ರಚಾರ ಮಾಡಿದ್ದು ಜನರ ಕೊಂಕು ಮಾತಿಗೆ ಇಂಬು ಕೊಟ್ಟಿದೆ.

ಹಿಂದೆ ಒಬ್ಬ ಕಾಂಗ್ರೆಸ್ ಮಹಾಶಯ ಅಂದರೆ ಡಿ.ಕೆ.ಬರುವಾ, ಇಂದಿರಾ ಎಂದರೆ ಇಂಡಿಯಾ ಎಂದು 'ಮಾತೆ'ಯನ್ನು ಹೊಗಳಿದ್ದರು. ಅದು ನಗೆಪಾಟಲಿಗೆ ಗುರಿಯಾಗಿತ್ತು. ಈಗ ಈ 'ಸೊನ್ನೆ' ಶೂನ್ಯದ ಸಂಕೇತವೋ ಅಥವಾ ದೇಶದ ಪ್ರಗತಿಯ ದಿಕ್ಸೂಚಿಯೋ?

ಇನ್ನು ಪ್ರಧಾನಿ ನೇತೃತ್ವದ 38 ಪಕ್ಷಗಳ ನಾಯಕರ ಎನ್‌ಡಿಎ ತರಾತುರಿ ಸಭೆ ಸೇರಿ ಸಾಧಿಸಿದ್ದೇನು? ಇಂಡಿಯಾ ಸಭೆಯನ್ನು ಹೀಯ್ಯಾಳಿಸಿದ್ದನ್ನು ಬಿಟ್ಟರೆ ಮಾಡಿದ್ದೆಲ್ಲಾ ಕೇವಲ ಪ್ರಚಾರಕ್ಕಾಗಿ ಪೈಪೋಟಿ ಅಷ್ಟೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ವಿರೋಧ ಪಕ್ಷಗಳ ಪಾತ್ರವೂ ದೊಡ್ಡದು. ಬೇರೆ ದೇಶಗಳಲ್ಲಿ ಎರಡೇ ಪಕ್ಷಗಳ ಆಧಿಪತ್ಯ ಇರುತ್ತದೆ. ಅಂದರೆ ಆಡಳಿತ ವರ್ಸಸ್ ವಿರೋಧ ಪಕ್ಷ. ನಮ್ಮ ದೇಶ `Vividity in diversity'ಗೆ ಹೇಗೆ ಪ್ರಸಿದ್ಧಿ ಪಡೆದಿದೆಯೋ ಅದೇ ರೀತಿಯಲ್ಲಿ ಆಡಳಿತ ಪಕ್ಷಕ್ಕೂ ಕೆಲವು ಮಿತ್ರ ಪಕ್ಷಗಳು ಸಹಕಾರ ನೀಡಿ ಸರಕಾರ ನಡೆಸುತ್ತವೆ. ಹಾಗೆಯೇ ವಿರೋಧ ಪಕ್ಷಕ್ಕೂ ಉಳಿದ ಪಕ್ಷಗಳು ಸಹಾಯ ಹಸ್ತ ನೀಡಿ 'ಶಕ್ತಿ' ವೃದ್ಧಿಸಿಕೊಳ್ಳುವುದು ನಿರಂತರ ವಾಗಿ ನಡೆಯುತ್ತಲೇ ಇದೆ. ವಸ್ತುಸ್ಥಿತಿ ಹೀಗಿರುವಾಗ 'ಇಂಡಿಯಾ' ಅಣಕಿಸುವ ಹಕ್ಕು ಯಾರಿಗೂ ಇಲ್ಲ.

ಚೆಸ್ಕಾಂನಿಂದ ಅಸಮರ್ಪಕ ರೀತಿ ಯುಜಿ ಕೇಬಲ್ ಅಳವಡಿಕೆ; ಅಭಿವೃದ್ಧಿ ಕಾರ್ಯಕ್ಕೆ ಅಡ್ಡಿ

- ಚೆಸ್ಕಾಂ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ಮೇಯರ್ ಶಿವಕುಮಾರ್
- ಸ್ವಚ್ಛ ನಗರಿಗೆ ಅಪಚಾರವಾಗುವ ರೀತಿ ಜೋತು ಬಿದ್ದಿರುವ ಕೇಬಲ್‌ಗಳ ತೆರವಿಗೆ ಸೂಚನೆ
- ಕೇಬಲ್ ಅಳವಡಿಕೆಯಲ್ಲಿ ಸುರಕ್ಷತೆಗೆ ಆದ್ಯತೆ ನೀಡಲು ತಾಕೀತು



ಮೈಸೂರು, ಜು.19(ಎಂಕೆ)–ಮೈಸೂರು ನಗರದಲ್ಲಿ ಯುಜಿ (ಅಂಡರ್‌ಗ್ರೌಂಡ್)ವಿದ್ಯುತ್ ಕೇಬಲ್ ಉದ್ದೇಶ ಒಳ್ಳೆಯದೇ ಆಗಿದ್ದರೂ ಅವೈಜ್ಞಾನಿಕವಾಗಿ ಅಳವಡಿಸಲಾಗಿದೆ. ಇದರಿಂದ ಪಾಲಿಕೆಯ ಅಭಿವೃದ್ಧಿ ಕಾಮಗಾರಿಗಳಿಗೆ ತೊಂದರೆಯಾಗುತ್ತಿದೆ. ಕಾಮಗಾರಿ ವೇಳೆ ಯಾವುದೇ ಅನಾಹುತ, ಸಮಸ್ಯೆಗಳು ಉಂಟಾದರೂ ಅದರ ಸಂಪೂರ್ಣ ಜವಾಬ್ದಾರಿ ಚೆಸ್ಕಾಂನದ್ದೇ ಆಗಿರಲಿದೆ. ಇದಕ್ಕೆ ಚೆಸ್ಕಾಂ ಅಧಿಕಾರಿಗಳು ಸ್ಪಂದಿಸುವುದರ ಜೊತೆಗೆ ಎಲ್ಲೆಲ್ಲಿ ಯುಜಿ ವಿದ್ಯುತ್ ಕೇಬಲ್ ಅಳವಡಿಸಲಾಗಿದೆ ಎಂಬ ಸಂಪೂರ್ಣ ಮಾಹಿತಿಯನ್ನು ಕೂಡಲೇ ಪಾಲಿಕೆಗೆ ಒದಗಿಸಬೇಕು ಎಂದು ಮೇಯರ್ ಶಿವಕುಮಾರ್ ಸೇರಿದಂತೆ ಪಾಲಿಕೆ ಸದಸ್ಯರು ಪಟ್ಟು ಹಿಡಿದರು.

ನಗರಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಬುಧವಾರ 'ಯುಜಿ ವಿದ್ಯುತ್ ಅಳವಡಿಕೆಯಿಂದಾಗುತ್ತಿರುವ ತೊಂದರೆಗಳು ಹಾಗೂ ವಿದ್ಯುತ್ ಕಂಬಗಳಲ್ಲಿರುವ ಟಿಲಿಫೋನ್, ಟಿವಿ ಕೇಬಲ್ ತೆರವು' ಸಂಬಂಧ ಚೆಸ್ಕಾಂ ಅಧಿಕಾರಿ–ಸಿಬ್ಬಂದಿಯೊಂದಿಗೆ ನಡೆದ ಸಭೆಯಲ್ಲಿ ಪಾಲಿಕೆಯ ಅಭಿವೃದ್ಧಿ ಕಾಮಗಾರಿ ಆರಂಭಕ್ಕೂ ಮುನ್ನವೇ ಕಾಮಗಾರಿ ನಡೆಯುವ ಸ್ಥಳದಲ್ಲಿ ಯುಜಿ ವಿದ್ಯುತ್ ಕೇಬಲ್ ಹಾದು ಹೋಗಿದೆಯೇ ಇಲ್ಲವೇ ಎಂಬ ಖಚಿತ ಮಾಹಿತಿ ನೀಡುವ ಮೂಲಕ ಚೆಸ್ಕಾಂ ಅಧಿಕಾರಿಗಳು ಸಹಕರಿಸಬೇಕು. ಜೊತೆಗೆ ಯುಜಿ ಕೇಬಲ್ ಅಳವಡಿಕೆಯಲ್ಲಿ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು ಎಂದು ಚೆಸ್ಕಾಂ ಅಧಿಕಾರಿಗಳನ್ನು ಒತ್ತಾಯಿಸಲಾಯಿತು. ಸಭೆ ಆರಂಭದಲ್ಲಿ ಲೆಕ್ಕಪತ್ರಗಳಿಗಾಗಿ ಸ್ಥಾಯಿ ಸಮಿತಿ ಅಧ್ಯಕ್ಷ ರಮೇಶ್ ಮಾತನಾಡಿ, ಯುಜಿ ಕೇಬಲ್ ಅಳವಡಿಸುವ ಕಾಮಗಾರಿ ಆರಂಭದಿಂದಲೂ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿಲ್ಲ. ಯುಜಿಡಿ (ಒಳಚರಂಡಿ) ಮ್ಯಾನ್‌ಹೋಲ್, ನೀರಿನ ಪೈಪ್‌ಲೈನ್ ನಡುವೆಯೇ 11 ಕೆವಿ ಸಾಮರ್ಥ್ಯದ ಯುಜಿ ವಿದ್ಯುತ್ ಕೇಬಲ್ ಹಾದು ಹೋಗಿದೆ. ಸಂಪೂರ್ಣವಾಗಿ ಅವೈಜ್ಞಾನಿಕವಾಗಿ ಯುಜಿ ಕೇಬಲ್ ಅಳವಡಿಸಿರುವ ಹಿನ್ನೆಲೆಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಸಾಧ್ಯವಾಗುತ್ತಿಲ್ಲ. ಒಂದು ಸಣ್ಣ ಗುಂಡಿ ತೆಗೆದರೆ ಶಾರ್ಟ್ ಸರ್ಕ್ಯೂಟ್ ಉಂಟಾಗಿ ಬ್ಲಾಸ್ಟ್ ಆಗುತ್ತಿದ್ದು, ಈಗಾಗಲೇ ಐದಾರು ಕಡೆಗಳಲ್ಲಿ ಬ್ಲಾಸ್ಟ್ ಆಗಿದೆ. ಇದೇ ರೀತಿಯಾದರೆ ಯಾವ ಕಾಮಗಾರಿಗಳನ್ನು ನಡೆಸಲು ಸಾಧ್ಯವಿಲ್ಲ ಎಂದರು.

ನಂತರ ಪಾಲಿಕೆ ಸದಸ್ಯ ಬಿ.ವಿ.ಮಂಜುನಾಥ್ ಮಾತನಾಡಿ, ಯುಜಿ ಕೇಬಲ್ ಕಾಮಗಾರಿ ಹೆಸರಿನಲ್ಲಿ ಕೋಟ್ಯಂತರ ರೂ. ವಂಚಿಸಲಾಗಿದೆ. ಯುಜಿ ಕೇಬಲ್ ಅಳವಡಿಸಲು ಅನುಮತಿ ಪಡೆದಿರುವುದು ಎಲ್ಲೋ... ಅಳವಡಿಸಿರುವುದು ಇನ್ನೆಲ್ಲೋ... ಯುಜಿ ಕೇಬಲ್ ಯೋಜನೆಯ ಉದ್ದೇಶ ಈಡೇರಿಲ್ಲ ಎಂದರು. ಇದಕ್ಕೆ ದನಿಗೂಡಿಸಿದ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್, ಹಲವೆಡೆ ಯುಜಿ ಕೇಬಲ್ ಮೇಲ್ಭಾಗದಲ್ಲಿಯೇ ಹಾದು ಹೋಗಿವೆ. ಯುಜಿ ಕೇಬಲ್ ಹಾದು ಹೋಗಿರುವ ಮಾರ್ಗದಲ್ಲಿ ಮಾಹಿತಿ ಫಲಕಗಳಿಲ್ಲ. ಅಲ್ಲದೆ ಟ್ರಾನ್ಸ್‌ಫಾರ್ಮರ್‌ಗಳನ್ನು ಬಹುತೇಕ ಫುಟ್‌ಪಾತ್ ಮೇಲೆಯೆ ಅಳವಡಿಸಲಾಗಿದ್ದು, ತೆರವುಗೊಳಿಸುವ ಕಾರ್ಯ ಕೂಡಲೇ ಆಗಬೇಕು ಎಂದು ಒತ್ತಾಯಿಸಿದರು.

ಅವೈಜ್ಞಾನಿಕ ಅಳವಡಿಕೆ: ಮೇಯರ್ ಶಿವಕುಮಾರ್ ಮಾತನಾಡಿ, ಪಾಲಿಕೆ ವ್ಯಾಪ್ತಿಯಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಯುಜಿ ಕೇಬಲ್‌ನಿಂದ ತೊಂದರೆಯಾಗುತ್ತಿದೆ. ಸ್ವಚ್ಛ, ಪಾರಂಪರಿಕ, ಅರಮನೆ ನಗರಿ ಎಂದೆಲ್ಲಾ ಕರೆಯಲ್ಪಡುವ ಮೈಸೂರಿನಲ್ಲಿ ಅವೈಜ್ಞಾನಿಕವಾಗಿ ಯುಜಿ ಕೇಬಲ್ ಅಳವಡಿಸಲಾಗಿದೆ. 3 ಅಡಿ ಆಳದಲ್ಲಿ ಇರಬೇಕಾದ ಯುಜಿ ಕೇಬಲ್ ಒಂದು ಅಡಿ ಆಳದಲ್ಲೇ ಇದೆ. ಇದರಿಂದ ಅನಾಹುತಗಳ ಸಂಭವಿಸುವ ಸಾಧ್ಯತೆ ಹೆಚ್ಚಾಗಿದ್ದು, ಕೂಡಲೇ ಚೆಸ್ಕಾಂ ಎಚ್ಚೆತ್ತುಕೊಳ್ಳಬೇಕು. ಯುಜಿ ಕೇಬಲ್ ಅಳವಡಿಕೆಗೆ ಪಾಲಿಕೆ ಎಲ್ಲಾ ರೀತಿಯ ಸಹಕಾರ ನೀಡಿದ್ದು, ಯಾವುದೇ ತೊಂದರೆಯಾಗದಂತೆ ಚೆಸ್ಕಾಂ ನಿರ್ವಹಣೆ ಮಾಡಬೇಕು ಎಂದರು.

ಮಾಹಿತಿ ನೀಡಿ: ನಗರದಲ್ಲಿ ಎಲ್ಲೆಲ್ಲಿ ಯುಜಿ ಕೇಬಲ್ ಅಳವಡಿಸಲಾಗಿದೆ ಎಂಬ ಮಾಹಿತಿ ಹಾಗೂ ರೂಟ್ ಮ್ಯಾಪ್ ನೀಡಬೇಕು. ಈ ಮಾಹಿತಿಯನ್ನು ಪಾಲಿಕೆಯ ಎಲ್ಲಾ ವಲಯ ಕಚೇರಿಗಳಿಗೂ ನೀಡಲಾಗುವುದು. ಮ್ಯಾನ್‌ಹೋಲ್, ನೀರಿನ ಪೈಪ್‌ಲೈನ್ ಅಭಿವೃದ್ಧಿ ಕಾಮಗಾರಿ ಆರಂಭಿಸುವ ವೇಳೆ ಚೆಸ್ಕಾಂ ಅಧಿಕಾರಿಗಳು ಪೂರಕ ಮಾಹಿತಿ ನೀಡಿ ಸಹಕರಿಸಿದಷ್ಟೇ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯ ಎಂದು ಹೇಳಿದರು.

ಪರಿಶೀಲಿಸಿ ಕ್ರಮ: ಕಡೆಯಲ್ಲಿ ಮಾತನಾಡಿದ ಚೆಸ್ಕಾಂ ಎಂಡಿ ಸಿ.ಎನ್.ಶ್ರೀಧರ್, ಇತ್ತೀಚೆಗಷ್ಟೇ ಚೆಸ್ಕಾಂಗೆ ಬಂದಿದ್ದು, ಯುಜಿ ವಿದ್ಯುತ್ ಕೇಬಲ್ ಸಂಬಂಧ ಪೂರ್ಣ ಮಾಹಿತಿ ಪಡೆದು ಪರಿಶೀಲನೆ ನಡೆಸಿ, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು. ಈಗಾಗಲೇ ಯುಜಿ ಕೇಬಲ್ ಅಳವಡಿಕೆಯಿಂದಾಗಿರುವ ಹಾಗೂ ಪಾಲಿಕೆ ಸದಸ್ಯರಿಂದ ಬಂದಿರುವ ದೂರುಗಳನ್ನು ಪಟ್ಟಿ ಮಾಡಿಕೊಂಡಿದ್ದು, ಬಗೆಹರಿಸುವ ಪ್ರಯತ್ನ ಮಾಡಲಾಗುವುದು. ಒಟ್ಟಾರೆ ಜನರಿಗೆ ತೊಂದರೆಯಾಗುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಕೆಲಸ ಮಾಡಲಾಗುವುದು ಎಂದು ಭರವಸೆ ನೀಡಿದರು.

ಸ್ಕ್ಯಾನಿಂಗ್ ಯಂತ್ರಗಳನ್ನು ತರಿಸಿ: ಕಾಮಗಾರಿ ನಡೆಸುವ ಮುನ್ನವೇ ಯುಜಿ ವಿದ್ಯುತ್ ಕೇಬಲ್ ಎಲ್ಲಿ ಹಾದು ಹೋಗಿದೆ ಎಂಬುದನ್ನು ಪತ್ತೆ ಮಾಡುವ ಸ್ಕ್ಯಾನಿಂಗ್ ಯಂತ್ರಗಳನ್ನು ತರಿಸುವಂತೆ ಕೆಲ ಸದಸ್ಯರು ಮೇಯರ್ ಶಿವಕುಮಾರ್ ಅವರಲ್ಲಿ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಮೇಯರ್, ಸದ್ಯಕ್ಕೆ ಚೆಸ್ಕಾಂನವರೇ ಸ್ಪಂದಿಸುವ ಭರವಸೆ ನೀಡಿರುವುದರಿಂದ ಸ್ಕ್ಯಾನಿಂಗ್ ಯಂತ್ರಗಳನ್ನು ತರಿಸಬೇಕೆ, ಬೇಡವೇ ಎಂಬುದು ನಂತರ ನಿರ್ಧರಿಸಲಾಗುವುದು ಎಂದರು. ಸಭೆಯಲ್ಲಿ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ, ಉಪಮೇಯರ್ ಡಾ.ರೂಪ, ಹಣಕಾಸು ಸ್ಥಾಯಿ ಸಮಿತಿ ಅಧ್ಯಕ್ಷೆ ಶಾಂತಕುಮಾರಿ, ಪಾಲಿಕೆ ಸದಸ್ಯರಾದ ಎ.ಯು.ಸುಬ್ಬಯ್ಯ, ಪ್ರೇಮಾ ಶಂಕರೇಗೌಡ, ಪಾಲಿಕೆ ಇಂಜಿನಿಯರ್‌ಗಳು, ಸಿಬ್ಬಂದಿ ಉಪಸ್ಥಿತರಿದ್ದರು.

ಮರಗಳ ತೆರವು ಮಾಡಿ

ಮೇಯರ್ ಶಿವಕುಮಾರ್ ಮಾತನಾಡಿ, ಚೆಸ್ಕಾಂ ಸಿಬ್ಬಂದಿ ಕಟ್ ಮಾಡಿದ ಮರದ ರೆಂಬೆ–ಕೊಂಬೆಗಳನ್ನು ತೆರವುಗೊಳಿಸದೆ ಅಲ್ಲಿಯೇ ಬಿಟ್ಟು ಹೋಗುತ್ತಾರೆ. ಇದರಿಂದ ಪಾಲಿಕೆಗೆ ತೊಂದರೆಯಾಗುತ್ತಿದ್ದು, ಕಟ್ ಮಾಡಿದ ನಂತರ ತೆರವುಗೊಳಿಸುವ ಕೆಲಸವನ್ನು ಚೆಸ್ಕಾಂ ಸಿಬ್ಬಂದಿಗಳೇ ಮಾಡಬೇಕು ಎಂದು ಕೋರಿದರು.

ಜೋತುಬಿದ್ದಿರುವ ಕೇಬಲ್ ತೆರವುಗೊಳಿಸಿ, ಇಲ್ಲವೇ ನಾವೇ ಕಟ್ ಮಾಡುತ್ತೇವೆ....!

ವಿದ್ಯುತ್ ಕಂಬಗಳಲ್ಲಿ ಬಂಡಲ್‌ಗಟ್ಟಲೇ ಟಿಲಿಫೋನ್, ಟಿವಿ ಕೇಬಲ್‌ಗಳು ಜೋತು ಬಿದ್ದಿದ್ದು, ಸ್ವಚ್ಛ ನಗರಿಯೇ ಎಂಬ ಪ್ರಶ್ನೆ ಮೂಡುತ್ತಿದೆ ಎಂದು ಮಾತು ಆರಂಭಿಸಿದ ಮಾಜಿ ಮೇಯರ್ ಅಯೂಬ್ ಖಾನ್, ಸ್ವಚ್ಛ ನಗರಿ ಎಂಬ ಪಟ್ಟ ಮತ್ತೆ ಮೈಸೂರಿಗೆ ಲಭಿಸಬೇಕಾದರೆ ಕೂಡಲೇ ವಿದ್ಯುತ್ ಕಂಬಗಳಲ್ಲಿ ಜೋತುಬಿದ್ದಿರುವ ಕೇಬಲ್‌ಗಳನ್ನು ತೆರವುಗೊಳಿಸಬೇಕು. ಅರಮನೆ ಸುತ್ತ ದೀಪ ಬೆಳಗಿಸಿದರೆ ಸ್ವಚ್ಛ ನಗರಿಯಾಗುವುದಿಲ್ಲ. ನೋಡುವುದಕ್ಕೂ ಸ್ವಚ್ಛವಾಗಿರಬೇಕು. ಇದರಿಂದ ಪಾಲಿಕೆಗೂ ನೂರಾರು ಕೋಟಿ ರೂ. ನಷ್ಟವಾಗುತ್ತಿದ್ದು, ಚೆಸ್ಕಾಂ ಸಿಬ್ಬಂದಿ ತೆರವುಗೊಳಿಸದೇ ಇದ್ದರೆ ಪಾಲಿಕೆಯಿಂದಲೇ ಕಟ್ ಮಾಡಲಾಗುವುದು ಎಂದು ಎಚ್ಚರಿಸಿದರು.

ಕೂಡಲೇ ಉತ್ತರಿಸಿದ ಚೆಸ್ಕಾಂ ಎಂಡಿ ಸಿ.ಎನ್.ಶ್ರೀಧರ್, ಚೆಸ್ಕಾಂನ ಆದಾಯದ ಮೂಲಗಳಲ್ಲಿ ಇದು ಕೂಡ ಒಂದಾಗಿದೆ. ಆದ್ದರಿಂದ ಏಕಾಏಕಿ ತೆರವುಗೊಳಿಸಿ ಎಂದರೆ ಕಷ್ಟವಾಗುತ್ತದೆ. ಅಲ್ಲದೆ ಕಳೆದ ಎರಡ್ಮೂರು ವರ್ಷದಿಂದ ಹೊಸದಾಗಿ ಕೇಬಲ್ ಅಳವಡಿಸಲು ಅನುಮತಿ ನೀಡಿಲ್ಲ ಎನ್ನುತ್ತಿದ್ದಂತೆ ಹಾಗಾದರೆ ಪಾಲಿಕೆಗೆ ಆಗುತ್ತಿರುವ ನಷ್ಟದ ಹಣವನ್ನು ಕೊಟ್ಟು, ಅಳವಡಿಸಿಕೊಳ್ಳಿ ಎಂದರಲ್ಲದೆ ಮುಂದಿನ ದಿನಗಳಲ್ಲಿ ಹೊಸದಾಗಿ ಆದೇಶ ಮಾಡಿಸಿಕೊಂಡಾದರೂ ಸರಿಯೇ ಒಟ್ಟಿನಲ್ಲಿ ವಿದ್ಯುತ್ ಕಂಬಗಳಲ್ಲಿ ಜೋತಾಡುವ ವೈರ್‌ಗಳನ್ನು ತೆಗೆದುಹಾಕಿ ಎಂದರು.

ನಕ್ಕರೆ ಅದೇ ಸ್ವರ್ಗ

ಮಾರುತಿ 800 ಹರಾಜು ಆಗ್ತಾಕತ್ತಿತ್ತು...
10 ಲಕ್ಷ, 20 ಲಕ್ಷ, 30 ಲಕ್ಷ ಅಂತ ಕೇಳಾಕತ್ತಿದ್ದರು.
ಗುಂಡ : ಈ ಗಾಡಿಗೆ ಇಷ್ಟೊಂದು ರೇಟ್ ಯಾಕೆ?
ಮಾಲೀಕ : ಈ ಗಾಡಿದು 23 ಸಲ ಆಕ್ಸಿಡೆಂಟ್ ಆಗೈತಿ.
ಪ್ರತಿ ಸಲ ಹೆಂಡತಿನೇ ಸತ್ತಾಳ...!

ಮೈಸೂರು ಮಿತ್ರ
ಗುರುವಾರ, 20 ಜುಲೈ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........


ಜೀವನ ಅನ್ನೋದು ಪೈಪೋಟಿಯಲ್ಲ. ನಮ್ಮ ಬದುಕನ್ನು ನಾವೇ ಅನುಭವಿಸುತ್ತಾ ಖುಷಿ ಪಡಬೇಕೇ ವಿನಃ ಇನ್ನೊಬ್ಬರಿಗೆ ಹೋಲಿಸಿಕೊಂಡು ಇರುವ ಸುಖ ಕಳೆದುಕೊಳ್ಳಬಾರದು. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಲಗೈಯಲ್ಲಿ ಕೊಟ್ಟಿದ್ದು ಎಡಗೈಗೆ ತಿಳಿಯಬಾರದು.

ನಿಮ್ಮ ಪತ್ರಗಳು

ಉಮ್ಮನ್ ಚಾಂಡಿಯವರಿಗೆ ಶ್ರದ್ಧಾಂಜಲಿ

ಮಾನ್ಯರೆ,



ಕೇರಳ ರಾಜ್ಯ ಸಾಕ್ಷರತೆಯಲ್ಲಿ ಭಾರತದಲ್ಲಿ ಮೊದಲ ಸ್ಥಾನದಲ್ಲಿದೆ. ಕೇರಳ ರಾಜ್ಯದಲ್ಲಿ 2005ರಲ್ಲಿ ಶಾಲಾ ಮಟ್ಟದಲ್ಲಿ ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನವನ್ನು ಕಡ್ಡಾಯ ವಿಷಯವನ್ನಾಗಿ ಮಾಡಲಾಯಿತು. ಇದರ ರೂವಾರಿ ದಿವಂಗತ ಮುಖ್ಯಮಂತ್ರಿ ಉಮ್ಮನ್ ಚಾಂಡಿಯವರು.

ಉಮ್ಮನ್ ಚಾಂಡಿಯವರು 31 ಅಕ್ಟೋಬರ್ 1943ರಲ್ಲಿ ಪುತ್ತುಪಲ್ಲಿ, ತಿರುವಾಂಕೂರು ಸಾಮ್ರಾಜ್ಯದಲ್ಲಿ ಅಂದರೆ ಇಂದಿನ ಕೇರಳದ ಕೊಟ್ಟಾಯಂ ಜಿಲ್ಲೆಯಲ್ಲಿ ಜನಿಸಿದರು. ಚಾಂಡಿ ಅವರು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ವಿದ್ಯಾರ್ಥಿ ಘಟಕವಾದ ಕೇರಳದ ವಿದ್ಯಾರ್ಥಿ ಸಂಘಟನೆ ಕೇರಳ ಸ್ಟೂಡೆಂಟ್ಸ್ ಯೂನಿಯನ್ (KSU) ನ ಕಾರ್ಯಕರ್ತನಾಗಿ ರಾಜಕೀಯ ಕ್ಷೇತ್ರ ಪ್ರವೇಶಿಸಿದರು. ಪುತ್ತುಪಲ್ಲಿಯ ಸೇಂಟ್ ಜಾರ್ಜ್ ಹೈಸ್ಕೂಲ್‌ನಲ್ಲಿ ಕೆಎಸ್‌ಯು ಘಟಕದ ಅಧ್ಯಕ್ಷರಾಗಿದ್ದ ಅವರು ಸಂಘಟನೆಯ ರಾಜ್ಯಾಧ್ಯಕ್ಷರಾದರು.

ಉಮ್ಮನ್ ಚಾಂಡಿಯವರು ಕೇರಳ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಿಂದ 2004–06 ಮತ್ತು 2011–16 ರವರೆಗೆ ಎರಡು ಬಾರಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಉಮ್ಮನ್ ಚಾಂಡಿಯವರ ಪ್ರಮುಖ ಸಾಧನೆಗಳೆಂದರೆ ನಿರುದ್ಯೋಗ ಭತ್ಯೆ ಮಂಜೂರು ಮಾಡುವುದು ಮತ್ತು ಕಾರ್ಮಿಕರ ಕಲ್ಯಾಣ ಕ್ರಮಗಳು, ಕಾರುಣ್ಯ ಹಿತಚಿಂತಕ ಯೋಜನೆಯನ್ನು 2011–2012 ರಲ್ಲಿ ಜಾರಿಗೊಳಿಸಿದ್ದು ಮತ್ತು ಕ್ಯಾನ್ಸರ್, ಹಿಮೋಫಿಲಿಯಾ, ಮೂತ್ರಪಿಂಡ ಮತ್ತು ಹೃದಯ ರೋಗಗಳ ರೋಗಿಗಳಿಗೆ ಉಚಿತ ಚಿಕಿತ್ಸೆ ನೀಡಲು ಅವಕಾಶ ಮಾಡಿಕೊಟ್ಟಿದ್ದು ಹಾಗೂ ನಲವತ್ತೂರು ಕಾಕ್ಲಿಯರ್ ಇಂಪ್ಲಾಂಟ್ ಶಸ್ತ್ರಚಿಕಿತ್ಸೆಗಳು ಶ್ರವಣದೋಷವುಳ್ಳ ಮಕ್ಕಳಿಗೆ ಕಾಕ್ಲಿಯರ್ ಇಂಪ್ಲಾಂಟ್ ಯೋಜನೆಯಡಿಯಲ್ಲಿ ಚಿಕಿತ್ಸೆ ದೊರಕುವಂತೆ ಮಾಡಿದ್ದು ಮತ್ತು ಮೃತ ಸಂಜೀವಿನಿ ಯೋಜನೆಯ ಮೂಲಕ ಹೆಚ್ಚಿನ ಅಂಗಾಂಗ ಅಳವಡಿಕೆ ಶಸ್ತ್ರಚಿಕಿತ್ಸೆಗಳನ್ನು ಬಡವರಿಗೆ ದೊರಕುವಂತೆ ಮಾಡಿದ್ದು ಚಾಂಡಿಯವರ ಮುಖ್ಯ ಸಾಧನೆಯಾಗಿದೆ.

ಭಾರತ ಹಲವಾರು ರಾಜ್ಯಗಳನ್ನು ಹೊಂದಿದ್ದರೂ ಏಕತೆಯನ್ನು ಹೊಂದಿದೆ. ಉಮ್ಮನ್ ಚಾಂಡಿಯವರ ನಿಧನ ಕೇರಳ ರಾಜ್ಯದ ರಾಜಕೀಯ ಕ್ಷೇತ್ರಕ್ಕೆ ತುಂಬಲಾರದ ನಷ್ಟವಾಗಿದೆ. ಕರ್ನಾಟಕ ರಾಜ್ಯದ ಎಲ್ಲಾ ಜನತೆಯ ಪರವಾಗಿ ನಮ್ಮನ್ನು ಅಗಲಿದ ಉಮ್ಮನ್ ಚಾಂಡಿಯವರಿಗೆ ಶ್ರದ್ಧಾಂಜಲಿಯನ್ನು ಸಲ್ಲಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.

ಹದಗೆಟ್ಟ ರಸ್ತೆ ದುರಸ್ತಿಗೊಳಿಸಿ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಕೂಣಸೂರು ಜೋಗನಹಳ್ಳಿ ಬೈಲುಕೊಪ್ಪ ಮಾರ್ಗವಾಗಿ ಕುಶಾಲನಗರಕ್ಕೆ ತಲುಪುವ ರಸ್ತೆ ಸಂಪೂರ್ಣ ಹಾಳಾಗಿದ್ದು, ಸಾರ್ವಜನಿಕರು ಓಡಾಡಲು ತುಂಬಾ ಕಷ್ಟವಾಗುತ್ತಿದೆ.

ಸುಮಾರು ಹತ್ತಕ್ಕೂ ಹೆಚ್ಚು ಹಳ್ಳಿಯ ಜನರು ಈ ರಸ್ತೆಯಲ್ಲಿ ರಾತ್ರಿ ವೇಳೆ ಆಸ್ಪತ್ರೆ ಮತ್ತು ಇತರ ಕಾರ್ಯಗಳಿಗೆ ತೆರಳುವವರಿಗೆ ತುಂಬಾ ತೊಂದರೆಯಾಗಿದೆ. ಅಲ್ಲದೆ ರಸ್ತೆ ಸರಿಯಿಲ್ಲ ಎಂಬ ಕಾರಣಕ್ಕಾಗಿ ಬಸ್ ಸಂಚಾರವನ್ನು ರದ್ದು ಮಾಡಲಾಗಿದೆ. ಕೆಲವು ಜಾಗಗಳಲ್ಲಿ ಬಸ್‌ಗಳು ಕೆಸರಿನಲ್ಲಿ ಹೂತುಕೊಂಡರೆ ಎತ್ತಲು ಆಗುವುದಿಲ್ಲ. ಕೂಣಸೂರು ಮತ್ತು ಜೋಗನಹಳ್ಳಿ ಮಧ್ಯದಲ್ಲಿ ರಸ್ತೆ ನಿರ್ಮಾಣ ಮಾಡಿದ್ದು, ಅಲ್ಲಿ ಭಾರೀ ಪ್ರಮಾಣದ ಹಳ್ಳವಿದೆ. ಅಲ್ಲಿ ರಸ್ತೆ ತಡೆಗೋಡೆ ನಿರ್ಮಿಸದೆ ಇರುವುದರಿಂದ ಮಳೆಗಾಲದಲ್ಲಿ ಅಪಾಯ ಸಂಭವಿಸುವ ಸಾಧ್ಯತೆ ಇದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ತಡೆಗೋಡೆ ನಿರ್ಮಿಸಿ, ತಕ್ಷಣವೇ ಗುಂಡಿ ಮುಚ್ಚಿ ಸಾರ್ವಜನಿಕರಿಗೆ ತೊಂದರೆ ಆಗದಂತೆ ರಿಪೇರಿ ಮಾಡಬೇಕೆಂದು ಮನವಿ.

–ಬೆಟ್ಟದಪುರ ನಿವಾಸಿಗಳು, ಪಿ.ಪಟ್ಟಣ ತಾಲೂಕು

ಜೈನಮುನಿಗಳ ಬರ್ಬರ ಹತ್ಯೆ, ಅಮಾನುಷ ಕೃತ್ಯ, ಅಕ್ಷಮ್ಯ

ಮಾನ್ಯರೆ,

ಚಿಕ್ಕೋಡಿ ತಾಲೂಕಿನ ಹಿರೇಕೋಡಿಯ ನಂದಿಪರ್ವತ ಜೈನ ಆಶ್ರಮದ ಜೈನಮುನಿ ಶ್ರೀಕಾಮ ಕುಮಾರ ನಂದಿಮಹಾರಾಜರ ಬರ್ಬರ ಹತ್ಯೆ ಮಾನವ ಕುಲಕ್ಕೆ ಕಳಂಕ. ಶಾಂತಿ, ಸಹನೆ ಮತ್ತು ಅಹಿಂಸೆಯೇ ಪರಮಧರ್ಮ ಎಂದು ಬೋಧಿಸುವ ಜೈನಧರ್ಮದ ಮುನಿಗಳನ್ನು ಅಮಾನುಷವಾಗಿ ಕೊಲೆ ಮಾಡಿದ್ದು, ಅಕ್ಷಮ್ಯ ಅಪರಾಧ, ನಿಜಕ್ಕೂ ಖಂಡನೀಯ. ಅಪರಾಧ ಎಸಗಿದವರಿಗೆ ಕಠಿಣವಾದ ಶಿಕ್ಷೆಯಾಗಲೇಬೇಕು. ಸರ್ಕಾರ ನಿಜವಾದ ಕಾರಣಗಳನ್ನು ಪಕ್ಷಾತೀತವಾಗಿ ಪರಿಶೀಲಿಸಿ ಪತ್ತೆಹಚ್ಚಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸಬೇಕು. ಆದರೆ ಜೈನಮುನಿ ಗುಣಧರ ನಂದಿ ಮಹಾರಾಜರು ಅಪರಾಧಿಗಳಿಗೆ ಶಿಕ್ಷೆ ಬೇಡ, ಶಿಕ್ಷಣ ನೀಡಿ, ಮನಃ ಪರಿವರ್ತನೆ ಮಾಡಿ, ಕುಟುಂಬದವರಿಗೆ ಸಕಲ ಸೌಲಭ್ಯ ಒದಗಿಸಿ ಎಂದಿದ್ದಾರೆ. ಅವರು ಜೈನ ಧರ್ಮದ ಪ್ರಧಾನತತ್ತ್ವ ಅಹಿಂಸೆಯನ್ನು ಪ್ರತಿಪಾದಿಸಿದ್ದಾರೆ. ಆದರೆ ಪ್ರಸ್ತುತ ಕಾಲಮಾನಕ್ಕೆ ಇದು ಸೂಕ್ತವಲ್ಲ. ಇಂತಹ ಕ್ರೂರ, ಹೃದಯಹೀನ ಅಪರಾಧಿಗಳಿಗೆ ಶಿಕ್ಷೆ ವಿಧಿಸದಿದ್ದಲ್ಲಿ ಇದನ್ನೇ ದುರುಪಯೋಗಪಡಿಸಿಕೊಂಡು ಸಮಾಜದಲ್ಲಿ ಅಪರಾಧಗಳ ಸಂಖ್ಯೆ ಜಾಸ್ತಿಯಾಗುತ್ತದೆ. ಕಾನೂನಿನ ಪ್ರಕಾರ ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯನ್ನಾದರೂ ವಿಧಿಸಿ ಜೈಲಿನಲ್ಲಿದ್ದುಕೊಂಡೇ ಮನಃಪರಿವರ್ತನೆ ಮಾಡಬಹುದಲ್ಲ. ಜೈನಮುನಿಗಳನ್ನು ಅಮಾನುಷವಾಗಿ ಜೀವ ತೆಗೆದು ತುಂಡುತುಂಡಾಗಿ ಕತ್ತರಿಸಿ ಕೊಳವೆ ಬಾವಿಗೆ ಬಿಸಾಡಿದ್ದು ಹೃದಯಹೀನ, ಕಟುಕತನ. ಅಕ್ಷಮ್ಯ ಅಪರಾಧ.

– ಆರ್.ಎನ್. ಜಗದೀಶ್, ನಿವೃತ್ತ ಶಿಕ್ಷಣಾಧಿಕಾರಿ ಶ್ರೀರಾಂಪುರ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಬಡವರಿಗೆ ಸಂಪತ್ತಿನ ಮರು ಹಂಚಿಕೆಯೇ ಬಜೆಟ್‌ನ ಮೂಲ ಧ್ಯೇಯವಾಗಬೇಕು

ಇತ್ತೀಚೆಗಷ್ಟೇ ಮಂಡನೆಯಾದ ಕರ್ನಾಟಕದ ಬಜೆಟ್ ರಾಜ್ಯದ ಅಭಿವೃದ್ಧಿಗಾಗಿ ರೂಪಿಸಿರುವ ಯೋಜನೆಗಳು ಸಾಕಷ್ಟು ಸುದ್ದಿಯನ್ನು ಮಾಡಿವೆ. ವಿಶೇಷವಾಗಿ ಶಿಕ್ಷಣ, ಮಹಿಳಾ ಸಶಕ್ತೀಕರಣ, ಅಂಚಿನಲ್ಲಿರುವ ಸಮುದಾಯಗಳ ಬದುಕಿನ ಗುಣಮಟ್ಟದ ಏರಿಕೆ–ಮುಂತಾದ ಕ್ಷೇತ್ರಗಳಲ್ಲಿ ರಾಜ್ಯ ಭವಿಷ್ಯದಲ್ಲಿ ಇಡುವ ಹೆಜ್ಜೆಗಳಿಗೆ ಈ ಯೋಜನೆಗಳು ಪೂರಕ ಆರ್ಥಿಕ ಮತ್ತು ಮಾನವ ಸಂಪನ್ಮೂಲಗಳನ್ನು ಒದಗಿಸಲಿವೆ ಎಂಬುದು ಸರ್ಕಾರದ ಆಶಯ. ಆದರೆ ಭವಿಷ್ಯದ ಅಭಿವೃದ್ಧಿಗೆ ನಕ್ಷೆಯನ್ನು ಬರೆಯುವ ಮತ್ತು ಬಜೆಟ್ ಅನ್ನು ಜಾರಿಗೆ ತರಲು ನಿಯಮಗಳನ್ನು ರೂಪಿಸುವ ಮುನ್ನ ರಾಜ್ಯದ ವಿವಿಧ ಪ್ರದೇಶಗಳ ಅಭಿವೃದ್ಧಿ ಸಾಧನೆ ಮತ್ತು ಅಭಿವೃದ್ಧಿ ಅಂತರ – ಇವೆರಡನ್ನೂ ಮೊದಲು ಮೌಲ್ಯಮಾಪನಕ್ಕೆ ಒಳಪಡಿಸುವ ಅಗತ್ಯವಿದೆ.

ಇತ್ತೀಚೆಗೆ ಬಿಡುಗಡೆಯಾಗಿರುವ ಕರ್ನಾಟಕ ಮಾನವಾಭಿವೃದ್ಧಿ ವರದಿ 2022 ನೀಡಿರುವ ರಾಜ್ಯದ ಪ್ರಗತಿಯ ಮುಖ್ಯ ರೂಪು–ರೇಷೆಗಳು, ಭವಿಷ್ಯದಲ್ಲಿ ರಾಜ್ಯ ಎದುರಿಸಬೇಕಾದ ಸವಾಲುಗಳು ಮತ್ತು ರಾಜ್ಯದಲ್ಲಿ ಕಂಡುಬರುವ ಪ್ರಾದೇಶಿಕ ಅಸಮಾನತೆ ಮುಂತಾದ ವಿಚಾರಗಳತ್ತ ಗಮನಹರಿಸುವುದು ಸೂಕ್ತ. 2022ರಲ್ಲಿ ಸಲ್ಲಿಸಲಾದ ವರದಿಯಲ್ಲಿ ರಾಜ್ಯದ ಪ್ರಗತಿಯನ್ನು ಆಯ್ದ ಸೂಚ್ಯಂಕಗಳ ಚೌಕಟ್ಟಿನಲ್ಲಿ ಮೌಲ್ಯಮಾಪನ ಮಾಡಿರುವುದೇ ಅಲ್ಲದೆ, ಭವಿಷ್ಯಕ್ಕಾಗಿ ಕಾರ್ಯಯೋಜನೆಗಳನ್ನೂ ಸೂಚಿಸಲಾಗಿದೆ. ಆದ್ದರಿಂದಲೇ 2023 –24ರ ಬಜೆಟ್‌ನ ಆಶಯಗಳನ್ನು ಈ ವರದಿಯ ಪ್ರಮುಖಾಂಶಗಳ ಚೌಕಟ್ಟಿನಲ್ಲಿ ಪರಿಶೀಲಿಸದಿದ್ದರೆ ಬಜೆಟ್‌ನ ಅನೇಕ ಗುರಿಗಳು ಕೇವಲ ಹೇಳಿಕೆಗಳಾಗಿಯೇ ಉಳಿದುಕೊಳ್ಳುತ್ತವೆ. ಜಿಲ್ಲೆಗಳ ಮತ್ತು ತಾಲೂಕುಗಳ ನಡುವೆ ವಿವಿಧ ಅಭಿವೃದ್ಧಿ ಪರಿಮಾಪಕಗಳಾದ ಜೀವಿತಾವಧಿ, ಆರೋಗ್ಯ, ಪೌಷ್ಟಿಕತೆ, ಮಾತೃ ಮೃತ್ಯು ಪ್ರಮಾಣ, ಶಿಕ್ಷಣ, ಜೀವನ ನಿರ್ವಹಣಾ ಮಾರ್ಗಗಳು–ಇವುಗಳನ್ನು ಆಧಾರವನ್ನಾಗಿಟ್ಟುಕೊಂಡು ತಯಾರಾಗಿರುವ ಈ ವರದಿ ರಾಜ್ಯದ ಅಭಿವೃದ್ಧಿ ಪರಿಸ್ಥಿತಿಯ ಬಗ್ಗೆ ಒಂದು ಸ್ಪಷ್ಟ ಚಿತ್ರಣವನ್ನು ನೀಡುತ್ತದೆ.

ಬಜೆಟ್‌ನ ಮೂಲ ಆಶಯವೇ ರಾಜ್ಯದ ಪ್ರಾದೇಶಿಕ ಅಸಮತೋಲನ ಮತ್ತು ಸಾಮಾಜಿಕ ಅಸಮಾನತೆಯನ್ನು ಕಡಿಮೆ ಮಾಡುವುದು. ಈ ನಿಟ್ಟಿನಲ್ಲಿ ಮೊದಲಿಗೆ 2022ರ ಮಾನವಾಭಿವೃದ್ಧಿ ವರದಿ ರಾಜ್ಯದ ಜಿಲ್ಲೆಗಳನ್ನು ಅಭಿವೃದ್ಧಿಯ ಮಾಪಕದಲ್ಲಿ ಹೇಗೆ ವಿಂಗಡಿಸಿದೆ ಎಂದು ನೋಡುವುದು ಮುಖ್ಯವಾಗಿದೆ. ಈ ವರದಿಯ ಅನ್ವಯ ರಾಜ್ಯದ ಹತ್ತು ಜಿಲ್ಲೆಗಳು, ಎಂದರೆ ಬೆಂಗಳೂರು, ದಕ್ಷಿಣ ಕನ್ನಡ, ಚಿಕ್ಕ ಮಗಳೂರು, ಉಡುಪಿ, ಕೊಡಗು, ಮಂಡ್ಯ, ಬೆಂಗಳೂರು ಗ್ರಾಮಾಂತರ , ರಾಮನಗರ, ಕೋಲಾರ ಮತ್ತು ಶಿವಮೊಗ್ಗ ಹೆಚ್ಚಿನ ಪ್ರಮಾಣದ ಅಭಿವೃದ್ಧಿಯನ್ನು ಸಾಧಿಸಿವೆ. ಈ ಪ್ರಮಾಣವನ್ನು ಅಳೆಯಲು ವರದಿ ಮುಖ್ಯವಾಗಿ ಗಣನೆಗೆ ತೆಗೆದುಕೊಂಡಿರುವುದು ಆರೋಗ್ಯ, ಶಿಕ್ಷಣ, ಮತ್ತು ಆದಾಯ ಗಳಿಕೆ. ಇದೇ ಸೂಚ್ಯಂಕಗಳನ್ನು ಗಣನೆಗೆ ತೆಗೆದುಕೊಂಡು ಹತ್ತು ಜಿಲ್ಲೆಗಳನ್ನು ಅಭಿವೃದ್ಧಿಯ ಮಾಪಕದಲ್ಲಿ ಅತೀ ಕೆಳಗೆ ಇರುವವು ಎಂದು ವರದಿ ಗುರುತಿಸುತ್ತದೆ. ಈ ಜಿಲ್ಲೆಗಳೆಂದರೆ ಚಾಮರಾಜನಗರ, ಬೀದರ್, ವಿಜಯಪುರ, ಚಿತ್ರದುರ್ಗ, ಕೊಪ್ಪಳ, ದಾವಣಗೆರೆ, ಹಾವೇರಿ, ರಾಯಚೂರು, ಕಲ್ಬುರ್ಗಿ ಮತ್ತು ಯಾದಗಿರಿ. ಅತಿ ಹೆಚ್ಚಿನ ಮಾನವಾಭಿವೃದ್ಧಿ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನಲ್ಲಿ ಕಂಡು ಬಂದರೆ, ಅತೀ ಕಡಿಮೆ ಪ್ರಮಾಣದ ಅಭಿವೃದ್ಧಿಯಾಗಿರುವುದು ಯಾದಗಿರಿ ಜಿಲ್ಲೆಯ ಯಾದಗಿರಿ ತಾಲೂಕಿನಲ್ಲಿ. ಈ ಅಂಕಿ–ಅಂಶಗಳು ನೇರವಾಗಿ ಸೂಚಿಸುತ್ತಿರುವುದು ದಕ್ಷಿಣ ಮತ್ತು ಉತ್ತರ ಕರ್ನಾಟಕದ ನಡುವೆ ಅಭಿವೃದ್ಧಿ ಅವಕಾಶಗಳ ಲಭ್ಯತೆಯಲ್ಲಿ ಕಂಡುಬರುತ್ತಿರುವ ಅಸಮಾನತೆಯನ್ನು.



> ಬಜೆಟ್‌ನ ಆಶಯಗಳು ರಾಜ್ಯದ ಎಲ್ಲ ಭಾಗಗಳಿಗೂ ಸಮಾನ ರೀತಿಯಲ್ಲಿ ಅನ್ವಯಿಸಬೇಕಾದರೆ ಮೊದಲು ಮಾನವಾಭಿವೃದ್ಧಿ ವರದಿ ಹೊರತಂದಿರುವ ಅಂತರ ಜಿಲ್ಲಾ ಮತ್ತು ಅಂತರ ತಾಲೂಕು ಅಸಮಾನತೆಗೆ ಕಾರಣವಾಗಿರುವ ಅಂಶಗಳ ಸೂಕ್ಷ್ಮ ಅಧ್ಯಯನವನ್ನು ಸಮಾಜೋ-ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಕೈಗೊಳ್ಳಬೇಕು. ಅಭಿವೃದ್ಧಿ ಮತ್ತು ಬಜೆಟ್‌ಗಳೆರಡನ್ನೂ ಕೇವಲ ಸಂಖ್ಯಾತ್ಮಕ ನಿಟ್ಟಿನಲ್ಲಿ ನೋಡದೆ ಜನ ಸಮುದಾಯಗಳ ಜೀವನಾನುಭವಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ಸಾಮಾಜಿಕ ವಿಶ್ಲೇಷಣೆಗೆ ಒಳಪಡಿಸಿದರೆ ಮಾತ್ರ 'ಒಳಗೊಳ್ಳುವ ಬಜೆಟ್‌'ನ ಆಶಯ ಸಾಕಾರವಾಗುವುದು.

ರಾಜ್ಯದಲ್ಲಿ ಮಾನವಾಭಿವೃದ್ಧಿಯ ಪರಿಸ್ಥಿತಿಯನ್ನು ಅಳೆಯಲು ವರದಿ ಪರಿಗಣಿಸಿರುವ ಮೂರು ಪ್ರಮುಖ ಮಾಪಕಗಳೆಂದರೆ 'ಬಡತನ', 'ಅಪೌಷ್ಟಿಕತೆ'. 'ಶಿಕ್ಷಣ ಕ್ಷೇತ್ರದಲ್ಲಿರುವ ಅಸಮಾನತೆ'. ಬಡತನದ ಪ್ರಮಾಣ ಹೆಚ್ಚಾಗಿರುವ ಎಲ್ಲ ಜಿಲ್ಲೆಗಳೂ ಉತ್ತರ ಕರ್ನಾಟಕದಲ್ಲಿವೆ ಎನ್ನುವುದು ಗಂಭೀರವಾಗಿ ಪರಿಗಣಿಸಬೇಕಾದ ವಿಚಾರ. ಈ ಜಿಲ್ಲೆಗಳೆಂದರೆ ಯಾದಗಿರಿ, ಕಲಬುರ್ಗಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಬೀದರ್, ಗದಗ, ಬಾಗಲಕೋಟೆ, ವಿಜಯಪುರ ಮತ್ತು ಹಾವೇರಿ. ಅಪೌಷ್ಟಿಕತೆಯ ಪ್ರಮಾಣ ಅಧಿಕವಾಗಿರುವುದು ಕೂಡ ಕಲಬುರ್ಗಿ, ರಾಯಚೂರು, ಯಾದಗಿರಿ, ಕೊಪ್ಪಳ, ಬಳ್ಳಾರಿ, ಬೀದರ್, ಗದಗ್ ಜಿಲ್ಲೆಗಳಲ್ಲಿ. ಈ ಜಿಲ್ಲೆಗಳ 101 ತಾಲೂಕುಗಳಲ್ಲಿ ಅತೀ ಹೆಚ್ಚು ಪ್ರಮಾಣದ ಅಪೌಷ್ಟಿಕತೆ ಕಂಡು ಬರುತ್ತಿವೆ.

ಬಡತನದ ರೇಖೆಯ ಕೆಳಗಿದ್ದು, ತಮ್ಮ ಅತ್ಯಲ್ಪ ಗಳಿಕೆಯನ್ನು ಜೀವನ ನಿರ್ವಹಣೆಗಾಗಿಯೇ ವೆಚ್ಚ ಮಾಡುತ್ತಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಮತ್ತು ಪೌಷ್ಟಿಕ ಆಹಾರ ನೀಡಲು ಸಾಧ್ಯವಾಗದಂಥ ಪರಿಸ್ಥಿತಿಯಲ್ಲಿರುವ ಕುಟುಂಬಗಳಿಗೆ ಗೃಹಲಕ್ಷ್ಮಿ ಯೋಜನೆಯ ಮೂಲಕ ಪ್ರತಿ ತಿಂಗಳೂ ಹಣ ಸಂದಾಯವಾಗುವಂತೆ ಎಚ್ಚರ ವಹಿಸಬೇಕು. 'ಬಡವರಿಗೆ ಸಂಪತ್ತನ್ನು ಮರುಹಂಚಿಕೆ ಮಾಡುವ ನೀತಿಗಳನ್ನು ಸರ್ಕಾರ ಅನುಸರಿಸಬೇಕು' ಎಂಬ ಬಜೆಟ್‌ನ ಆಶಯ ವಿಶೇಷವಾಗಿ ಈ ಜಿಲ್ಲೆಗಳಿಗೆ ಅನ್ವಯಿಸುವಂತೆ ಭವಿಷ್ಯದ ಕಾರ್ಯಯೋಜನೆಗಳು ರೂಪಿತವಾಗಬೇಕಿವೆ.

ಈ ಬಾರಿಯ ಬಜೆಟ್‌ನಲ್ಲಿ ಮಕ್ಕಳಿಗೆ ಪೌಷ್ಟಿಕ ಆಹಾರವನ್ನು ಒದಗಿಸುವ ಬಗ್ಗೆ ಪದೇ ಪದೆ ಪ್ರಸ್ತಾಪ ಬಂತು. ಮಾನವಾಭಿವೃದ್ಧಿ ವರದಿಯ ಪ್ರಕಾರ ಕೊಪ್ಪಳ, ಯಾದಗಿರಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಅಪೌಷ್ಟಿಕತೆಯಿಂದ ನರಳುತ್ತಿರುವ ಅತೀ ಹೆಚ್ಚು ಸಂಖ್ಯೆಯ ಮಕ್ಕಳಿರುವುದು. ಇದೇ ಜಿಲ್ಲೆಗಳಲ್ಲಿ ಮಹಿಳೆಯರಲ್ಲಿ ರಕ್ತ ಹೀನತೆ ಕೂಡ ಹೆಚ್ಚಾಗಿರುವುದು. ಮಾತೃ ಮೃತ್ಯು ಹೆಚ್ಚಾಗಿ ಕಂಡು ಬರುತ್ತಿರುವುದು ಧಾರವಾಡ, ಚಿಕ್ಕಬಳ್ಳಾಪುರ, ಬೀದರ್, ಹಾಸನ, ಹಾವೇರಿ, ಶಿವಮೊಗ್ಗ, ತುಮಕೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ. ಈ ಜಿಲ್ಲೆಗಳಲ್ಲಿ ರಕ್ತಹೀನತೆ, ರಕ್ತ ದೊತ್ತಡ ಮತ್ತು ಅಪೌಷ್ಟಿಕತೆ 15–49 ವಯೋಗುಂಪಿನ ಗರ್ಭಿಣಿ ಮಹಿಳೆಯರಲ್ಲಿ ಹೆಚ್ಚಾಗಿದ್ದು ಸಾರ್ವಜನಿಕ ಆರೋಗ್ಯ ರಕ್ಷಕ ಸೇವೆಗಳ ಲಭ್ಯತೆ ಹೆಚ್ಚಾಗಬೇಕು.

ಮಾನವಾಭಿವೃದ್ಧಿ 2022ರ ಪ್ರಕಾರ ಶಿಕ್ಷಣ ಕ್ಷೇತ್ರದಲ್ಲಿಯೂ ಎರಡು ಪ್ರಮುಖ ಅಂಶಗಳತ್ತ ಕಾಳಜಿ ವಹಿಸಬೇಕಾಗಿದೆ. ಅವುಗಳೆಂದರೆ ಪ್ರೌಢಶಾಲಾ ಮಟ್ಟದಲ್ಲಿ ಶಾಲೆಯನ್ನು ಬಿಡುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗುತ್ತಿರುವುದು ಮತ್ತು ಅನೇಕ ಮಕ್ಕಳಲ್ಲಿ ಕಲಿಕಾ ಸಾಮರ್ಥ್ಯ ತೀರಾ ಕಡಿಮೆ ಮಟ್ಟದಲ್ಲಿರುವುದು. ಪ್ರೌಢಶಿಕ್ಷಣ ಮಟ್ಟದಲ್ಲಿ ಶಾಲೆಯನ್ನು ಬಿಡುವ ಮಕ್ಕಳ ಸಂಖ್ಯೆ 2 ಲಕ್ಷಕ್ಕಿಂತ ಹೆಚ್ಚಿದೆ ಎಂದು ಅಂದಾಜು ಮಾಡಲಾಗಿದೆ. ಈ ಸಂಖ್ಯೆ ಕೋವಿಡ್ ಸಂದರ್ಭದಲ್ಲಿ ಹೆಚ್ಚಾಗಿದ್ದು ನಮಗೆಲ್ಲ ತಿಳಿದೇ ಇದೆ. ಈ ಮಕ್ಕಳನ್ನು ಶಾಲೆಗಳಿಗೆ ಮರು ಕರೆತರುವುದು ಮತ್ತು ಈಗ ಇರುವವರನ್ನು ಶಾಲೆಯಲ್ಲಿಯೇ ಉಳಿಸಿಕೊಳ್ಳುವುದು–ಈ ಎರಡು ಕೆಲಸಗಳೂ ಏಕಕಾಲದಲ್ಲಿ ಆಗ ಬೇಕು.

ಶಿಕ್ಷಣ ಮಟ್ಟ ಹೆಚ್ಚುತ್ತಾ ಹೋದ ಹಾಗೆಲ್ಲ ಅನೇಕ ಪ್ರದೇಶಗಳಲ್ಲಿ ಕಲಿಕಾ ಸಾಮರ್ಥ್ಯದ ಪ್ರಮಾಣ ಕಡಿಮೆಯಾಗುತ್ತಿದ್ದು, ಈ ವಿಚಾರದ ಬಗ್ಗೆ ಗಂಭೀರ ಚಿಂತನೆ ಮತ್ತು ಕಾರ್ಯಾಚರಣೆ ಎರಡೂ ಏಕಕಾಲದಲ್ಲಿ ಆಗಬೇಕು. ಕಲಿಕಾ ನ್ಯೂನತೆಯನ್ನು ಹೋಗಲಾಡಿಸಲು ಸುಮಾರು 80 ಕೋಟಿ ರೂ.ಗಳ ವೆಚ್ಚದಲ್ಲಿ 'ಮರುಸಿಂಚನ' ಎಂಬ ಹೊಸ ಯೋಜನೆಯೊಂದನ್ನು ಬಜೆಟ್‌ನಲ್ಲಿ ಸೂಚಿಸಲಾಗಿದ್ದು ಕಲಿಕೆಯಲ್ಲಿ ಹಿಂದುಳಿದ ಒಂದೂವರೆ ಲಕ್ಷ ವಿದ್ಯಾರ್ಥಿಗಳನ್ನು ಈ ಯೋಜನೆ ಯಡಿ ತರಲಾಗುತ್ತದೆ ಎಂದು ಆಶಿಸಲಾಗಿದೆ. ವಿಶೇಷವಾಗಿ ವಿಜ್ಞಾನ ಮತ್ತು ಗಣಿತ ವಿಷಯಗಳಲ್ಲಿ ಕಲಿಕಾ ಹಿನ್ನಡೆಯಾಗುತ್ತಿರುವುದರಿಂದ ನುರಿತ ಶಿಕ್ಷಕರನ್ನು ನೇಮಕಾತಿ ಮಾಡಿ, ಗ್ರಾಮೀಣ ಭಾಗಗಳಲ್ಲಿ ಶಾಲಾ ಮೂಲಸೌಕರ್ಯಗಳ ಅಭಿವೃದ್ಧಿ ಮಾಡುವತ್ತ ಗಮನ ಹರಿಸಬೇಕು. ಕಲಿಕಾ ಬಲವರ್ಧನೆ, ಪೌಷ್ಟಿಕ ಆಹಾರ ಸೇವನೆ ಮತ್ತು ಸುರಕ್ಷಿತ ಆರೋಗ್ಯ ಸೇವೆಗಳ ಲಭ್ಯತೆ– ಈ ಮೂರು ಅಂಶಗಳಿಗೂ ನಿಕಟ ಸಂಬಂಧವಿರುವುದರಿಂದ ಈ ಎಲ್ಲ ಸೇವೆಗಳನ್ನು ಒದಗಿಸಲು 'ಒಮ್ಮುಖ ಮಾದರಿ'ಯನ್ನು ಅಳವಡಿಸಿ ಅಭಿವೃದ್ಧಿ ಕಾರ್ಯನೀತಿಗಳನ್ನು ರೂಪಿಸಬೇಕು.

ಒಟ್ಟಾರೆ ಪ್ರಸಕ್ತ ಸಾಲಿನಲ್ಲಿ ಮಹಿಳಾ ಉದ್ದೇಶಿತ ಯೋಜನೆಗಳಿಗೆ ನಿಗದಿಯಾಗಿರುವ 70,427 ಕೋಟಿ ಮತ್ತು ಮಕ್ಕಳ ಉದ್ದೇಶಿತ ಯೋಜನೆಗಳಿಗೆ ನಿಗದಿಯಾಗಿರುವ 51 ,229 ಕೋಟಿ ರೂ. ಅನುದಾನವನ್ನು ಹಂಚುವಾಗ ಮಾನವಾಭಿವೃದ್ಧಿಯಲ್ಲಿ ಸ್ಪಷ್ಟವಾಗಿ ಕಂಡು ಬರುತ್ತಿರುವ ಪ್ರಾದೇಶಿಕ ಅಸಮತೋಲನ ನಿವಾರಣೆಯತ್ತ ಸಂಬಂಧಪಟ್ಟ ಇಲಾಖೆಗಳು ಗಮನಹರಿಸದಿದ್ದರೆ ಮತ್ತದೇ ಪರಿಸ್ಥಿತಿ ಮುಂದುವರೆಯುತ್ತದೆ.


ಬಜೆಟ್‌ನ ಆಶಯಗಳು ರಾಜ್ಯದ ಎಲ್ಲ ಭಾಗಗಳಿಗೂ ಸಮಾನ ರೀತಿಯಲ್ಲಿ ಅನ್ವಯಿಸಬೇಕಾದರೆ ಮೊದಲು ಮಾನವಾಭಿವೃದ್ಧಿ ವರದಿ ಹೊರತಂದಿರುವ ಅಂತರ ಜಿಲ್ಲಾ ಮತ್ತು ಅಂತರ ತಾಲೂಕು ಅಸಮಾನತೆಗೆ ಕಾರಣವಾಗಿರುವ ಅಂಶಗಳ ಸೂಕ್ಷ್ಮ ಅಧ್ಯಯನವನ್ನು ಸಮಾಜೋ–ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ಕೈಗೊಳ್ಳಬೇಕು. ಅಭಿವೃದ್ಧಿ ಮತ್ತು ಬಜೆಟ್‌ಗಳೆರಡನ್ನೂ ಕೇವಲ ಸಂಖ್ಯಾತ್ಮಕ ನಿಟ್ಟಿನಲ್ಲಿ ನೋಡದೆ ಜನ ಸಮುದಾಯಗಳ ಜೀವನಾನುಭವಗಳ ಹಿನ್ನೆಲೆಯಲ್ಲಿ ವಿಮರ್ಶಾತ್ಮಕ ಸಾಮಾಜಿಕ ವಿಶ್ಲೇಷಣೆಗೆ ಒಳಪಡಿಸಿದರೆ ಮಾತ್ರ 'ಒಳಗೊಳ್ಳುವ ಬಜೆಟ್‌'ನ ಆಶಯ ಸಾಕಾರವಾಗುವುದು.

ಕರ್ನಾಟಕ ವಿಧಾನಸಭೆ ಸ್ಪೀಕರ್ ಯುಟಿ ಖಾದರ್ ವಿರುದ್ಧ ಬಿಜೆಪಿ–ಜೆಡಿಎಸ್‌ನಿಂದ ಜಂಟಿ ಅವಿಶ್ವಾಸ ನೋಟಿಸ್

ಬೆಂಗಳೂರು, ಜು.19– 10 ಬಿಜೆಪಿ ಸದಸ್ಯರನ್ನು ಅಮಾನತು ಮಾಡಿದ ಪ್ರಕರಣದ ಬೆನ್ನಲ್ಲೇ ಕರ್ನಾಟಕ ವಿಧಾನಸಭೆ ಸ್ಪೀಕರ್ ಯುಟಿ ಖಾದರ್ ವಿರುದ್ಧ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಬುಧವಾರ ವಿಧಾನಸಭೆ ಕಾರ್ಯದರ್ಶಿಗೆ ಜಂಟಿ ಅವಿಶ್ವಾಸ ನೋಟಿಸ್ ನೀಡಿದ್ದಾರೆ.

ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ನಿನ್ನೆ ಪ್ರತಿಪಕ್ಷಗಳ ಸಭೆ ವೇಳೆ ವಿಧಾನಸಭೆ ಸ್ಪೀಕರ್ ಯು.ಟಿ ಖಾದರ್ ಭೇಟಿ ನೀಡಿದ್ದನ್ನು ವಿರೋಧಿಸಿ ಅವರ ವಿರುದ್ಧ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಅವಿಶ್ವಾಸ ನಿರ್ಣಯಕ್ಕೆ ನೋಟಿಸ್ ನೀಡಿವೆ. ಮಾಜಿ ಸಿಎಂ ಬಸವರಾಜ ಬೊಮ್ಮಾಯಿ, ಹೆಚ್.ಡಿ. ಕುಮಾರಸ್ವಾಮಿ ಸೇರಿದಂತೆ ಹಲವು ಬಿಜೆಪಿ ಮತ್ತು ಜೆಡಿಎಸ್ ಶಾಸಕರು ನೋಟಿಸ್‌ಗೆ ಸಹಿ ಹಾಕಿದ್ದಾರೆ ಎಂದು ತಿಳಿದುಬಂದಿದೆ.

ಕರ್ನಾಟಕ ವಿಧಾನಸಭೆಯ ಎಲ್ಲಾ ಸದಸ್ಯರಿಂದ ಚುನಾಯಿತರಾಗಿರುವ ಸ್ಪೀಕರ್ ಅವರು ಸದನದ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ, ಅವರನ್ನು ಸ್ಥಾನದಿಂದ ತೆಗೆದುಹಾಕಲು, ನಾವು ಕಾರ್ಯವಿಧಾನದ ನಿಯಮಗಳು ಮತ್ತು ನಿಯಮ 169 ರ ಪ್ರಕಾರ ಕರ್ನಾಟಕ ವಿಧಾನಸಭೆಯಲ್ಲಿ ವ್ಯವಹಾರ ನಡೆಸುವುದರ ವಿರುದ್ಧ ಪ್ರಸ್ತಾವನೆಯನ್ನು ಮಂಡಿಸಲು ಅವಕಾಶವನ್ನು ಕೋರುತ್ತೇವೆ ಎಂದು ನೋಟಿಸ್‌ನಲ್ಲಿ ಹೇಳಲಾಗಿದೆ.



ಐಎಎಸ್ ಅಧಿಕಾರಿಗಳ ದುರ್ಬಳಕೆ ಆರೋಪ ಮಾಡಿರುವ ಬಿಜೆಪಿ ಮತ್ತು ಜೆಡಿಎಸ್ ವಿಧಾನಸಭೆ ಅಧಿವೇಶನದಲ್ಲಿ ಪ್ರತಿಭಟನೆ ನಡೆಸುತ್ತಿದ್ದು, ಉಪ ಸಭಾಪತಿ ರುದ್ರಪ್ಪ ಲಮಾಣಿ ಅವರತ್ತ ಬಿಜೆಪಿ ಸದಸ್ಯರು ಕಾಗದ ಪತ್ರಗಳನ್ನು ಹರಿದು ತೂರಿ ಆಕ್ರೋಶ ವ್ಯಕ್ತಪಡಿಸಿದ್ದರು. ಇದರ ಬೆನ್ನಲ್ಲೇ ಬಿಜೆಪಿ ಸದಸ್ಯರ ನಡೆಯನ್ನು ಸ್ಪೀಕರ್ ಸ್ಥಾನಕ್ಕೆ ಅಗೌರವ ಎಂದು ಪರಿಗಣಿಸಿರುವ ಸ್ಪೀಕರ್ ಯುಟಿ ಖಾದರ್ 10 ಸದಸ್ಯರನ್ನು ಹಾಲಿ ಅಧಿವೇಶನದಿಂದ ಅಮಾನತು ಮಾಡಿದ್ದರು. ಈ ಬೆಳವಣಿಗೆ ಬೆನ್ನಲ್ಲೇ ವಿಪಕ್ಷ ಗಳು ಸ್ಪೀಕರ್ ವಿರುದ್ಧವೇ ಅವಿಶ್ವಾಸ ನೋಟಿಸ್ ನೀಡಿವೆ. ವಿಧಾನಸಭೆಯಲ್ಲಿ ದಿನದ ಕಲಾಪ ಆರಂಭವಾದಾಗಿನಿಂದ ಪ್ರತಿಪಕ್ಷ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸದನದ ಬಾವಿಗಿಳಿದು ಪ್ರತಿಭಟನೆ ನಡೆಸುತ್ತಿದ್ದು, ಕಾಂಗ್ರೆಸ್ ಸರ್ಕಾರವು 30 ಐಎಎಸ್ ಅಧಿಕಾರಿಗಳನ್ನು ತನ್ನ ಮೈತ್ರಿಕೂಟದ ನಾಯಕರ ಸೇವೆಗೆ ನಿಯೋಜಿಸಿದೆ ಎಂದು ಆರೋಪಿಸಿ ಪ್ರತಿಭಟನೆ ನಡೆಸುತ್ತಿವೆ. 2024ರ ಲೋಕಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಸೋಮವಾರ ಮತ್ತು ಮಂಗಳವಾರ ನಗರದಲ್ಲಿ ವಿಪಕ್ಷಗಳ ಸಭೆ ನಡೆಸಲಾಗಿತ್ತು.

ಜೀವನದ ಕಷ್ಟ ಎದುರಿಸಲು ಪಠ್ಯೇತರ ಚಟುವಟಿಕೆ ಸಹಕಾರಿ

ಮೈಸೂರು,ಜು.19(ಸಿಎನ್)–ಶಿಕ್ಷಣ ಹಾಗೂ ಪಠ್ಯೇತರ ಚಟುವಟಿಕೆ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ವಿದ್ಯೆ ಜೊತೆ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗಿಯಾಗುವ ಮೂಲಕ ಜೀವನದಲ್ಲಿ ಎದುರಾಗುವ ತೊಂದರೆಗಳನ್ನು ಮೆಟ್ಟಿ ನಿಂತು ಪರಿಸ್ಥಿತಿಯನ್ನು ನಿಭಾಯಿಸುವ ಕಲೆ ಕರಗತ ಮಾಡಿಕೊಳ್ಳಬೇಕು ಎಂದು ಕೆ.ಆರ್.ನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಪ್ರೊ.ಮೈಸೂರು ಕೃಷ್ಣಮೂರ್ತಿ ಸಲಹೆ ನೀಡಿದರು.

ನಗರದ ವಿದ್ಯಾವರ್ಧಕ ಕಾಲೇಜಿನಲ್ಲಿ ವಿದ್ಯಾವರ್ಧಕ ಸಂಘದ ಸಂಯೋಗದಲ್ಲಿ ಬುಧವಾರ ಆಯೋಜನೆ ಮಾಡಲಾಗಿದ್ದ 2022–23ನೇ ಸಾಲಿನ ಪಠ್ಯೇತರ ಚಟುವಟಿಕೆ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ವಿದ್ಯಾರ್ಥಿಗಳು ಶಿಕ್ಷಣದ ಅವಧಿಯಲ್ಲಿ ಕಲಿಯಲೇಬೇಕಾದ ಬದುಕಿನ ಎರಡು ಪ್ರಮುಖ ಅಂಶಗಳೆಂದರೆ ಪಠ್ಯ ಮತ್ತು ಪಠ್ಯೇತರ ಶಿಕ್ಷಣ. ನಮ್ಮೊಳಗಿರುವ ಅಹಂಕಾರವನ್ನು ನಾಶ ಮಾಡುವುದು ಯಾವುದೋ ಅದೇ ವಿದ್ಯೆ ಎಂಬ ಕುವೆಂಪುರವರ ಮಾತುಗಳಲ್ಲಿ ಶಿಕ್ಷಣಕ್ಕಿರುವ ಮಹತ್ವವನ್ನು ಅರಿಯಬಹುದಾಗಿದೆ ಎಂದರು.

ಜೀವನವೆಂಬುದು ಚಕ್ರವ್ಯೂಹವಿದ್ದಂತೆ, ಅದನ್ನು ಸಮರ್ಥವಾಗಿ ಎದುರಿಸಲು ಪಠ್ಯೇತರ ಚಟುವಟಿಕೆಗಳು ಅತ್ಯಂತ ಸಹಾಯಕಾರಿ. ಉನ್ನತ ಅಧಿಕಾರಿ, ವೈದ್ಯರಂತಹ ಮಹತ್ವದ ಹುದ್ದೆಗಳಲ್ಲಿರುವ ವ್ಯಕ್ತಿಗಳು ಜೀವನದ ಸಣ್ಣಪುಟ್ಟ ಸಮಸ್ಯೆಗಳನ್ನು ಎದುರಿಸಲಾರದೇ ಆತ್ಮಹತ್ಯೆಗೆ ಶರಣಾಗುತ್ತಿರುವುದು ಇತ್ತೀಚೆಗೆ ಸಹಜವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.



ಶಿಕ್ಷಣದ ಸಮಯದಲ್ಲಿ ಕೇವಲ ಪಠ್ಯಕ್ಕೆ ಸೀಮಿತರಾಗದೇ ಯಾರು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಅನುಭವ ಗಳಿಸಿರುತ್ತಾರೋ ಅಂಥವರು ಜೀವನವೆಂಬ ಪಂದ್ಯದಲ್ಲಿ ಯಶಸ್ಸನ್ನು ಗಳಿಸುತ್ತಾರೆ. 'ಮನವ ನೋಯಿಸದವನೇ ಮುಕ್ಕಣ್ಣ ಕಾಣ' ಎಂಬ ವಚನಕಾರರ ಆಶಯದಂತೆ ಮನುಷ್ಯ ತನ್ನಲ್ಲಿರುವ ಅಹಂಕಾರವನ್ನು ನಾಶಗೊಳಿಸಿಕೊಳ್ಳಬೇಕು. ಅಲ್ಲದೇ ಎಲ್ಲಾ ಬಗೆಯ ಕಲೆಗಳನ್ನು ಕರಗತ ಮಾಡಿಕೊಂಡು ಪರಮ ಆಧ್ಯಾತ್ಮಿಕ ಯುಗ ನಿರ್ಮಾಣಕ್ಕೆ ಮುನ್ನಡಿ ಬರೆಯಿರಿ ಎಂದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಬಳಿಕ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಭಾರತದ ಒಟ್ಟು ಜನಸಂಖ್ಯೆಯ ಅರ್ಧದಷ್ಟು ಯುವಜನರಿದ್ದು, ಜಗತ್ತನ್ನು ಮುನ್ನಡೆಸುವ ಶಕ್ತಿ ಯುವಪೀಳಿಗೆ ಹೆಗಲಿಗಿದೆ. ಹಲವು ಉದ್ಯಮಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು ಭಾರತೀಯರಾಗಿದ್ದು, ಯುವಜನರು ಉದ್ಯೋಗಗಳನ್ನು ಗಳಿಸಿಕೊಳ್ಳಲು ಕೃತಕ ಬುದ್ಧಿಮತ್ತೆ ಹಾಗೂ ಮೆಷಿನ್ ಲರ್ನಿಂಗ್‌ನಂತಹ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಂಡು, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಬದುಕು ಕಟ್ಟಿಕೊಳ್ಳುವಂತೆ ಸಲಹೆ ನೀಡಿದರು.

ಸಾಂಸ್ಕೃತಿಕ ಹಾಗೂ ಕ್ರೀಡೆ, ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ಸಮಗ್ರ ಪ್ರಶಸ್ತಿಗಳಿಸಿದ ಶೋಭ, ಭಾವನಾ, ಜಾನ್‌ಪಾಲ್, ಮಧುಮೈತ್ರಿ ಇನ್ನಿತರೆ ಹಲವು ವಿದ್ಯಾರ್ಥಿಗಳಿಗೆ ಬಹುಮಾನ ಹಾಗೂ ಪ್ರಮಾಣ ಪತ್ರಗಳನ್ನು ಸಂಸ್ಥೆಯ ಮುಖ್ಯಸ್ಥ ಗುಂಡಪ್ಪಗೌಡ ವಿತರಿಸಿ, ಅಭಿನಂದಿಸಿದರು. ಸಮಾರಂಭದಲ್ಲಿ ಸಂಘದ ಖಜಾಂಚಿ ಶ್ರೀಶೈಲ ರಾಮಣ್ಣವರ್, ಕಾಲೇಜಿನ ಪ್ರಾಚಾರ್ಯ ಎಸ್.ಮರಿಗೌಡ, ಸಿಬ್ಬಂದಿ ಸಲಹೆಗಾರ ಪ್ರಾಧ್ಯಾಪಕ ಟಿ.ಸತೀಶ್, ಪ್ರಾಧ್ಯಾಪಕ ಶ್ರೀನಿವಾಸ್, ಬೋಧಕರು, ಬೋಧಕೇ ತರ ಸಿಬ್ಬಂದಿ, ನಿರೂಪಕರಾದ ಕು.ಕೀರ್ತನ, ಕು.ರಹೀಮಾ ರೋಷನಿ, ವಿದ್ಯಾರ್ಥಿಗಳಾದ ಬಿ.ಜಿ.ಮುಕೇಶ್, ಟಿ.ವೈ.ಯಶಸ್, ಗೌತಮ್ ಗೌಡ ಮತ್ತಿತರ ವಿದ್ಯಾರ್ಥಿಗಳು ಭಾಗಿಯಾಗಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಬಿಹಾರದಲ್ಲಿ PFI ಮಾಸ್ಟರ್ ಟ್ರೈನರ್ ಯಾಕೂಬ್ ಬಂಧನ



ಪಾಟ್ನಾ, ಜು.19– ಪಿಎಫ್ಐ ಪ್ರಕರಣದಲ್ಲಿ ಬಿಹಾರ ಎಟಿಎಸ್‌ಗೆ ದೊಡ್ಡ ಯಶಸ್ಸು ಸಿಕ್ಕಿದೆ. ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್ಐ) ಮಾಸ್ಟರ್ ಟ್ರೈನರ್ ಸುಲ್ತಾನ್ ಉಸ್ಮಾನ್ ಖಾನ್ ಅಲಿಯಾಸ್ ಯಾಕೂಬ್‌ನನ್ನು ಎಟಿಎಸ್, ಪೂರ್ವ ಚಂಪಾರಣ್ ಪೊಲೀಸರು ಬಂಧಿಸಿದ್ದಾರೆ.

ಜಿಲ್ಲೆಯ ಚಾಕಿಯಾ ಪೊಲೀಸ್ ಠಾಣೆ ವ್ಯಾಪ್ತಿಯ ಬನ್ಸ್‌ಘಾಟ್ ಗವಾಂದ್ರದಿಂದ ಯಾಕೂಬ್‌ನನ್ನು ಬಂಧಿಸಲಾಗಿದೆ. ಎನ್ಐಎ, ಎಟಿಎಸ್ ಮತ್ತು ಪಾಟ್ನಾ ಮತ್ತು ಪೂರ್ವ ಚಂಪಾರಣ್ ಪೊಲೀಸರು ಬಹಳ ಸಮಯದಿಂದ ನಿಗಾ ಇರಿಸಿದ್ದರು. ಈತ ಚಾಕಿಯ ವಾರ್ಡ್ ಸಂಖ್ಯೆ 20ರ ನಿವಾಸಿ. ಇದಕ್ಕೂ ಮುನ್ನ ಚಾಕಿಯಾದ ಗಾಂಧಿ ಮೈದಾನದಲ್ಲಿ ತರಬೇತಿ ನೀಡುವ ವಿಡಿಯೋ ವೈರಲ್ ಆಗಿತ್ತು.

ಯಾಕೂಬ್ ಸೆರೆ ಸಿಕ್ಕಿರುವ ಮಾಹಿತಿ ಮೇರೆಗೆ ಎನ್ಐಎ ತಂಡ ಚಾಕಿಯಾ ತಲುಪಿದೆ. ಆತನನ್ನು ರಹಸ್ಯ ಸ್ಥಳದಲ್ಲಿ ವಿಚಾರಣೆ ನಡೆಸಲಾಗುತ್ತಿದೆ. ಪಿಎಫ್ಐನ ಸಕ್ರಿಯ ಸದಸ್ಯ ಸುಲ್ತಾನ್ ಉಸ್ಮಾನ್ ಖಾನ್ ಅಲಿಯಾಸ್ ಯಾಕೂಬ್ ನಾಲ್ಕು ವರ್ಷಗಳ ಹಿಂದೆ ಚಕಿಯಾದ ಗಾಂಧಿ ಮೈದಾನದಲ್ಲಿ ಪಿಎಫ್ಐ ತರಬೇತಿ ಶಿಬಿರವನ್ನು ಸ್ಥಾಪಿಸಿದ ನಂತರ ಬೆಳಕಿಗೆ ಬಂದಿದ್ದನು. ಆ ಸಮಯದಲ್ಲಿ, ಚಾಕಿಯಾ ಸೇರಿದಂತೆ ಸುತ್ತಮುತ್ತಲಿನ ಪ್ರದೇಶದಲ್ಲಿ ಪಿಎಫ್ಐನ ಪೋಸ್ಟರ್ ಬ್ಯಾನರ್‌ಗಳನ್ನು ಸಹ ಅಳವಡಿಸಲಾಗಿತ್ತು. ಇದಾದ ಬಳಿಕ ಸುಲ್ತಾನ್ ಬಂಧನಕ್ಕೆ ಎನ್ ಐಎ ತಂಡ ನಿರಂತರವಾಗಿ ದಾಳಿ ನಡೆಸಿತ್ತು.

ಕಳೆದ ವರ್ಷ ಪಾಟ್ನಾದ ಫುಲ್ವಾರಿ ಶರೀಫ್‌ನಲ್ಲಿ ಪಿಎಫ್ಐ ಭಯೋತ್ಪಾದಕ ತರಬೇತಿ ಘಟಕವನ್ನು ಭೇದಿಸಿದ ನಂತರ ಅಥರ್ ಮತ್ತು ಜಲ್ಲಾಲುದ್ದೀನ್ ಅವರನ್ನು ಬಂಧಿಸಲಾಗಿತ್ತು. ಆತನ ಬಂಧನದ ನಂತರವೇ ಪೂರ್ವ ಚಂಪಾರಣ್ ಜಿಲ್ಲೆಯ ಚಕಿಯಾದಲ್ಲಿ ಪಿಎಫ್ಐ ಸಂಘಟನೆ ಸಕ್ರಿಯವಾಗಿದೆ ಎಂದು ವರದಿಯಾಗಿದೆ. ಚಾಕಿಯಾದಲ್ಲಿ ಎನ್ಐಎ ಈಗಾಗಲೇ ಹಲವು ಶಂಕಿತರ ಮೇಲೆ ದಾಳಿ ನಡೆಸಿದೆ.

ಎತ್ತರದ ಕಟ್ಟಡಗಳ ನಿರ್ಮಾಣಕ್ಕೆ ರಾಜ್ಯ ಅಗ್ನಿಶಾಮಕ ಇಲಾಖೆ ಎನ್‌ಓಸಿ ಅವಶ್ಯ

ಮೈಸೂರು, ಜು.19(ಸಿಎನ್)–ಎತ್ತರದ ಕಟ್ಟಡಗಳ ನಿರ್ಮಾಣಕ್ಕೆ ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ (ಎನ್‌ಓಸಿ)ವನ್ನು ಪಡೆಯತಕ್ಕದ್ದು ಎಂದು ರಾಜ್ಯಪಾಲರು ಆದೇಶ ಹೊರಡಿಸಿದ್ದಾರೆ.

ಅಗ್ನಿಶಾಮಕ ಮತ್ತು ಜೀವಸುರಕ್ಷತೆಗೆ ಸಂಬಂಧಿಸಿದಂತೆ, ರಾಷ್ಟ್ರೀಯ ಕಟ್ಟಡ ಸಂಹಿತೆ 2016ರ ಉಪಬಂಧಗಳಿಗೆ ಒಳಪಟ್ಟು ಎತ್ತರದ ಕಟ್ಟಡದ ನಿರ್ಮಾಣಕ್ಕೆ (21 ಮೀಟರ್‌ಗಳು ಅಥವಾ ಅದಕ್ಕಿಂತ ಹೆಚ್ಚಿನ ಎತ್ತರದ ಕಟ್ಟಡ) ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯು ನಿರಾಕ್ಷೇಪಣಾ ಪತ್ರ ನೀಡುವಾಗ ನಿಯಮಾನುಸಾರ ಕಾರ್ಯವಿಧಾನವನ್ನು ಅನುಸರಿಸಿ ಶುಲ್ಕವನ್ನು ಸಂಗ್ರಹಿಸತಕ್ಕದ್ದು ಎಂದು

ಕರ್ನಾಟಕ ಅಗ್ನಿಶಾಮಕ ದಳ ಅಧಿನಿಯಮ 1964(1964ರ ಕರ್ನಾಟಕ ಅಧಿನಿಯಮ 42)ನ್ನು ಮತ್ತಷ್ಟು ತಿದ್ದುಪಡಿ ಮಾಡಿ ಕರ್ನಾಟಕ ರಾಜ್ಯ ಪತ್ರದಲ್ಲಿ ಆದೇಶ ಹೊರಡಿಸಲಾಗಿದೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮೈಸೂರು ಮಿತ್ರ

ನಾಲೆಗೆ ನೀರು ಹರಿಸಲು ಆಗ್ರಹಿಸಿ ರೈತರಿಂದ ಹೆದ್ದಾರಿ ತಡೆ



ಶ್ರೀರಂಗಪಟ್ಟಣ, ಜು.19– ಕೃಷಿ ಬೆಳೆಗಳಿಗೆ ಹಾಗೂ ಜನಜಾನುವಾರುಗಳಿಗೆ ಜಲಾಶಯದಿಂದ ಎಲ್ಲಾ ನಾಲೆ ಹಾಗೂ ಕಾಲುವೆಗಳಿಗೆ ನೀರು ಹರಿಸಬೇಕೆಂದು ನೂರಾರು ರೈತರು ಬುಧವಾರ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣದ ಕುವೆಂಪು ವೃತ್ತದ ಬಳಿಯಿಂದ ಮೈಸೂರು –ಬೆಂಗಳೂರು ಹೆದ್ದಾರಿ ತಡೆದು, ಶೀಘ್ರವಾಗಿ ನಾಲೆಗಳಿಗೆ ನೀರು ಹರಿಸುವಂತೆ ಒತ್ತಾಯಿಸಿ 45 ನಿಮಿಷಗಳಿಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿ ರಾಜ್ಯ ಸರ್ಕಾರ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ನಂತರ ಮಾತನಾಡಿದ ರೈತಸಂಘದ ಜಿಲ್ಲಾ ಕಾರ್ಯದರ್ಶಿ ಪಾಂಡು, ಕಳೆದ ಬಾರಿ ಕೆಆರ್‌ಎಸ್ ಅಣೆಕಟ್ಟೆಯಲ್ಲಿ 124 ಅಡಿಗಳಷ್ಟು ಸಂಪೂರ್ಣ ಭರ್ತಿ ನೀರು ತುಂಬಿದರೂ ಕೂಡ ಅದನ್ನು ಸರಿಯಾಗಿ ನಿರ್ವಹಣೆ ಮಾಡದೆ ಅಧಿಕಾರಿಗಳು ಮಾಡಿರುವ ತಪ್ಪಿನಿಂದಾಗಿ ಇಂದು ಅಣೆಕಟ್ಟೆಯನ್ನು ಬರಿದು ಮಾಡಿ ನಮ್ಮ ಬೆಳೆಗಳನ್ನು ಒಣಗಿಸುತ್ತಿದ್ದಾರೆ. ಅಧಿಕಾರಿಗಳ ಬೇಜಾಬ್ದಾರಿಯಿಂದ ರೈತ ಸಂಕಷ್ಟಕ್ಕೆ ಸಿಲುಕಿ ನಲುಗುತ್ತಿದ್ದಾನೆ ಇಂದು ಸಂಜೆ ವೇಳೆಗೆ ಎಲ್ಲಾ ನಾಲೆ ಹಾಗೂ ಕಾಲುವೆಗಳಿಗೆ ನೀರು ಬಿಡದಿದ್ದರೆ ನಾಳೆಯಿಂದ ನಮ್ಮ ಜಾನುವಾರುಗಳ ಸಮೇತ ಎಲ್ಲಾ ರೈತರು ಹೋರಾಟಕ್ಕೆ ಇಳಿಯ ಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ರೈತಸಂಘದ ತಾಲೂಕು ಅಧ್ಯಕ್ಷ ಕೃಷ್ಣೇಗೌಡ ಮಾತನಾಡಿ, ರೈತ ತನ್ನ ಜಮೀನಿನಲ್ಲಿ ಬೆಳೆ ನೋಡಿ ಕಣ್ಣೀರಿಡುತ್ತಿದ್ದಾನೆ. ಪ್ರಸ್ತುತ ದಿನಗಳಲ್ಲಿ ಅಂತರ್ ಜಲ ಕುಸಿದಿದೆ, ಅಣೆಕಟ್ಟೆಯಲ್ಲಿ ನೀರಿದ್ದಾಗ ಅಧಿಕಾರಿಗಳು ಬೇಕಾಬಿಟ್ಟಿ ಹರಿಸಿದ್ದಾರೆ, ನೀರನ್ನು ಮಿತವಾಗಿ ಬಳಸಿದ್ದರೆ ಈ ಬಾರಿಯ ವ್ಯವಸಾಯಕ್ಕೆ ಬರ ಎದುರಾಗುತ್ತಿರಲಿಲ್ಲ. ನೀರಾವರಿ ಇಲಾಖೆಯ ಅಧಿಕಾರಿಗಳು ಬೇಜವಾಬ್ದಾರಿಯಿಂದ ನೀರನ್ನು ಹರಿಸಿದ್ದ ಪರಿಣಾಮ ಇಂದು ಬರ ಎದುರಾಗಿದೆ, ನಾವು ನಮ್ಮ ಜಾನುವಾರುಗಳಿಗೆ ಒಂದು ಕಿ.ಮೀ ದೂರದ ಹೊಳೆಗೆ ಹೋಗಿ ನೀರು ಕುಡಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಗ್ರಾಮಗಳಲ್ಲಿ ಕುಡಿಯುವ ನೀರನ್ನು ಮೂರು ದಿನಕ್ಕೆ ಒಂದು ಬಾರಿ ಬಿಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಜಲ ಕ್ಷಾಮ ಮತ್ತಷ್ಟು ಉಲ್ಬಣಿಸಲಿದೆ, ರೈತ ಬದುಕಿದರೆ ಮಾತ್ರ ದೇಶ ಉಳಿಯುವುದು. ರೈತ ಸತ್ತರೆ ದೇಶವೇ ಅಧೋಗತಿಗೆ ಬೀಳಲಿದೆ, ರೈತ ಕೊಡುವ ತೆರಿಗೆ ಸರ್ಕಾರ ಖಜಾನೆ ತುಂಬುತ್ತದೆ. ಆದರೆ ರೈತರ ಸಂಕಷ್ಟಕ್ಕೆ ಮಾತ್ರ ಸರ್ಕಾರ ಮುಂದಾಗುತ್ತಿಲ್ಲಾ. ನಾಳೆಯಿಂದ ನಾಲೆಗಳಿಗೆ ಕನಿಷ್ಠ 20 ದಿನ ನೀರು ಬಿಡದಿದ್ದರೆ ಅಂದಾಜು 2 ಸಾವಿರ ಕೋಟಿ ಬೆಳೆ ನಷ್ಟವನ್ನು ರೈತರು ಅನುಭವಿಸಬೇಕಾಗುತ್ತದೆ ಹಾಗಾಗಿ ನೀರು ಬಿಡದಿದ್ದರೆ ಮುಂದಿನ ದಿನಗಳಲ್ಲಿ ರೈತ ಸಂಘ ಉಗ್ರ ಹೋರಾಟ ನಡೆಸ ಬೇಕಾಗುತ್ತದೆ ಎಂದು ಎಚ್ಚರಿಸಿದರು.

" ನಮ್ಮ ನಿರೀಕ್ಷೆಗೆ ಅನುಗುಣವಾಗಿ ಈ ಬಾರಿ ಮಳೆ ಬಾರದ್ದರಿಂದ ಕೆಆರ್‌ಎಸ್ ಅಣೆಕಟ್ಟೆ ತುಂಬಿಲ್ಲದ ಕಾರಣ ನೀರಿನ ಕೊರತೆ ಎದುರಾಗಿದೆ. ಪ್ರಸ್ತುತ ಸರಿ ಸುಮಾರು 2022 ಕ್ಯೂಸೆಕ್ ನೀರು ಒಳ ಹರಿವಿನ ಮೂಲಕ ಬರುತ್ತಿದ್ದು, ಅದು ಕೂಡ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಕಳೆದ ಬಾರಿ ಈ ಅವಧಿಯಲ್ಲಿ ನಮ್ಮ ಜಲಾಶಯ ಭರ್ತಿ ತುಂಬಿತ್ತು. ಈಗಿರುವ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಅವಶ್ಯಕತೆಗೆ ಮಾತ್ರ ನಮ್ಮ ಮೊದಲ ಆದ್ಯತೆಯಾಗಿದೆ. 4 ರಿಂದ 5 ಟಿಎಂಸಿ ಬಳಕೆಗೆ ಲಭ್ಯವಿದೆ. ಅದನ್ನು ನೋಡಿಕೊಂಡು ಡೆಡ್ ಸ್ಟೋರೆಜ್ ನೋಡಿಕೊಂಡು ನೀರಾವರಿ ತಂಡ ರಚಿಸಿದ್ದು, ಈಗ ಬೆಳೆದು ನಿಂತಿರುವ ಬೆಳೆಗೆ ನೀರು ಕೊಡಬಹುದಾ ಹಾಗೆ, ನೀಡಿದರೆ ಕುಡಿಯುವ ನೀರಿಗೆ ಕೊರತೆಯಾಗುವುದಿಲ್ಲವಾ ಎಂಬೆಲ್ಲಾ ಚರ್ಚೆಗಳು ನಡೆಯುತ್ತಿದ್ದು, ಶೀಘ್ರವೇ ನೀರಾವರಿ ಇಲಾಖೆಯ ತಂಡ ತನಿಖೆ ಮಾಡಿ ವರದಿ ನೀಡಲಿದೆ. ಆ ವರದಿಯನ್ನು ನಾವು ಕಾವೇರಿ ನೀರಾವರಿ ಸಲಹಾ ಸಮಿತಿ ಪ್ರಸ್ತಾವನೆಗೆ ಇಟ್ಟು ನಿರ್ಧರಿಸಬೇಕಿದೆ.

–ಡಾ.ಕುಮಾರ್, ಜಿಲ್ಲಾಧಿಕಾರಿ

ಕೆಎಸ್‌ಆರ್‌ಟಿಸಿ ಬಸ್ ಚಾಲಕನ ಮೇಲೆ ಯುವಕರಿಂದ ಹಲ್ಲೆ

ಮದ್ದೂರು, ಜು.19– ಕೆಎಸ್‌ಆರ್‌ಟಿಸಿ ಚಾಲಕನ ಮೇಲೆ ಯುವಕರು ಹಲ್ಲೆ ಮಾಡಿರುವ ಘಟನೆ ತಾಲೂಕಿನ ಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯ ನಂಬಿ ನಾಯಕನಹಳ್ಳಿ ಗ್ರಾಮದಲ್ಲಿ ಜರುಗಿದೆ.

ಕೊಪ್ಪದಿಂದ ನಂಬಿನಾಯಕನಹಳ್ಳಿ ಮಾರ್ಗವಾಗಿ ರಾಯಶೆಟ್ಟಿಪುರ ಗ್ರಾಮಕ್ಕೆ ತೆರಳುತ್ತಿದ್ದ ಸಾರಿಗೆ ಬಸ್ ಚಾಲಕ ಶಿವಶರಣಪ್ಪ ಅವರನ್ನು ಕುಡಿದ ಅಮಲಿನಲ್ಲಿ ಅಡ್ಡಗಟ್ಟಿದ ರಾಯಶೆಟ್ಟಿಪುರದ ಜೀವನ್, ರಾಜೇಶ್ ಮತ್ತು ನಂಬಿನಾಯಕನಹಳ್ಳಿ ಗ್ರಾಮದ ಪುನೀತ್‌ರವರು ಹಲ್ಲೆ ಮಾಡಿದ್ದಾರೆ.

ತೀವ್ರ ಅಸ್ವಸ್ಥಗೊಂಡ ಚಾಲಕ ಶಿವಶರಣಪ್ಪ ಮದ್ದೂರು ತಾಲೂಕು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಈ ಸಂಬಂಧ ಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರು ಮಂದಿ ಆರೋಪಿಗಳು ಸ್ಥಳದಿಂದ ಪರಾರಿಯಾಗಿದ್ದು ಆರೋಪಿಗಳ ಪತ್ತೆಗೆ ಕೊಪ್ಪ ಪಿಎಸ್‌ಐ ಶಿವಮಂಜು ಅಗತ್ಯ ಕ್ರಮವಹಿಸಿದ್ದಾರೆ.

ಕೆಆರ್‌ಎಸ್ ಬೃಂದಾವನದಲ್ಲಿ ನದಿಗೆ ಹಾರಿ ಯುವತಿ ಆತ್ಮಹತ್ಯೆ

ಶ್ರೀರಂಗಪಟ್ಟಣ, ಜು.19– ತಾಲೂಕಿನ ವಿಶ್ವ ವಿಖ್ಯಾತ ಕೆಆರ್.ಎಸ್ ಬೃಂದಾವನದಲ್ಲಿನ ದೋಣಿ ವಿಹಾರ ಕೇಂದ್ರದಲ್ಲಿನ ನದಿಗೆ ಹಾರಿ ನಂಜನಗೂಡು ತಾಲೂಕಿನ ಕೌಲಂದೆ ಹೋಬಳಿ ಮರಳಿಪುರದ ಯುವತಿ ಚೇತನಾಕುಮಾರಿ.ಡಿ.ಪಿ(40) ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಬುಧವಾರ ಮಧ್ಯಾಹ್ನ ನಡೆದಿದೆ.

ಬೃಂದಾವನದಲ್ಲಿನ ದೋಣಿ ವಿಹಾರದಲ್ಲಿ ಯುವತಿ ಶವ ತೇಲುತ್ತಿರುವ ಬಗ್ಗೆ ಕೆಲಸಗಾರರು ಕೆ.ಆರ್.ಸಾಗರ ಅಣೆಕಟ್ಟೆ ಮತ್ತು ಬೃಂದಾವನದ ಭದ್ರತೆಗೆ ನಿಯೋಜನೆಗೊಂಡಿರುವ ಕೆ.ಎಸ್.ಐ.ಎಸ್.ಎಫ್ ಸಿಬ್ಬಂದಿಗೆ ಮಾಹಿತಿ ನೀಡಿದ್ದರು,

ಮಾಹಿತಿ ಮೇರೆಗೆ ಕೆ.ಆರ್.ಸಾಗರ ಪೊಲೀಸ್ ಠಾಣೆ ಪಿಎಸ್ಸೈ ಬಸವರಾಜು ಭೇಟಿ ನೀಡಿ ತನಿಖೆ ನಡೆಸಿ ಮೃತರ ಸಹೋದರಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಶವ ಪರೀಕ್ಷೆಗೆ ಮೈಸೂರು ಕೆಆರ್.ಆಸ್ಪತ್ರೆ ಶವಾಗಾರಕ್ಕೆ ಸಾಗಿಸಲಾಗಿದೆ.

ಎಸಿ ಸ್ಫೋಟಗೊಂಡು ರಾಸಾಯನಿಕ ಅನಿಲ ಸೋರಿಕೆ; ಅಧಿಕಾರಿ ಸಾವು



- ಹಲವರು ಅಸ್ವಸ್ಥ; ಆಸ್ಪತ್ರೆಗೆ ದಾಖಲು
- ಕೊಪ್ಪ ಸಕ್ಕರೆ ಕಾರ್ಖಾನೆಯಲ್ಲಿ ದುರಂತ

ಮಂಡ್ಯ, ಜು. 19–ಎಸಿ ಸಿಲಿಂಡರ್ ಸ್ಫೋಟಗೊಂಡ ಪರಿಣಾಮ ರಾಸಾಯನಿಕ ಅನಿಲ ಸೋರಿಕೆಯಾಗಿ ಸಕ್ಕರೆ ಕಾರ್ಖಾನೆಯ ಅಧಿಕಾರಿಯೊಬ್ಬರು ಸಾವನ್ನಪ್ಪಿದ ಘಟನೆ ಮದ್ದೂರು ತಾಲೂಕು ಕೊಪ್ಪ ಗ್ರಾಮದಲ್ಲಿರುವ ಎನ್‌ಎಸ್‌ಎಲ್ ಸಕ್ಕರೆ ಕಾರ್ಖಾನೆಯಲ್ಲಿ ಬುಧವಾರ ರಾತ್ರಿ ಸಂಭವಿಸಿದೆ.

ಮೂಲತಃ ಶಿವಮೊಗ್ಗದವರಾಗಿದ್ದು, ಈ ಕಾರ್ಖಾನೆಯ ವಿದ್ಯುತ್ ವಿಭಾಗದ ಉಪ ವ್ಯವಸ್ಥಾಪಕರಾದ ಶ್ರೀಧರ್(58) ಮೃತಪಟ್ಟವರಾಗಿದ್ದು, ಇಲ್ಲಿನ ಇಬ್ಬರು ನೌಕರರು ಎಸಿಯಿಂದ ರಸಾಯನಿಕ ಅನಿಲ ಸೋರಿಕೆಯಿಂದ ಅಸ್ವಸ್ಥಗೊಂಡು ಮೈಸೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ವಿವರ: ಕಾರ್ಖಾನೆಯ ಪವರ್ ಪ್ಲಾಂಟ್‌ನಲ್ಲಿರುವ ಎಸಿಯ ಸಿಲಿಂಡರ್ ಸ್ಫೋಟಗೊಂಡು ಪ್ಲಾಂಟ್‌ನಲ್ಲಿದ್ದ ನೌಕರರು ಅಲ್ಲಿಂದ ಹೊರಗೆ ಓಡಿ ಬಂದಿದ್ದಾರೆ. ವಿಷಯ ತಿಳಿಯುತ್ತಲೇ ವಿದ್ಯುತ್ ವಿಭಾಗದ ಉಪ ವ್ಯವಸ್ಥಾಪಕರಾದ ಶ್ರೀಧರ್ ಅವರು, ಎಸಿ ಪರಿಶೀಲಿಸಲು ಪ್ಲಾಂಟ್ ಒಳಗೆ ತೆರಳಿದ್ದಾರೆ. ಆದರೆ ಸಿಲಿಂಡರ್ ಸ್ಫೋಟದಿಂದಾಗಿ ಸೋರಿಕೆಯಾಗಿದ್ದ ರಾಸಾಯನಿಕದಿಂದಾಗಿ ಶ್ರೀಧರ್ ಅಸ್ವಸ್ಥಗೊಂಡು ಕುಸಿದು ಬಿದ್ದಿದ್ದಾರೆ ಎಂದು ಹೇಳಲಾಗಿದೆ. ಅದನ್ನು ಗಮನಿಸಿದ ನೌಕರರು ತಕ್ಷಣವೇ ಪ್ಲಾಂಟ್‌ಗೆ ನುಗ್ಗಿ ಅವರನ್ನು ಹೊರಗೆ ಕರೆತಂದು, ಮಂಡ್ಯ ಆಸ್ಪತ್ರೆಗೆ ಕೊಂಡೊಯ್ಯುವ ಮಾರ್ಗ ಮಧ್ಯೆ ಅವರು ಸಾವನ್ನಪ್ಪಿದ್ದಾರೆ.

ರಾಸಾಯನಿಕ ಸೋರಿಕೆಯಿಂದ ಅಸ್ವಸ್ಥಗೊಂಡಿದ್ದ ಇಬ್ಬರು ನೌಕರರನ್ನು ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ದಾಖಲಿಸಲಾಗಿದ್ದು, ಅವರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ರಾಸಾಯನಿಕ ಸೋರಿಕೆ ವೇಳೆ ಅಲ್ಪ ಪ್ರಮಾಣದಲ್ಲಿ ಅಸ್ವಸ್ಥಗೊಂಡಿದ್ದ 6 ನೌಕರರು ಮಂಡ್ಯದ ಖಾಸಗಿ ಆಸ್ಪತ್ರೆಯಲ್ಲಿ ಹೊರರೋಗಿಗಳಾಗಿ ಚಿಕಿತ್ಸೆ ಪಡೆದಿದ್ದಾರೆ. ಘಟನಾ ಸ್ಥಳಕ್ಕೆ ಕೊಪ್ಪ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶಿವಮಂಜು ಅವರು ಭೇಟಿ ನೀಡಿದ್ದರಾದರೂ, ಕಾರ್ಖಾನೆಯವರು ಶಿವಮೊಗ್ಗದಿಂದ ಶ್ರೀಧರ್ ಅವರ ಸಂಬಂಧಿಕರು ಬಂದ ನಂತರ ದೂರು ಸಲ್ಲಿಸುವುದಾಗಿ ಹೇಳಿದ ಹಿನ್ನೆಲೆಯಲ್ಲಿ ಠಾಣೆಯಲ್ಲಿ ಇನ್ನೂ ದೂರು ದಾಖಲಾಗಿಲ್ಲ. ಆದರೆ ಸಬ್ ಇನ್ಸ್‌ಪೆಕ್ಟರ್ ಶಿವಮಂಜು ಈ ಘಟನೆ ಬಗ್ಗೆ ಹಿರಿಯ ಅಧಿಕಾರಿಗಳಿಗೆ ತಿಳಿಸಿದ್ದು, ಠಾಣಾ ಡೈರಿಯಲ್ಲಿ ನಮೂದಿಸಿದ್ದಾರೆ ಎಂದು ಹೇಳಲಾಗಿದೆ.

ಲಿಂಗಾಯುತ ಧರ್ಮವು ಸ್ವತಂತ್ರ ಪರಿಪೂರ್ಣ ಧರ್ಮವಾಗಿದೆ

ಚನ್ನಬಸವಾನಂದ ಸ್ವಾಮೀಜಿ ಅಭಿಮತ



ಭಾರತೀನಗರ, ಜು.19– ಲಿಂಗಾಯತ ಧರ್ಮವು ಸ್ವತಂತ್ರ ಪರಿಪೂರ್ಣ ಧರ್ಮವಾಗಿದೆ ಎಂದು ಬೆಂಗಳೂರು ಕುಂಬಳಗೂಡಿನ ಚನ್ನಬಸವೇಶ್ವರ ಜ್ಞಾನಪೀಠದ ಚನ್ನಬಸವಾನಂದ ಸ್ವಾಮೀಜಿ ತಿಳಿಸಿದರು.

ಇಲ್ಲಿನ ವೀರಶೈವ ಸಮುದಾಯ ಭವನದಲ್ಲಿ ನಡೆದ ಪ್ರವಚನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಲಿಂಗಾಯುತ ಧರ್ಮವು ಒಂದು ಜಾತಿಯಲ್ಲ, ಪಂಥವೂ ಅಲ್ಲ, ಇದೊಂದು ಸ್ವತಂತ್ರ ಪರಿಪೂರ್ಣ ಧರ್ಮವಾಗಿದೆ. ವೀರಶೈವ ಲಿಂಗಾಯತರಿಗೆ ಕೂಡಲಸಂಗಮ ಕ್ಷೇತ್ರ ಧರ್ಮ ಕ್ಷೇತ್ರವಾಗಿದೆ. ಕ್ಷೇತ್ರಕ್ಕೆ ಎಲ್ಲಾ ಲಿಂಗಾಯತ ಬಂಧುಗಳು ವರ್ಷಕ್ಕೊಮ್ಮೆ ಸಾಮೂಹಿಕವಾಗಿ ಆಗಮಿಸಬೇಕೆಂದರು.

ಮುಸಲ್ಮಾನರಿಗೆ ಮೆಕ್ಕಾ ಮದೀನಾ, ಬೌದ್ಧರಿಗೆ ಬುದ್ಧ ಗಂಯಾ, ಸಿಖ್‌ರಿಗೆ ಅಮೃತಸರ ಧಾರ್ಮಿಕ ಸ್ಥಳಗಳು ಇರುವಂತೆ ವೀರಶೈವ ಜನಾಂಗದವರಿಗೂ ಕೂಡಲಸಂಗಮ ಧರ್ಮ ಕ್ಷೇತ್ರವಾಗಿದೆ ಹೀಗಾಗಿ ಎಲ್ಲರೂ ಬಸವ ತತ್ವವನ್ನು ಅನುಸರಿಸಿ, ಎಲ್ಲೆಡೆ ಲಿಂಗಾಯತ ಧರ್ಮದ ಪ್ರತಿಪಾದನೆಯಾಗಬೇಕು ಎಂದರು. ವಿಶ್ವಗುರು ಬಸವೇಶ್ವರರು ಬಸವ ಕಲ್ಯಾಣದಲ್ಲಿ ಸ್ಥಾಪಿಸಿದ ಅನುಭವ ಮಂಟಪ ಜಗತ್ತಿನ ಪ್ರಜಾಪ್ರಭುತ್ವ ವ್ಯವಸ್ಥೆಯ ಮೊದಲೇ ಸಂಸತ್ ಆಗಿದೆ. ಅಲ್ಲಿ 770 ಮಂದಿ ಅಮರ ಗಣಂಗಳು ಇದ್ದರು. ಅಲ್ಲಮಪ್ರಭು ದೇವರು ಅಂದಿನ ಸಂಸತ್‌ನ ಮೊದಲ ಅಧ್ಯಕ್ಷರಾಗಿದ್ದರು. ಸೊಲ್ಲಾಪುರದ ಸಿದ್ದರಾಮೇಶ್ವರರು, ಜಗನ್ಮಾತಾ ಅಕ್ಕಮಹಾದೇವಿ, ಅಕ್ಕನಾಗಮ್ಮ, ಮಡಿವಾಳ ಮಾಚಿದೇವರು ಸೇರಿದಂತೆ ಅನೇಕರು ಪ್ರಮುಖ ಅನುಭವ ಮಂಟಪವೆಂಬ ಸಂಸತ್‌ನಲ್ಲಿ ಶರಣಾಗಿದ್ದರು ಎಂದು ತಿಳಿಸಿದರು.

ಕನಕಪುರ ತಾಲೂಕು ಸಾತನೂರು ಬಳಿಯಿಂದ ದಾಳಿಂಬ ಗ್ರಾಮದಲ್ಲಿ ನೂತನ ಅನುಭವ, ಬಸವ ಮಂಟಪ ನಿರ್ಮಿಸಲಾಗಿದೆ. ಅದರ ಲೋಕಾರ್ಪಣೆ ಜುಲೈ 23 ರಂದು ನಡೆಯಲಿದೆ. ಹೆಚ್ಚಿನ ಸಂಖ್ಯೆಯಲ್ಲಿ ಶರಣರು, ಬಸವ ಅನುಯಾಯಿಗಳು ಭಾಗವಹಿಸಬೇಕು ಎಂದು ಹೇಳಿದರು. ಈ ಸಂದರ್ಭದಲ್ಲಿ ವೀರಶೈವ ಮುಖಂಡರಾದ ವೈ.ಬಿ. ಶ್ರೀಕಂಠಸ್ವಾಮಿ, ಕಲ್ಲೇಶ್‌ಮೂರ್ತಿ, ಬಸವೇಶ್‌ಮೂರ್ತಿ, ಶಿವಪ್ರಕಾಶ್, ಮಾದೇಶ್, ಜಯಣ್ಣ, ಸಿದ್ದೇಶ್, ವಿನಯ್‌ಕುಮಾರ್, ಹಣ್ಣಿನ ಅಂಗಡಿ ಮಹದೇವು, ಮಹೇಶ್, ಮಲ್ಲಿಕಾರ್ಜುನ್, ಚಂದ್ರಣ್ಣ, ಶಿವರುದ್ರಪ್ಪ, ಮಲ್ಲೇಶ್, ಸೋಮಸುಂದರ್, ಕವಿತ ಹಲವರಿದ್ದರು.

ಲಂಚ ಸ್ವೀಕಾರ: ತಾಲೂಕು ಕಚೇರಿ ನೌಕರ ಲೋಕಾಯುಕ್ತ ಬಲೆಗೆ

ಮದ್ದೂರು, ಜು.19– ರೈತರಿಂದ ಲಂಚ ಸ್ವೀಕರಿಸುತ್ತಿದ್ದಾಗ ತಾಲೂಕು ಕಚೇರಿಯ ನೌಕರ ಲೋಕಾಯುಕ್ತರ ಬಲೆಗೆ ಬಿದ್ದಿರುವ ಘಟನೆ ಮದ್ದೂರಿನಲ್ಲಿ ನಡೆದಿದೆ. ಪಟ್ಟಣದ ತಾಲೂಕು ಕಚೇರಿಯ ಹಕ್ಕು ದಾಖಲಾತಿ ತಿದ್ದುಪಡಿ (ಆರ್‌ಆರ್‌ಟಿ) ಶಾಖೆಯ ಮಂಜುನಾಥ್ ಲೋಕಾಯುಕ್ತ ಪೊಲೀಸರಿಂದ ಬಂಧಿಸಲ್ಪಟ್ಟವನು.

ವಿವರ: ತಾಲೂಕಿನ ಬಿದರಮೇಳೆ ಕೊಪ್ಪಲು ಗ್ರಾಮದ ಮೋಹನ್‌ರ ಜಮೀನು ವಿವಾದ ಉಪ ವಿಭಾಗಾಧಿಕಾರಿ ನ್ಯಾಯಾಲಯದಲ್ಲಿದ್ದು, ಅದರ ತುರ್ತು ವಿಲೇವಾರಿಗಾಗಿ ಮಂಜುನಾಥರ ಬಳಿ ಹೋಗಿದ್ದಾಗ ಹಣ ನೀಡಬೇಕಾಗುತ್ತದೆ ಎಂದು ಹೇಳಿದ್ದರು.

ಈ ಹಿನ್ನೆಲೆಯಲ್ಲಿ ಲೋಕಾಯುಕ್ತಕ್ಕೆ ಮೋಹನ್ ದೂರು ಸಲ್ಲಿಸಿದ್ದರು. ಅದರಂತೆ ಲೋಕಾಯುಕ್ತ ಪೊಲೀಸರು ಕಾರ್ಯಾಚರಣೆಗೆ ಮುಂದಾಗಿದ್ದು, ತಾಲೂಕು ಕಚೇರಿಯ ಹೊರಭಾಗದ ಅಂಗಡಿ ಮಳಿಗೆ ಬಳಿ ಮೋಹನ್‌ರವರಿಂದ 10,000 ರೂ ಹಣ ಪಡೆಯುತ್ತಿದ್ದಾಗ ಮಂಜುನಾಥ್ ಲೋಕಾಯುಕ್ತ ವಶಕ್ಕೆ ಸಿಕ್ಕಿ ಬಿದ್ದಿದ್ದಾರೆ.

ಲೋಕಾಯುಕ್ತ ಎಸ್ಪಿ ಸುಜೀತ್‌ರವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಡಿವೈಎಸ್‌ಪಿ ಸುನಿಲ್‌ಕುಮಾರ್, ಇನ್‌ಸ್ಪೆಕ್ಟರ್ ಪ್ರಕಾಶ್, ಸಿಬ್ಬಂದಿಗಳಾದ ಶಂಕರ್, ಶರತ್, ಮಹಾದೇವಯ್ಯ, ನಂದೀಶ್, ಯೋಗೇಶ್ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು.

ಯಜಮಾನ್ ಕೋಡಿಗೌಡ ನಿಧನ



ಪಾಂಡವಪುರ: ತಾಲೂಕಿನ ಚಿಕ್ಕಾಡೆ ಗ್ರಾಮದ ಯಜಮಾನ್ ಕೋಡಿಗೌಡ(83) ಬುಧವಾರ ಮುಂಜಾನೆ ನಿಧನ ಹೊಂದಿದರು. ಅಂತ್ಯಕ್ರಿಯೆಯಲ್ಲಿ ತಾಲೂಕಿನ ಹಲವಾರು ಗಣ್ಯರು ಪಾಲ್ಗೊಂಡು ಅಂತಿಮ ದರ್ಶನ ಪಡೆದರು. ಮೃತರ ಸ್ವಗ್ರಾಮ ಚಿಕ್ಕಾಡೆಯ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು. ಮೃತರು ಪತ್ನಿ ನಿಂಗಮ್ಮ, ಸಹೋದರ ಜಿಪಂ ಮಾಜಿ ಅಧ್ಯಕ್ಷ ಸಿ.ಬಸವೇಗೌಡ, ಪುತ್ರ ಲಯನ್ಸ್ ಮಾಜಿ ಅಧ್ಯಕ್ಷ ಪ್ರಸನ್ನಕುಮಾರ್ ಸೇರಿದಂತೆ ಮೂವರು ಪುತ್ರರು, ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದಾರೆ.

ಒಂದನೇ ಪುಟದಿಂದ

ಹತ್ತು ಶಾಸಕರು ಅಮಾನತು

ಹೊರ ರಾಜ್ಯದ ಮುಖ್ಯಮಂತ್ರಿಗಳು ಹಾಗೂ ಕೇಂದ್ರದ ಮಾಜಿ ಸಚಿವರನ್ನು ನಮ್ಮ ರಾಜ್ಯದ ಅತಿಥಿಗಳೆಂದು ಪರಿಗಣಿಸಲಾಗುತ್ತದೆ. ಆ ಪದ್ಧತಿಯಂತೆ ಅವರನ್ನು ಅಧಿಕಾರಿಗಳು ಸ್ವಾಗತಿಸಿದ್ದಾರೆಯೇ ಹೊರತು, ರಾಜಕೀಯ ಕಾರ್ಯಕ್ರಮದಲ್ಲಿ ಅಧಿಕಾರಿಗಳು ಭಾಗವಹಿಸಿಲ್ಲ. ಇದೇ ರೀತಿ ಹೊರ ರಾಜ್ಯದ ಮುಖ್ಯಮಂತ್ರಿಗಳು ಮತ್ತು ಕೇಂದ್ರ ಸಚಿವರನ್ನು ಅಧಿಕಾರಿಗಳು ಆಹ್ವಾನಿಸಿರುವ ಘಟನೆಗಳು ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗಲೂ ನಡೆದಿತ್ತು. ಬೆಂಗಳೂರಿನಲ್ಲಿ ಬಿಜೆಪಿ ಕಾರ್ಯಕಾರಿಣಿ ಸಭೆ ನಡೆದಾಗ ಆಗ ಕೇಂದ್ರ ಸಚಿವರಾಗಿದ್ದ ಅನಂತಕುಮಾರ್ ಮತ್ತಿತರರನ್ನು ಅಧಿಕಾರಿಗಳು ಸ್ವಾಗತಿಸಿದ್ದರು. ಆ ಪದ್ಧತಿಯಂತೆ ಈಗಲೂ ಶಿಷ್ಟಾಚಾರದಂತೆ ನಡೆದಿದೆ ಎಂದು ಉತ್ತರಿಸಿದರು.

ಮುಖ್ಯಮಂತ್ರಿಗಳ ಉತ್ತರದ ನಂತರವೂ ವಿಧಾನಸಭೆಯಲ್ಲಿ ಗದ್ದಲ ಮುಂದುವರೆದಾಗ ಸ್ಪೀಕರ್ ಯು.ಟಿ. ಖಾದರ್ ಅವರು ಊಟದ ವಿರಾಮಕ್ಕೂ ಬಿಡದೆ ಕಲಾಪವನ್ನು ಮುಂದುವರೆಸಿದರು. ಈ ವೇಳೆ ಸ್ಪೀಕರ್ ಆಸನದಲ್ಲಿ ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿಯವರನ್ನು ಕುಳ್ಳಿರಿಸಿ ಯು.ಟಿ. ಖಾದರ್ ಹೊರ ಹೋಗುತ್ತಿದ್ದಂತೆಯೇ ಸಚಿವ ಹೆಚ್.ಕೆ. ಪಾಟೀಲ್ ಕೆಲವು ಮಸೂದೆಗಳನ್ನು ಮಂಡಿಸಲು ಮುಂದಾದರು. ಈ ವೇಳೆ ಕೆರಳಿದ ಬಿಜೆಪಿ ಸದಸ್ಯರು ಮಸೂದೆಯ ಕಾಗದಪತ್ರಗಳನ್ನು ಹರಿದು ಡೆಪ್ಯುಟಿ ಸ್ಪೀಕರ್ ಮೇಲೆಸೆಯುತ್ತ ಧಿಕ್ಕಾರದ ಘೋಷಣೆಗಳನ್ನು ಕೂಗಿದರು. ಈ ಸಂದರ್ಭದಲ್ಲಿ ಮಾರ್ಷಲ್‌ಗಳು ಡೆಪ್ಯುಟಿ ಸ್ಪೀಕರ್ ಬಳಿ ನಿಂತು ಅವರ ಮೇಲೆ ಬಿದ್ದ ಕಾಗದಪತ್ರಗಳನ್ನು ತೆರವುಗೊಳಿಸುತ್ತಿದ್ದರು. ಈ ವೇಳೆ ಮಾತನಾಡಿದ ರುದ್ರಪ್ಪ ಲಮಾಣಿ, ನೀವು (ವಿಪಕ್ಷಗಳು) ಈ ರೀತಿ ನಡೆಯುತ್ತಿರುವುದು ಸರಿಯಲ್ಲ. ನೀವು ಅಶಿಸ್ತಿನಿಂದ ಹಾಗೂ ಅಗೌರವದಿಂದ ನಡೆದುಕೊಳ್ಳುತ್ತಿದ್ದೀರಿ. ನಿಮ್ಮ ಈ ವರ್ತನೆಯನ್ನು ನಿಮ್ಮನ್ನು ಆರಿಸಿ ಕಳುಹಿಸಿದ ಜನ ನೋಡುತ್ತಿದ್ದಾರೆ. ಮಾತುಕತೆಗಾಗಿ ನಿಮ್ಮನ್ನು ಕರೆಯಲಾಗಿತ್ತು. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಬಂದಿದ್ದರು. ನೀವು ಬರಲಿಲ್ಲ. ನಿಮ್ಮ ನಿಮ್ಮ ಸ್ಥಳಗಳಿಗೆ ಹೋಗಿ ಕುಳಿತುಕೊಳ್ಳಿ. ಇಲ್ಲದಿದ್ದರೆ ನಿಮ್ಮನ್ನು ಹೊರ ಹಾಕಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರಾದರೂ ಗದ್ದಲ ಮುಂದುವರೆದಿತ್ತು. ಆಗ ಡೆಪ್ಯುಟಿ ಸ್ಪೀಕರ್ ಮಧ್ಯಾಹ್ನ 3 ಗಂಟೆವರೆಗೆ ಕಲಾಪವನ್ನು ಮುಂದೂಡಿದರು.

ನಂತರ ಮತ್ತೆ ಕಲಾಪ ಆರಂಭವಾದಾಗ ಹಾಜರಾದ ಸ್ಪೀಕರ್ ಯು.ಟಿ.ಖಾದರ್ ಮಾತನಾಡಿ, ಇಡೀ ವ್ಯವಸ್ಥೆಗೆ ಧಕ್ಕೆ ತರುವಂತಹ ಹಾಗೂ ಸದನಕ್ಕೆ ಅಗೌರವ ತರುವಂತಹ ಅಶಿಸ್ತು ಬೇಜವಾಬ್ದಾರಿತನದಿಂದ ನಡೆದುಕೊಂಡು ರಾಜ್ಯಕ್ಕೆ ಹಾಗೂ ಜನತೆಗೆ ಕಪ್ಪು ಚುಕ್ಕೆ ಬರುವಂತೆ ಮಾಡಿದರೆ ಅದನ್ನು ಈ ಪೀಠ ಸಹಿಸಿಕೊಳ್ಳಲು ಸಾಧ್ಯವಿಲ್ಲ. ದಯವಿಟ್ಟು ಎಲ್ಲರೂ ಸಹಕಾರ ನೀಡಬೇಕು ಎಂದು ಹೇಳುತ್ತಾ, ಶಾಸಕರಾದ ಅಶ್ವತ್ಥನಾರಾಯಣ, ವೇದವ್ಯಾಸ ಕಾಮತ್, ಅರವಿಂದ ಬೆಲ್ಲದ್, ಧೀರಜ್ ಮುನಿರಾಜು, ಯಶಪಾಲ್ ಸುವರ್ಣ, ಸುನೀಲ್‌ಕುಮಾರ್, ಆರ್.ಅಶೋಕ್, ಉಮಾನಾಥ್ ಕೋಟ್ಯಾನ್, ಆರಗ ಜ್ಞಾನೇಂದ್ರ, ಭರತ್ ಶೆಟ್ಟಿ ಅವರುಗಳು ಈ ಸದನಕ್ಕೆ ಅಗೌರವ ತಂದಿದ್ದಾರೆ. ಅಶಿಸ್ತಿನಿಂದ ನಡೆದುಕೊಂಡಿದ್ದಾರೆ ಎಂದು ಘೋಷಿಸಿದಾಗ, ಸಚಿವ ಹೆಚ್.ಕೆ. ಪಾಟೀಲ್ ಅವರು ಈ ಶಾಸಕರನ್ನು ಈ ಅಧಿವೇಶನ ಮುಗಿಯುವವರೆಗೆ ವಿಧಾನಸಭೆಗೆ ಬಾರದಂತೆ ಅಮಾನತುಗೊಳಿಸಬೇಕು ಎಂದು ಪ್ರಸ್ತಾವನೆ ಮಂಡಿಸಿದರು. ಇದನ್ನು ಧ್ವನಿಮತಕ್ಕೆ ಹಾಕಿದ ಸ್ಪೀಕರ್ ಖಾದರ್, ಪ್ರಸ್ತಾವನೆಯನ್ನು ಅಂಗೀಕರಿಸಿ, 10 ಶಾಸಕರನ್ನು ಅಮಾನತುಗೊಳಿಸಿ, ರೂಲಿಂಗ್ ನೀಡಿ, ಕಲಾಪವನ್ನು 10 ನಿಮಿಷ ಮುಂದೂಡಿದರು. ನಂತರವೂ ಸದನದಿಂದ ಹೊರ ಹೋಗದ ಅಮಾನತುಗೊಂಡ ಶಾಸಕರು ಬಾವಿಯಲ್ಲಿ ಕುಳಿತು ಧಿಕ್ಕಾರದ ಘೋಷಣೆಗಳನ್ನು ಕೂಗುತ್ತಿದ್ದಾಗ ಮಾರ್ಷಲ್‌ಗಳು ಒಬ್ಬೊಬ್ಬರನ್ನೇ ಹೊತ್ತೊಯ್ದು, ವಿಧಾನಸಭೆಯ ಹೊರಗೆ ಹಾಕಿದರು.

ತಳ್ಳಾಟದಲ್ಲಿ ಯತ್ನಾಳ್ ಅಸ್ವಸ್ಥ

ಕುಳಿತು ರಾಜ್ಯ ಸರ್ಕಾರ ಹಾಗೂ ಸ್ಪೀಕರ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನೆ ನಡೆಸುತ್ತಿದ್ದರು. ಈ ಪ್ರತಿಭಟನೆಯಲ್ಲಿ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೂಡ ಭಾಗವಹಿಸಿದ್ದರು. ಈ ವೇಳೆ ತಳ್ಳಾಟ–ನೂಕಾಟ ನಡೆದಿದ್ದು, ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅಸ್ವಸ್ಥಗೊಂಡು ಕುಸಿದು ಬಿದ್ದರು. ತಕ್ಷಣ ಅವರನ್ನು ಇತರೆ ಶಾಸಕರು, ಮಾರ್ಷಲ್‌ಗಳು ಹಾಗೂ ಪೊಲೀಸರು ಉಪಚರಿಸಿ, ಆಂಬುಲೆನ್ಸ್‌ನಲ್ಲಿ ಫೋರ್ಟಿಸ್ ಆಸ್ಪತ್ರೆಗೆ ರವಾನಿಸಿದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಯತ್ನಾಳ್ ಚೇತರಿಸಿಕೊಳ್ಳುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಸ್ಪೀಕರ್ ಯು.ಟಿ. ಖಾದರ್, ಡೆಪ್ಯುಟಿ ಸ್ಪೀಕರ್ ರುದ್ರಪ್ಪ ಲಮಾಣಿ, ಮಾಜಿ ಮುಖ್ಯಮಂತ್ರಿಗಳಾದ ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ, ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಹಲವಾರು ಸಚಿವರು, ಶಾಸಕರು ಹಾಗೂ ವಿವಿಧ ಪಕ್ಷದ ಮುಖಂಡರು ಆಸ್ಪತ್ರೆಗೆ ಭೇಟಿ ನೀಡಿ ಯತ್ನಾಳ್ ಅವರ ಆರೋಗ್ಯ ವಿಚಾರಿಸಿದರು.

ಇತ್ತ ಪ್ರತಿಭಟನೆ ನಿರತರಾಗಿದ್ದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಬಿಜೆಪಿ ಶಾಸಕರನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.





ವಿಧಾನಸೌಧದಲ್ಲಿ ನಡೆದ ನೂಕಾಟ–ತಳ್ಳಾಟದ ಸಂದರ್ಭದಲ್ಲಿ ಕುಸಿದು ಬಿದ್ದು, ಅಸ್ವಸ್ಥಗೊಂಡು ಈಗ ಬೆಂಗಳೂರಿನ ಫೋರ್ಟಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರನ್ನು ಬುಧವಾರ ಸಂಜೆ ಮುಖ್ಯಮಂತ್ರಿ ಸಿದ್ದರಾಮಯ್ಯ, ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಭೇಟಿಯಾಗಿ ಆರೋಗ್ಯ ವಿಚಾರಿಸಿದರು.

ಹಿಂದೆ ಬಿಜೆಪಿ ಮಾಡಿದ್ದನ್ನೇ ಈಗ ನಾವು ಮಾಡಿದ್ದೇವೆ ತಪ್ಪಾ...?

ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನೆ



ಬೆಂಗಳೂರು, ಜು.19(ಕೆಎಂಶಿ)– ನಾವು ಬಸವಣ್ಣನವರ ಸಂಸ್ಕಾರದಂತೆ ನುಡಿದಂತೆ ನಡೆದು ಐದು ಗ್ಯಾರಂಟಿಗಳನ್ನು ಜಾರಿ ಮಾಡಿದ್ದನ್ನು ನಾಡಿನ ಜನ ಸ್ವಾಗತಿಸಿದ್ದಾರೆ, ಸಂಭ್ರಮಿಸಿದ್ದಾರೆ. ಇದನ್ನು ಬಿಜೆಪಿ ಯವರಿಗೆ ಸಹಿಸಲು ಆಗುತ್ತಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದರು.

ವಿದಾನಸಭಾ ಅಧಿವೇಶನದಲ್ಲಿ ಬಿಜೆಪಿ ಸದಸ್ಯರು ಡೆಪ್ಯೂಟಿ ಸ್ಪೀಕರ್ ಮುಖಕ್ಕೆ ಪೇಪರ್ ಹರಿದು ಎಸೆದದ್ದು ಮತ್ತು ಸ್ಪೀಕರ್ ಪೀಠಕ್ಕೆ ಅವಮಾನಿಸಿದ್ದನ್ನು ವಿರೋಧಿಸಿ ಮಾತನಾಡಿದರು. ಕರ್ನಾಟಕ ವಿಧಾನ ಸಭೆಯಲ್ಲಿ ಇಂದು ಅತ್ಯಂತ ಬೇಸರದ ದಿನ. ನಮ್ಮ ಐದು ಗ್ಯಾರಂಟಿಗಳನ್ನು ನಾಡಿನ ಜನತೆ ಅತ್ಯಂತ ಹೃದಯಪೂರ್ವಕವಾಗಿ ಸ್ವಾಗತಿಸಿದ್ದು, ಬಿಜೆಪಿ ಶಾಸಕರ ಹೊಟ್ಟೆಗೆ ಬೆಂಕಿ ಬಿದ್ದಂತಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅರ್ಥಪೂರ್ಣ ವಿರೋಧ ಪಕ್ಷ ಇರಬೇಕು ಎನ್ನುವುದು ನನ್ನ ನಂಬಿಕೆ. ಈ ಕಾರಣಕ್ಕೇ ನಾವು ಬಿಜೆಪಿ ಮುಕ್ತ ಎನ್ನುವ ಮಾತನ್ನು ಯಾವತ್ತೂ ಆಡಿಲ್ಲ. ಇವರಿಗೆ ಪ್ರಜಾಪ್ರಭುತ್ವದ ಮೌಲ್ಯಗಳ ಬಗ್ಗೆ ಗೌರವ ಇಲ್ಲ ಎಂದರು.


ಅಂಬೇಡ್ಕರ್, ಬುದ್ಧ, ಬಸವ ಮುಂತಾದ ಮಹನೀಯರ ಪ್ರಜಾಪ್ರಭುತ್ವವಾದಿ ಮೌಲ್ಯಗಳ ಮುಂದುವರೆದ ಪರಂಪರೆಯ ಪ್ರಾತಿನಿಧಿಕ ಸಂಸ್ಥೆಯಾಗಿದ್ದ ವಿಧಾನ ಸಭೆಗೆ ಅಗೌರವ ತೋರಿಸಿದ್ದಾರೆ.

ಪ್ರಜಾಪ್ರಭುತ್ವ ಮಾದರಿಯಲ್ಲಿ ಮತ್ತು ಸದನದ ನಿಯಮಾವಳಿಗಳ ಆಧಾರದಲ್ಲಿ ಪ್ರತಿಭಟನೆ ನಡೆಸಲು ಬಿಜೆಪಿಯವರಿಗೆ ಅವಕಾಶ ಇತ್ತು. ಆದರೆ ಡೆಪ್ಯೂಟಿ ಸ್ಪೀಕರ್ ಮುಖಕ್ಕೆ ಪತ್ರ ಎಸೆಯುವುದು, ಸ್ಪೀಕರ್ ಪೀಠಕ್ಕೆ ಅವಮಾನ ಮಾಡುವುದು ನಿಯಮ ಬಾಹಿರ. ಇದು ಅನಾಗರಿಕ ನಡವಳಿಕೆಯಲ್ಲವೇ ಎಂದು ಪ್ರಶ್ನಿಸಿದರು.

ಹೆಚ್.ಡಿ.ಕುಮಾರಸ್ವಾಮಿ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭದ ಸಂದರ್ಭದಲ್ಲೂ ಐಎಎಸ್ ಅಧಿಕಾರಿಗಳನ್ನೇ ಲೈಸನಿಂಗ್ ಅಧಿಕಾರಿಗಳನ್ನಾಗಿ ಮಾಡಿದ್ದರು. ಅದೆಲ್ಲಾ ಅವರಿಗೆ ಮರೆತು ಹೋಯ್ತಾ? ದಿವಂಗತ ಅನಂತ್ ಕುಮಾರ್ ಅವರು ಬದುಕಿದ್ದಾಗ ರಾಜ್ಯದಲ್ಲಿ ನಡೆದ ಬಿಜೆಪಿ ಕಾರ್ಯಕಾರಣಿ ಸಭೆಗೆ ಬರುವ ಬಿಜೆಪಿ ರಾಷ್ಟ್ರೀಯ ನಾಯಕರನ್ನು ರಾಜ್ಯದ ಅತಿಥಿಗಳನ್ನಾಗಿ ಘೋಷಿಸಿ, ಆ ಶಿಷ್ಟಾಚಾರದಂತೆ ಕ್ರಮ ವಹಿಸಲು ನನ್ನ ಬಳಿ ಬಂದು ಮನವಿ ಮಾಡಿದ್ದರು. ಆಗ ನಾನು ಮುಖ್ಯಮಂತ್ರಿ ಆಗಿ ಬಿಜೆಪಿ ನಾಯಕರಿಗೆ ಶಿಷ್ಟಾಚಾರದ ಪ್ರಕಾರ ರಾಜ್ಯದ ಅತಿಥಿಗಳು ಎಂದು ಘೋಷಿಸಿ ಗೌರವ ನೀಡಿದ್ದೆವು. ಇದು ಬಿಜೆಪಿಯವರಿಗೆ ಸ್ಪಷ್ಟವಾಗಿ ಗೊತ್ತಿದ್ದೂ ಸುಳ್ಳು ಹೇಳುತ್ತಾ ನಕಲಿ ಪ್ರತಿಭಟನೆಯ ಡ್ರಾಮಾ ಮಾಡಿದ್ದಾರೆ ಎಂದು ವಾಗ್ದಾಳಿ ನಡೆಸಿದರು. ಅವತ್ತು ಬಿಜೆಪಿಯ ರಾಷ್ಟ್ರೀಯ ನಾಯಕರಿಗೆ ಯಾವ ರೀತಿ ನಡೆಸಿಕೊಂಡಿದ್ದೇವೋ ಈಗಲೂ ಅದೇ ರೀತಿ ನಡೆದುಕೊಂಡಿದ್ದೇವೆ. ಇದು ಹಿಂದಿನಿಂದ ನಡೆದುಕೊಂಡು ಬಂದಿರುವ ಪದ್ಧತಿ. ಅದರಂತೆ ನಡೆಯುತ್ತಿದೆ. ಆದರೆ ಇವತ್ತು ಬಿಜೆಪಿ ಸದಸ್ಯರು ಅದನ್ನೆಲ್ಲಾ ಮರೆತವರಂತೆ ಡ್ರಾಮಾ ಆಡುತ್ತಾ, ಅಮಾನವೀಯವಾಗಿ ವರ್ತಿಸಿದ್ದಾರೆ. ಸ್ಪೀಕರ್ ಜತೆ ಮತ್ತು ಅವರ ಪೀಠದ ಎದುರು ಅತ್ಯಂತ ಅಸಹ್ಯವಾಗಿ ಅಮಾನವೀಯವಾಗಿ ವರ್ತಿಸಿದ್ದಾರೆ. ನಾವೂ ವಿರೋಧ ಪಕ್ಷದಲ್ಲಿದ್ದೆವು. ಇಷ್ಟು ಅಸಹ್ಯವಾಗಿ ನಡೆದುಕೊಂಡಿದ್ದ ಸಣ್ಣ ಉದಾಹರಣೆಯಾದರೂ ಇದೆಯೇ ಎಂದು ಪ್ರಶ್ನಿಸಿದರು. ವಿರೋಧ ಪಕ್ಷದ ನಾಯಕನನ್ನು ಆರಿಸಿಕೊಳ್ಳುವ ಯೋಗ್ಯತೆ ಇಲ್ಲದ ಬಿಜೆಪಿ. ಅತಿಥಿಗಳನ್ನು ಸತ್ಕರಿಸಿದರೆ ನಮ್ಮ ಮತ್ತು ನಮ್ಮ ರಾಜ್ಯದ ಗೌರವ ಹೆಚ್ಚುತ್ತದೆ. ನಾವು ರೈತರ, ಕಾರ್ಮಿಕರ, ಕೂಲಿಗಳ, ಶ್ರಮಿಕರ, ದಲಿತ–ಹಿಂದುಳಿದವರ–ಅಲ್ಪಸಂಖ್ಯಾತರ ಪರವಾಗಿದ್ದು, ಅವರ ಬದುಕನ್ನು ಎತ್ತರಿಸಲು ಹೋರಾಟ ನಡೆಸಿ ಅಧಿಕಾರಕ್ಕೆ ಬಂದಿದ್ದೇವೆ ಎಂದರು.

ಈ ಸಮುದಾಯಗಳ ಪರವಾಗಿ ನಾವು ನಮ್ಮ ಕಾಳಜಿ, ಬದ್ಧತೆ, ಹೋರಾಟವನ್ನು ಮುಂದುವರೆಸುತ್ತೇವೆ. ಬಿಜೆಪಿಯವರಿಗೆ ಸಂವಿಧಾನದಲ್ಲಿ, ಪ್ರಜಾಪ್ರಭುತ್ವದಲ್ಲಿ, ಬಸವಣ್ಣರ ವಿಚಾರಗಳಲ್ಲಿ, ಅಂಬೇಡ್ಕರ್ ಆಶಯಗಳಲ್ಲಿ, ವಿಚಾರಗಳಲ್ಲಿ ನಂಬಿಕೆ ಇಲ್ಲ. ವಿಧಾನಸಭೆಯ ಗೌರವಕ್ಕೆ ಬಿಜೆಪಿ ಸದಸ್ಯರಿಂದ ಅತ್ಯಂತ ಅವಮಾನವಾಗಿದೆ ಎಂದು ಆರೋಪಿಸಿದರು.

ರಾಜ್ಯ ಸರ್ಕಾರದ್ದು ಹಿಟ್ಲರ್ ವರ್ತನೆ; ಸ್ಪೀಕರ್ ಕುರ್ಚಿಯೂ ದುರ್ಬಳಕೆ



ಬೆಂಗಳೂರು, ಜು.19(ಕೆಎಂಶಿ)– ರಾಜ್ಯ ಸರ್ಕಾರ ಸರ್ವಾಧಿಕಾರಿ ಹಿಟ್ಲರ್ ರೀತಿ ವರ್ತಿಸುತ್ತಿದ್ದು, ಸ್ಪೀಕರ್ ಕುರ್ಚಿಯನ್ನೂ ದುರ್ಬಳಕೆ ಮಾಡಿಕೊಂಡು ಬಿಜೆಪಿ ಸದಸ್ಯರನ್ನು ಅಮಾನತು ಮಾಡಿದ್ದಾರೆ. ಇದೊಂದು ಕರಾಳ ದಿನವಾಗಿದ್ದು, ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ವಿಧಾನಸಭೆಯಲ್ಲಿ ಧರಣಿ ನಿರತ ಬಿಜೆಪಿ ಶಾಸಕರನ್ನು ಅಮಾನತು ಮಾಡಿರುವುದನ್ನು ಖಂಡಿಸಿ ಸ್ಪೀಕರ್ ಕಚೇರಿ ಹಾಗೂ ವಿಧಾನಸೌಧದ ಪಶ್ಚಿಮ ದ್ವಾರದ ಮೆಟ್ಟಿಲುಗಳ ಮೇಲೆ ಬಿಜೆಪಿ ಜೆಡಿಎಸ್ ಸದಸ್ಯರೊಂದಿಗೆ ಧರಣಿ ನಡೆಸಿದರು. ಪೊಲೀಸರು ಧರಣಿ ನಿರತರನ್ನು ವಶಕ್ಕೆ ಪಡೆದರು. ಇದಕ್ಕೂ ಮೊದಲು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಜುಲೈ 17, 18 ರಂದು ಕಾಂಗ್ರೆಸ್ ಪಕ್ಷದ ಕಾರ್ಯಕ್ರಮದಲ್ಲಿ ರಾಜ್ಯದ ಐಎಎಸ್ ಅಧಿಕಾರಿಗಳನ್ನು ಗುಮಾಸ್ತರನ್ನಾಗಿ ಮಾಡಿ ಪ್ರೊಟೊಕಾಲ್ ಇಲ್ಲದವರಿಗೂ ಪಿಎ ಥರಾ ಕೆಲಸ ಮಾಡುವಂತೆ ಮಾಡಿದ್ದಾರೆ. ಯಾರು ರಾಜ್ಯದ ಗೆಸ್ಟ್ ಅಂತ ಇರುತ್ತಾರೋ ಅವರಿಗೆ ಗೌರವ ಸಲ್ಲಿಸಲು ಪ್ರೊಟೊಕಾಲ್ ಅಧಿಕಾರಿಗಳು ಇದ್ದಾರೆ. ಅವರ ಬದಲು ಹಿರಿಯ ಐಎಎಸ್ ಅಧಿಕಾರಿಗಳಿಗೆ ರಾಜಕಾರಣಿಗಳನ್ನು ಬಾಗಿಲು ಕಾಯಲು ಹಚ್ಚಿದ್ದಾರೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ ಪ್ರಜಾಪ್ರಭುತ್ವ ಕಗ್ಗೊಲೆ ಆಗಿದೆ. ಸ್ಪೀಕರ್ ಸ್ಥಾನ ದುರುಪಯೋಗ ಆಗಿದೆ. ಸ್ಪೀಕರ್ ಅವರು ಆಡಳಿತ ಪಕ್ಷದ ಕೈಗೊಂಬೆಯಾಗಿದ್ದಾರೆ. ನಾವು ಪ್ರತಿಭಟನೆ ಮಾಡುತ್ತಿರುವ ಸಂದರ್ಭದಲ್ಲಿ ನಮ್ಮ ಸದಸ್ಯರಿಗೆ ಊಟಕ್ಕೆ ಬಿಡದೆ ಸದನ ನಡೆಸಲು ನಿರ್ಧರಿಸಿದ್ದಾರೆ. ಕಾಂಗ್ರೆಸ್ ಹಿಟ್ಲರ್ ಶಾಹಿ ಆಡಳಿತ ನಡೆಸಿದ್ದಾರೆ. ಕಾಂಗ್ರೆಸ್‌ನವರು ಹೇಳಿದಂತೆ ಸ್ಪೀಕರ್ ನಡೆದುಕೊಳ್ಳುತ್ತಿದ್ದಾರೆ. ಸ್ಪೀಕರ್ ಕುರ್ಚಿಗೆ ಅವಮಾನವಾಗುವಂತೆ ನಡೆದುಕೊಳ್ಳುತ್ತಿದ್ದಾರೆ ಎಂದು ಆರೋಪಿಸಿದರು. ಈ ಹಿಂದೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪೇಪರ್ ಹರಿದು ಹಾಕಿದ ಉದಾಹರಣೆ ಇದೆ. ಒಬ್ಬ ಸದಸ್ಯರು ಸ್ಪೀಕರ್ ಮುಂದಿನ ಮೈಕ್ ಕಿತ್ತು ಹಾಕಿದ ಉದಾಹರಣೆ ಇದೆ. ಸಿದ್ದರಾಮಯ್ಯ ಸದನದ ಬಾಗಿಲು ಒದ್ದು ಹೋಗಿರುವ ನಿದರ್ಶನ ಇದೆ. ಇವರು ಪ್ರತಿಪಕ್ಷದ ಹಕ್ಕನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದ್ದಾರೆ. ಇವತ್ತು ಪ್ರಜಾಪ್ರಭುತ್ವದ ಕಗ್ಗೊಲೆಯಾಗಿದೆ. ಇದು ಕರಾಳ ದಿನ. ಇದರ ವಿರುದ್ಧ ನಾವು ಸದನದ ಹೊರಗೂ ಹೋರಾಟ ಮಾಡಿ ಜನರ ಬಳಿಗೆ ತೆಗೆದುಕೊಂಡು ಹೋಗುತ್ತೇವೆ ಎಂದು ಹೇಳಿದರು.

ಇದೇ ವೇಳೆ ಉಪ ಸಭಾಧ್ಯಕ್ಷರಿಗೆ ಬಿಜೆಪಿ ಅವಮಾನ ಮಾಡಿದೆ ಎಂಬ ಕಾಂಗ್ರೆಸ್‌ನವರ ಆರೋಪದ ಕುರಿತು ಮಾಧ್ಯಮದವರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಅವರು, ಕಾಂಗ್ರೆಸ್‌ನವರು ಉಪ ಸಭಾಧ್ಯಕ್ಷರಿಗೆ ಅವಮಾನ ಮಾಡಿದ್ದಾರೆ. ಸ್ಪೀಕರ್, ಸದನದ ಪರಿಸ್ಥಿತಿಯನ್ನು ನಿಭಾಯಿಸದೇ ಎದ್ದು ಹೋಗಿದ್ದಾರೆ. ಉಪ ಸಭಾಧ್ಯಕ್ಷ ರುದ್ರಪ್ಪ ಲಮಾಣಿಯವರಿಗೆ ಸಚಿವ ಸ್ಥಾನ ನೀಡಬೇಕಿತ್ತು. ಅವರನ್ನು ಉಪಸಭಾಧ್ಯಕ್ಷರನ್ನಾಗಿ ಮಾಡಿದ್ದಾರೆ. ಕಾಂಗ್ರೆಸ್‌ನವರೇ ಅವರಿಗೆ ಅವಮಾನ ಮಾಡಿದ್ದಾರೆ ಎಂದು ತಿರುಗೇಟು ನೀಡಿದರು.

ಇದಕ್ಕೂ ಮೊದಲು ಸದನದಲ್ಲಿ ಮಾತನಾಡಿದ ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ರಾಜ್ಯದಲ್ಲಿ ರಾಜಕೀಯ ಸಮಾವೇಶಗಳು ಇದೇ ಮೊದಲ ಬಾರಿಯಲ್ಲ. ಸಾಕಷ್ಟು ಬಾರಿ ಸಮಾವೇಶಗಳು ನಡೆದಿವೆ. ಈ ಸಭೆಗೆ ಬಂದವರು ಅನೇಕರು ಎಂಎಲ್‌ಎ, ಎಂಪಿ ಅಲ್ಲಾ, ಪ್ರಧಾನ ಕಾರ್ಯದರ್ಶಿಗಳು ಏರ್ ಪೋರ್ಟ್ ಬಳಿ ನಿಂತು ಅವರನ್ನು ಸ್ವಾಗತ ಮಾಡಿದ್ದಾರೆ ಎಂದು ಆರೋಪಿಸಿದರು.

ನೀವು ಅಧಿಕಾರದಲ್ಲಿರುವವರಿಗೆ ನಿಯಮದ ಪ್ರಕಾರ ಗೌರವ ಕೊಡಿ, ಪುಡಿ ಪಾರ್ಟಿಗಳ ಮುಖಂಡರು ಅವರಿಗೆ ಯಾವುದೇ ಅಧಿಕಾರ ಇಲ್ಲ. ಅವರಿಗೆ ಅವರ ರಾಜ್ಯದಲ್ಲಿಯೇ ಮರ್ಯಾದೆ ಇಲ್ಲ. ಇವರು ಕರ್ನಾಟಕದ ಮಾನವನ್ನು ರಾಜಕೀಯ ಲಾಭಕ್ಕೆ ಹರಾಜು ಹಾಕುತ್ತಿದ್ದಾರೆ.

ಅಧಿಕಾರಿಗಳು ಯಾರು ಅಲ್ಲಿ ಅಟೆಂಡ್ ಆಗಿದ್ದಾರೋ ಅವರಿಗೆ ನೊಟಿಸ್ ಕೊಡಬೇಕು. ಎರಡು ದಿನದ ಸಂಬಳ ಕಡಿತ ಮಾಡಬೇಕು. ಸಿಎಸ್ ಅವರು ಏನು ಮಾಡುತ್ತಿದ್ದರು. ಅವರು ಅನುಮತಿ ನೀಡಿದ್ದಾರಾ ಎಂದು ಪ್ರಶ್ನಿಸಿದರು.

ಇಲ್ಲಿ ಬರಗಾಲ ಬಿದ್ದು ಸಾಕಷ್ಟು ಕೆಲಸಗಳಿವೆ. ಸರ್ಕಾರದ ಕೆಲಸ ಬಿಟ್ಟು ಅಧಿಕಾರಿಗಳು ಅಲ್ಲಿಗೆ ಹೋಗಿ ತಮ್ಮ ಜವಾಬ್ದಾರಿ ಮರೆತಿದ್ದಾರೆ. ಸರ್ಕಾರ ರಾಜ್ಯದ ಮರ್ಯಾದೆ ಹರಾಜು ಹಾಕುತ್ತಿದೆ. ಇದು ಜನರ ತೆರಿಗೆ ಹಣ ನಿಮ್ಮ ಹಣವಲ್ಲ. ರಾಜ್ಯ ಸರ್ಕಾರ ಜನರ ಕ್ಷಮೆ ಕೋರಬೇಕು ಎಂದು ಆಗ್ರಹಿಸಿದರು.

ದಸರಾ ಗಜಪಡೆ ಆಯ್ಕೆಗೆ ಚಾಲನೆ

ಈ ಬಾರಿ ಪ್ರೆಗ್ನೆನ್ಸಿ ಟೆಸ್ಟ್ ಕಡ್ಡಾಯ

- ಕಳೆದ ಬಾರಿ ಲಕ್ಷ್ಮಿ ಅರಮನೆ ಆವರಣದಲ್ಲಿ ಗಂಡು ಮರಿಗೆ ಜನ್ಮ ನೀಡಿತ್ತು
- ಮುಜುಗರ ತಪ್ಪಿಸಲು ಹೆಣ್ಣಾನೆಗಳ ರಕ್ತ, ಮೂತ್ರ ತಪಾಸಣೆಗೆ ಸೂಚನೆ
- 14 ಆನೆ ಆಯ್ಕೆಗೆ ನಿರ್ಧಾರ, ಜುಲೈ ಅಂತ್ಯಕ್ಕೆ ದಸರಾ ಆನೆಗಳ ಪಟ್ಟಿ ಸಲ್ಲಿಕೆ



ದಸರಾ ಗಜಪಡೆ ಆಯ್ಕೆಗಾಗಿ ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಸೌರಭ್ ಕುಮಾರ್ ಅವರು ಮತ್ತಿಗೋಡು ಆನೆ ಕ್ಯಾಂಪ್‌ನಲ್ಲಿ ಆನೆಗಳನ್ನು ಪರಿಶೀಲಿಸಿ, ಸರ್ವಿಸ್ ಬುಕ್ ಪರಿಶೀಲಿಸುತ್ತಿರುವುದು. ಚಿತ್ರದಲ್ಲಿ ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯರಾದ ಡಾ.ಮುಜೀಬ್, ಡಾ.ರಮೇಶ್ ಹಾಗೂ ಇನ್ನಿತರರನ್ನು ಕಾಣಬಹುದು.

■ ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಜು.19–ಕಳೆದ ಬಾರಿ ಅರಮನೆ ಅಂಗಳದಲ್ಲೇ ಲಕ್ಷ್ಮಿ ಗಂಡು ಮರಿಗೆ ಜನ್ಮ ನೀಡಿದ್ದ ಹಿನ್ನೆಲೆಯಲ್ಲಿ ಎಚ್ಚೆತ್ತುಕೊಂಡಿರುವ ಅರಣ್ಯ ಇಲಾಖೆ ಈ ವರ್ಷ ಹೆಣ್ಣಾನೆಗಳ ಆಯ್ಕೆಗೆ ಪ್ರೆಗ್ನೆನ್ಸಿ ಟೆಸ್ಟ್ ಕಡ್ಡಾಯಗೊಳಿಸಿದೆ. ನಾಡಹಬ್ಬ ದಸರಾ ಮಹೋತ್ಸವದಲ್ಲಿ ಈ ಬಾರಿ ಪಾಲ್ಗೊಳ್ಳುವ ಗಜಪಡೆಗೆ ಕಟ್ಟುನಿಟ್ಟಿನ ಆರೋಗ್ಯ ತಪಾಸಣೆಗೆ ಕ್ರಮ ಕೈಗೊಳ್ಳಲಾಗಿದೆ.

ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿಯ ಕೇಂದ್ರ ಬಿಂದುವಾದ ಗಜಪಡೆಯ ಆಯ್ಕೆ ಪ್ರಕ್ರಿಯೆಗೆ ಅರಣ್ಯ ಇಲಾಖೆ ಈಗಾಗಲೇ ಚಾಲನೆ ನೀಡಿದೆ.

ಈಗಾಗಲೇ ದಸರಾ ಆನೆಗಳ ಆಯ್ಕೆ ವೇಳೆ ಪ್ರತಿವರ್ಷವೂ ಆನೆಗಳ ಆರೋಗ್ಯ ತಪಾಸಣೆ ಮಾಡಲಾಗುತ್ತಿತ್ತಾದರೂ ಕೆಲವೊಮ್ಮೆ ಹೆಣ್ಣಾನೆಗಳು ಗರ್ಭ ಧರಿಸಿರುವುದು ಗಮನಕ್ಕೆ ಬರುತ್ತಿರಲಿಲ್ಲ. ಈ ಕಾರಣದಿಂದಲೇ ಕಳೆದ ಬಾರಿ ಇಬ್ಬರು ಪಶುವೈದ್ಯರು ಹಾಗೂ ಮಾವುತ, ಕಾವಾಡಿಗಳಿಗೂ ಲಕ್ಷ್ಮಿ ಗರ್ಭಿಣಿಯಾಗಿರುವುದು ತಿಳಿಯದೇ, ಮೈಸೂರು ಅರಮನೆ ಆವರಣದಲ್ಲೇ ಗಂಡು ಮರಿಗೆ ಜನ್ಮ ನೀಡಿತ್ತು. ಇದು ಸಾಕಷ್ಟು ಟೀಕೆಗೂ ಗುರಿಯಾಗಿತ್ತಲ್ಲದೆ, ಅರಣ್ಯ ಇಲಾಖೆಯನ್ನು ಮುಜುಗರಕ್ಕೆ ಸಿಲುಕಿಸಿತ್ತು. ಈ ಬಾರಿ ಅರಣ್ಯ ಇಲಾಖೆ ಆನೆಗಳ ಆರೋಗ್ಯದತ್ತ ಕಾಳಜಿ ವಹಿಸಿದೆ.

ಪ್ರೆಗ್ನೆನ್ಸಿ ಟೆಸ್ಟ್: ದಸರೆಗೆ ಬರುವ ಗಜಪಡೆಯ ಹೆಣ್ಣಾನೆಗಳಿಗೆ ಪ್ರೆಗ್ನೆನ್ಸಿ ಟೆಸ್ಟ್ ನಡೆಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಆನೆ ಯೋಜನೆಯ ನಿರ್ದೇಶಕರೂ ಆಗಿರುವ ಎಪಿಸಿಸಿಎಫ್ ಶಾಶ್ವತಿ ಮಿಶ್ರಾ ಸೂಚಿಸಿದ್ದಾರೆ. ಹೆಣ್ಣಾನೆಗಳಿಗೆ ಕಡ್ಡಾಯವಾಗಿ ರಕ್ತ ಹಾಗೂ ಮೂತ್ರ ಟೆಸ್ಟ್ ಮಾಡಿಸುವಂತೆ ಸೂಚನೆ ನೀಡಿದ್ದಾರೆ. ಇದರಿಂದ ದಸರಾ ಗಜಪಡೆಯಲ್ಲಿ ಪ್ರಮುಖ ನಾಲ್ಕು ಕ್ಯಾಂಪ್‌ಗಳಲ್ಲಿರುವ ಹೆಣ್ಣಾನೆಗಳ ಆರೋಗ್ಯ, ವರ್ತನೆ, ಸ್ವಭಾವದ ಸ್ಥಿತಿಗತಿ ಗಮನಿಸಲು ನಿರ್ಧರಿಸಲಾಗಿದೆ.

14 ಆನೆಗಳಲ್ಲಿ 9 ಆನೆ ಪರಿಶೀಲನೆ: ಪ್ರಸಕ್ತ ಸಾಲಿನ ದಸರಾ ಮಹೋತ್ಸವದ ಗಜಪಡೆ ಆಯ್ಕೆ ಪ್ರಕ್ರಿಯೆಗೆ ಚಾಲನೆ ದೊರೆತಿದೆ. ಮೈಸೂರು ವೈಲ್ಡ್‌ಲೈಫ್ ವಿಭಾಗದ ಡಿಸಿಎಫ್ ಸೌರಭ್‌ಕುಮಾರ್, ಆರ್‌ಎಫ್‌ಓ ಸಂತೋಷ್ ಹೂಗಾರ್, ಪಶುವೈದ್ಯ ಡಾ.ಮುಜೀಬ್ ನೇತೃತ್ವದ ತಂಡ ಮತ್ತಿಗೋಡು ಹಾಗೂ ಭೀಮನಕಟ್ಟೆ ಕ್ಯಾಂಪ್‌ಗೆ ತೆರಳಿ ಗಜಪಡೆಯ ನಾಯಕ ಅಭಿಮನ್ಯು ಸೇರಿದಂತೆ 9 ಆನೆಗಳ ಮಾಹಿತಿ ಪಡೆದು, ಸರ್ವಿಸ್ ಬುಕ್ ಪರಿಶೀಲಿಸಿದರು. ಅಲ್ಲದೇ, ಆನೆಗಳ ಆರೋಗ್ಯ ತಪಾಸಣೆ ಮಾಡಿಸಿ, ವರದಿ ನೀಡುವಂತೆ ಡಿಸಿಎಫ್ ಸೌರಭ್ ಕುಮಾರ್ ಸೂಚಿಸಿದ್ದಾರೆ. ಇನ್ನೆರಡು ದಿನದಲ್ಲಿ ದುಬಾರೆ, ರಾಂಪುರ ಕ್ಯಾಂಪ್‌ಗೂ ತೆರಳಿ ಇನ್ನಷ್ಟು ಆನೆಗಳ ಆರೋಗ್ಯ ಪರಿಶೀಲಿಸಲಾಗುತ್ತದೆ. ಜುಲೈ ಅಂತ್ಯದ ವೇಳೆಗೆ 14 ರಿಂದ 16 ಆನೆಗಳ ಅಂತಿಮ ಪಟ್ಟಿ ಸಿದ್ಧಪಡಿಸಿ ಅನುಮತಿಗಾಗಿ ರವಾನಿಸಲಾಗುತ್ತದೆ.

ಆಗಸ್ಟ್ 10 ರಿಂದ 14ರೊಳಗೆ ಗಜ ಪಯಣ: ಗಜಪಡೆಯ ಅಂತಿಮ ಪಟ್ಟಿಗೆ ಆಗಸ್ಟ್ ಮೊದಲ ವಾರದಲ್ಲಿ ಬೆಂಗಳೂರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆಯುವ ದಸರಾ ಉನ್ನತ ಮಟ್ಟದ ಸಭೆಯಲ್ಲಿ ಅನುಮತಿ ದೊರೆಯಲಿದೆ. ಎಷ್ಟು ಆನೆ ಕರೆತರಬೇಕೆಂದು ಅಂದು ನಿರ್ಧಾರವಾಗಲಿದೆ. ಬಳಿಕ ಆ.14ರೊಳಗೆ ಗಜಪಯಣಕ್ಕೆ ಮುಹೂರ್ತ ನಿಗದಿ ಮಾಡಲಾಗುತ್ತದೆ.



ಆನೆಗಳ ಹೆಲ್ತ್ ಕಾರ್ಡ್ ಪರಿಶೀಲನೆ

ಪ್ರತಿವರ್ಷ ಗಜಪಡೆ ಆಯ್ಕೆ ವೇಳೆ ಹೆಣ್ಣಾನೆಗಳ ರಕ್ತ ಹಾಗೂ ಮೂತ್ರ ಪರೀಕ್ಷೆ ನಡೆಸುತ್ತಿರಲಿಲ್ಲ. ಇದರಿಂದ ಕೆಲವೊಮ್ಮೆ ಹೆಣ್ಣಾನೆಗಳು ಗರ್ಭ ಧರಿಸಿದ್ದು ಗೊತ್ತಾಗುತ್ತಿರಲಿಲ್ಲ. ಆದರೆ, ಈ ಬಾರಿ ಎಪಿಸಿಸಿಎಫ್ ಶಾಶ್ವತಿ ಮಿಶ್ರಾ ಅವರು ಹೆಣ್ಣಾನೆಗಳಿಗೆ ಪ್ರೆಗ್ನೆನ್ಸಿ ಟೆಸ್ಟ್‌ನೊಂದಿಗೆ ರಕ್ತ ಹಾಗೂ ಮೂತ್ರ ಪರೀಕ್ಷೆ ಮಾಡಿಸುವಂತೆ ಸೂಚನೆ ನೀಡಿದ್ದಾರೆ. ಕಳೆದ ವರ್ಷ 14 ಆನೆ ತರಲಾಗಿತ್ತು. ಎಷ್ಟು ಆನೆ ತರಬೇಕೆಂದು ಸರ್ಕಾರ ನಿರ್ದೇಶನ ನೀಡುತ್ತದೆ. ಆನೆಗಳ ಆಯ್ಕೆ ಪ್ರಕ್ರಿಯೆ ಹೆಲ್ತ್ ಕಾರ್ಡ್, ಸೆಲೆಕ್ಷನ್ ಕಾರ್ಡ್ ಪರಿಶೀಲಿಸಲಾಗುತ್ತದೆ. ಮತ್ತಿಗೋಡು, ಭೀಮನಕಟ್ಟೆ ರಾಮಪುರ, ದುಬಾರೆ ಕ್ಯಾಂಪ್‌ಗಳಲ್ಲಿ ಆನೆಗಳನ್ನು ಪರಿಶೀಲಿಸಲಾಗುತ್ತದೆ. ಮಾಸಾಂತ್ಯಕ್ಕೆ ಅಂತಿಮ ಪಟ್ಟಿ ಸರ್ಕಾರಕ್ಕೆ ಕಳುಹಿಸಲಾಗುವುದು. ಈ ಬಾರಿ ಆನೆಗಳ ಆರೋಗ್ಯದ ಮೇಲೆ ವಿಶೇಷ ಕಾಳಜಿ ಇಟ್ಟಿದ್ದೇವೆ. –ಡಾ.ಮಾಲತಿ ಪ್ರಿಯಾ, ಸಿಎಫ್, ಮೈಸೂರು ವೃತ್ತ

ಗಜಪಡೆಯ ಆಯ್ಕೆ ಪ್ರಕ್ರಿಯೆಗೆ ಚಾಲನೆ ದೊರೆತಿದೆ

ಈ ಸಾಲಿನ ದಸರಾ ಮಹೋತ್ಸವ ಗಜಪಡೆ ಆಯ್ಕೆ ಪ್ರಕ್ರಿಯೆ ಆರಂಭಿಸಿದ್ದೇವೆ. ಮತ್ತಿಗೋಡು, ಭೀಮನಕಟ್ಟೆ ಆನೆ ಶಿಬಿರದಲ್ಲಿ 9 ಆನೆಗಳನ್ನು ಪರಿಶೀಲಿಸಲಾಗಿದೆ. ಎಲ್ಲಾ ಆನೆಗಳ ಆರೋಗ್ಯ ತಪಾಸಣೆ ನಡೆಸುವಂತೆ ಸೂಚಿಸಿ, ಟೆಸ್ಟ್‌ಗೆ ಅಗತ್ಯ ಸ್ಯಾಂಪಲ್ ಒದಗಿಸುವಂತೆ ಸೂಚಿಸಲಾಗಿದೆ. ಕಳೆದ ವರ್ಷ ತರಲಾಗಿದ್ದ ಆನೆಗಳನ್ನು ಗಮನಿಸಿ, ಹೊಸ ಆನೆಗಳನ್ನು ಪರಿಶೀಲಿಸಲಾಗಿದೆ.

–ಸೌರಭ್ ಕುಮಾರ್, ಡಿಸಿಎಫ್, ಮೈಸೂರು ವನ್ಯಜೀವಿ ವಿಭಾಗ

ಬ್ಯಾಂಕ್‌ಗಳ ರಾಷ್ಟ್ರೀಕರಣ ದಿನ ಪ್ರಯುಕ್ತ ವಿವಿಧ ಕಾರ್ಯಕ್ರಮ



ಮೈಸೂರು,ಜು.19 (ಎಂಟಿವೈ)– ಈ ಹಿಂದೆ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣ ಮಾಡಿದ ಸ್ಮರಣಾರ್ಥ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾ ಒಕ್ಕೂಟದ ಮೈಸೂರು ವಿಭಾಗದ ವತಿಯಿಂದ ಮೈಸೂರಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಕಾರ್ಯದರ್ಶಿ ಕಲ್ಯಾಣ್‌ಕುಮಾರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಷ್ಟ್ರೀಕರಣದ ನೆನಪಿನಲ್ಲಿ ಒಕ್ಕೂಟದ ವತಿಯಿಂದ ಜು.31ರವರೆಗೆ ವಿವಿಧ ಸಾಮಾಜಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಕೆ.ಆರ್. ಆಸ್ಪತ್ರೆಯ ರೋಗಿಗಳಿಗೆ ಹಣ್ಣು–ಹಂಪಲು ವಿತರಣೆ, ಗಿಡನೆಡುವ ಕಾರ್ಯಕ್ರಮವೂ ಒಳಗೊಂಡಂತೆ ಇನ್ನಿತರ ಸೇವಾ ಕಾರ್ಯಕ್ರಮ ನಡೆಸಲಾಗುವುದು ಎಂದರು.

ಬ್ಯಾಂಕ್‌ಗಳ ರಾಷ್ಟ್ರೀಕರಣದ ಬಳಿಕ ಹಿಂದುಳಿದ, ಕೆಳ ವರ್ಗದ ಜನತೆಗೆ ಸಾಕಷ್ಟು ಅನುಕೂಲಗಳಾಗಿದೆ. ಲಕ್ಷಾಂತರ ನಾಗರಿಕರ ಅಗತ್ಯಗಳಿಗೆ ವಿವಿಧ ಸೇವೆ ಒದಗಿಸಲಾಗುತ್ತಿದೆ. ಆದರೆ ಇದೇ ವೇಳೆ ಜನತೆ ಸಹಾ ಸಾರ್ವಜನಿಕ ವಲಯದ ಬ್ಯಾಂಕ್‌ಗಳ ಮೇಲೆ ಖಾಸಗೀಕರಣದಿಂದ ಆಗುವ ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ ಜಾಗೃತಿಗೊಳಿಸಲಾಗುತ್ತಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾ ಒಕ್ಕೂಟದ ಪದಾಧಿಕಾರಿಗಳಾದ ಮಹೇಶ್ ಹಾಗೂ ಭರತ್ ಇದ್ದರು.

ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾಧ್ಯಕ್ಷ, ಉಪಾಧ್ಯಕ್ಷರ ಉಚ್ಚಾಟನೆ



ಮೈಸೂರು,ಜು.19(ಎಂಟಿವೈ)– ಸಂಘಟನೆಯ ನೀತಿ–ನಿಯಮಕ್ಕೆ ವಿರುದ್ಧವಾಗಿ ನಡೆದುಕೊಂಡ ಹಿನ್ನೆಲೆಯಲ್ಲಿ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆಯ ಮೈಸೂರು ಜಿಲ್ಲಾಧ್ಯಕ್ಷ ಎಂ. ಲಿಂಗರಾಜು ಹಾಗೂ ರಾಜ್ಯ ಉಪಾಧ್ಯಕ್ಷ ಬಿ.ಕೆ. ಶ್ರೀನಿವಾಸ್ ಅವರನ್ನು ಸಂಘಟನೆಯಿಂದ ಉಚ್ಚಾಟಿಸಲಾಗಿದೆ ಎಂದು ರಾಜ್ಯಾಧ್ಯಕ್ಷ ಜೆ.ರಾಮಚಂದ್ರು ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇವರಿಬ್ಬರೂ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆಯ ನಿಯಮ ಹಾಗೂ ನಿಬಂಧನೆಗಳನ್ನು ಗಾಳಿಗೆ ತೂರಿ ಸಂಘಟನಾ ವಿರೋಧಿ ಚಟುವಟಿಕೆಗಳಲ್ಲಿ ಪಾಲ್ಗೊಂಡಿರುವ ಬಗ್ಗೆ ಸಾಕಷ್ಟು ದೂರು ಕೇಳಿ ಬಂದಿದ್ದವು. ಈ ಹಿನ್ನೆಲೆಯಲ್ಲಿ ಇಬ್ಬರನ್ನು ಉಚ್ಚಾಟಿಸಿ, ಅವರಿಂದ ತೆರವುಗೊಂಡ ಸ್ಥಾನಕ್ಕೆ ನೂತನ ಜಿಲ್ಲಾಧ್ಯಕ್ಷರನ್ನಾಗಿ ದರ್ಶನ್ ಹಾಗೂ ಉಪಾಧ್ಯಕ್ಷರನ್ನಾಗಿ ಉತ್ಸವ್ ಅವರನ್ನು ನೇಮಕ ಮಾಡಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ಸಂಘಟನೆಯು ಕನ್ನಡದ ನೆಲ, ಜಲ, ಭಾಷೆ ಸಂರಕ್ಷಣೆಗಾಗಿ ಹೋರಾಟ ಮುಂದುವರಿಸಲಿದೆ. ನಾಡಿನ ರಕ್ಷಣೆಗಾಗಿ ನಮ್ಮ ಸಂಘಟನೆ ಕಟಿಬದ್ಧವಾಗಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸುವರ್ಣ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳಾದ ನಂದೀಶ್, ಕಾಂತರಾಜು ಇತರರು ಉಪಸ್ಥಿತರಿದ್ದರು.

ಜು.22ರಂದು ವಿಶೇಷ ಚೇತನರಿಗೆ ಉದ್ಯೋಗ ಮೇಳ



ಮೈಸೂರು,ಜು.19(ಎಂಟಿವೈ)– ಮೈಸೂರಿನ ಮಾನಸ ಗಂಗೋತ್ರಿಯಲ್ಲಿನ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಹಾಗೂ ಸಮರ್ಥನಂ ಅಂಗವಿಕಲರ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಜು. 22ರಂದು ಪಾಲಿಟೆಕ್ನಿಕ್‌ನಲ್ಲಿ ವಿಶೇಷ ಚೇತನರಿಗಾಗಿ ಉದ್ಯೋಗ ಮೇಳ ಆಯೋಜಿಸಲಾಗಿದೆ ಎಂದು ಪ್ರಾಚಾರ್ಯ ಬಿ.ಇಳಂಗೋವನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಈ ಉದ್ಯೋಗ ಮೇಳದಲ್ಲಿ ಸುಮಾರು 15 ರಿಂದ 20 ಕಂಪನಿಗಳು ಪಾಲ್ಗೊಳ್ಳುತ್ತಿವೆ. ಮೇಳದಲ್ಲಿ 300 ವಿಶೇಷಚೇತನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. 500ಕ್ಕೂ ಹೆಚ್ಚು ಖಾಲಿ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ನೇಮಕ ಮಾಡಿಕೊಳ್ಳುವ ಉದ್ದೇಶವನ್ನು ವಿವಿಧ ಕಂಪನಿಗಳು ಹೊಂದಿವೆ ಎಂದರು.

ಮೇಳದಲ್ಲಿ 18 ರಿಂದ 35 ವರ್ಷದ ಒಳಗಿನ ದೈಹಿಕ ನ್ಯೂನತೆ, ದೃಷ್ಟಿ ದೋಷ, ವಾಕ್ ಮತ್ತು ಶ್ರವಣ ನ್ಯೂನತೆ ಇರುವವರು ಭಾಗವಹಿಸಬಹುದಾಗಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಯಾವುದೇ ಡಿಪ್ಲೊಮಾ ಮತ್ತು ಪದವಿ ಉತ್ತೀರ್ಣರಾಗಿರಬೇಕಾಗಿದೆ. ಹೆಚ್ಚಿನ ಮಾಹಿತಿಗೆ ದೂ.8050709919 ಸಂಪರ್ಕಿಸಬಹುದಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸಂಸ್ಥೆಯ ಸುಭಾಷ್‌ಚಂದ್ರ ಎಂ.ಶಿವರಾಜು, ಕೆ.ಕುಶಾಲ್ ಹಾಗೂ ಇತರರು ಇದ್ದರು.

ನೀರಾ ಇಳಿಸುವುದಕ್ಕೆ, ಮಾರಾಟ ಮಾಡುವುದಕ್ಕೆ ಸರ್ಕಾರ ಉತ್ತೇಜನ ನೀಡಬೇಕು

ಮೈಸೂರು,ಜು.19(ಎಂಟಿವೈ)–



ಯುವ ಸಮುದಾಯ ಮದ್ಯಪಾನ, ಮಾದಕ ವಸ್ತುಗಳ ಸೇವನೆಗೆ ಬಲಿಯಾಗಿ ಅನಾರೋಗ್ಯಕ್ಕೆ ತುತ್ತಾಗುತ್ತಿರುವುದಕ್ಕೆ ಕಡಿವಾಣ ಹಾಕಲು ಆರೋಗ್ಯ ಪಾನೀಯಗಳಾದ ನೀರಾ, ದ್ರಾಕ್ಷಿ ವೈನ್, ಗಿಡಮೂಲಿಕೆಗಳ ಜ್ಯೂಸ್‌ಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸಲು ಕ್ರಮ ಕೈಗೊಳ್ಳಬೇಕು ಎಂದು ಈಡಿಗ ಸಮುದಾಯ ಮುಖಂಡ ಡಾ.ಈ.ಮುರಳೀಧರ್ ಒತ್ತಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮದ್ಯಪಾನ, ಧೂಮಪಾನ, ಮಾದಕ ವಸ್ತುಗಳ ವ್ಯಸನಿಗಳ ಸಂಖ್ಯೆ ಹೆಚ್ಚಾಗುತ್ತಿದ್ದು, ದುಶ್ಚಟಗಳಿಗೆ ಬಲಿಯಾಗುತ್ತಿದ್ದಾರೆ. ಇದನ್ನು ತಪ್ಪಿಸುವ ನಿಟ್ಟಿನಲ್ಲಿ ತೆಂಗಿನ ನೀರಾ, ದ್ರಾಕ್ಷಿ ವೈನ್ ಹಾಗೂ ಹರ್ಬಲ್ ಜ್ಯೂಸ್‌ಗಳ ಸೇವನೆಯಿಂದ ಆರೋಗ್ಯ ಕಾಪಾಡಿಕೊಳ್ಳಬಹುದು. ನೀರಾ ಎನ್ನುವುದು ಸೇಂದಿಯಲ್ಲ. ಜೊತೆಗೆ ಸೇಂದಿಯೂ ನೀರಾ ಅಲ್ಲ. ಆದರೆ ಕೆಲ ರೈತರು ನೀರಾ ಇಳಿಸಿ, ಅದಕ್ಕೆ ರಾಸಾಯನಿಕ, ಬಣ್ಣ, ಮಿಶ್ರಣ ಮಾಡಿ ಮಾರಾಟ ಮಾಡುತ್ತಿರುವುದು ಬೇಸರದ ಸಂಗತಿಯಾಗಿದೆ ಎಂದರು. ನೀರಾ ಇಳಿಸುವುದರಿಂದಾಗಿ ತೆಂಗಿನ ನುಸಿ ಪೀಡೆ ಬರುವುದು ಕಡಿಮೆ ಎಂದು ವಿಜ್ಞಾನಿಗಳೇ ಹೇಳಿದ್ದಾರೆ. ಹೀಗಾಗಿ ನೀರಾ ಇಳಿಸುವುದಕ್ಕೆ ಹಾಗೂ ಅವುಗಳನ್ನು ಪ್ಯಾಕೆಟ್ ರೂಪದಲ್ಲಿ ಮಾರಾಟ ಮಾಡುವುದಕ್ಕೆ ಸರ್ಕಾರ ಉತ್ತೇಜನ ನೀಡಬೇಕು. ಇದೇ ರೀತಿ ಈ ಹಿಂದೆ ಬಂಟ್ವಾಳದಲ್ಲಿ ತೆರೆದಿದ್ದ ಕಾರ್ಖಾನೆ ಪುನಶ್ಚೇತನಗೊಳಿಸಬೇಕು. ಸಿದ್ಧಾರ್ಥ ನಗರದ ತೂಗುದೀಪ ವೃತ್ತದ ಬಳಿ ನೀರಾ ಕೆಫೆ ತೆರೆಯುವ ಉದ್ದೇಶ ಹೊಂದಲಾಗಿದೆ. ತಾಜಾ ನೀರಾ ಹಾಗೂ ಇನ್ನಿತರ ಪಾನೀಯ ಮಾರಾಟ ಮಾಡುವ ಉದ್ದೇಶವಿದೆ ಎಂದರು.

ನಿರ್ಮಾಣಂ ಉಪನ್ಯಾಸ ಕಾರ್ಯಕ್ರಮ

ಮೈಸೂರು, ಜು. 19– ಮೈಸೂರಿನ ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ವಿವೇಕ ವಿದ್ಯಾವಾಹಿನಿ ಟ್ರಸ್ಟ್‌ನ ಸಂಯುಕ್ತ ಆಶ್ರಯದಲ್ಲಿ ನಿರ್ಮಾಣಂ ಉಪನ್ಯಾಸ ಕಾರ್ಯಕ್ರಮವನ್ನು ಕಾಲೇಜಿನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾಗಿ ವಿವೇಕ ವಿದ್ಯಾ ವಾಹಿನಿ ಟ್ರಸ್ಟ್ ಸಂಸ್ಥಾಪಕರು ಹಾಗೂ ಖ್ಯಾತ ವಾಗ್ಮಿಗಳಾದ ಶ್ರೀ ನಿತ್ಯಾನಂದ ವಿವೇಕ ವಂಶಿ ಭಾಗವಹಿಸಿ, ವಿದ್ಯಾರ್ಥಿಗಳಿಗೆ ಬದುಕಿನ ಗುರಿ ಮತ್ತು ಮೌಲ್ಯಗಳ ಬಗ್ಗೆ ಅರಿವು ಮೂಡಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎನ್.ಅರ್ಚನಾ ಸ್ವಾಮಿ ಅವರು ವಿದ್ಯಾರ್ಥಿಗಳನ್ನು ಕುರಿತು ಮಾತನಾಡಿದರು. ಕಾಲೇಜಿನ ಉಪನ್ಯಾಸಕರು ಮತ್ತು ಉಪನ್ಯಾಸಕೇತರ ವರ್ಗದವರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಕಾರ್ಯಾಗಾರ

ಮೈಸೂರು, ಜು. 19–ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಪಿಜಿ ವಾಣಿಜ್ಯ ವಿಭಾಗವು ಮೈಸೂರಿನ ಅನೇಕಾ ವೆಲ್ತ್ ಸರ್ವಿಸ್ ಸಹಯೋಗದಲ್ಲಿ ಯುಜಿ, ಪಿಜಿ ವಿದ್ಯಾರ್ಥಿಗಳು ಹಾಗೂ ನಿರೀಕ್ಷಿತ ಹೂಡಿಕೆದಾರರ ಪ್ರಯೋಜನಗಳಿಗಾಗಿ ಲೈವ್ ಟ್ರೇಡಿಂಗ್ ಸೆಷನ್ನೊಂದಿಗೆ ಕ್ಯಾಪಿಟಲ್ ಮಾರ್ಕೆಟ್ ಆಪರೇಷನ್ಸ್ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರವನ್ನು ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಮೈಸೂರಿನ ಅನೇಕಾ ವೆಲ್ತ್ ಸರ್ವಿಸಸ್‌ನ ಎನ್.ಅರುಣ್‌ಕುಮಾರ್ ಆಗಮಿಸಿದ್ದರು. ಕಾರ್ಯಾಗಾರದಲ್ಲಿ ಹೈಲೈಟ್ ಮಾಡಲಾದ ವಿವಿಧ ಅಂಶಗಳೆಂದರೆ, ಭಾರತೀಯ ಬಂಡವಾಳ ಮಾರುಕಟ್ಟೆಯ ಬಗ್ಗೆ ಅರಿವು ಮೂಡಿಸುವುದು, ಮಾರುಕಟ್ಟೆ ಕಾರ್ಯಾಚರಣೆಗಳ ಬಗ್ಗೆ ಪ್ರಾಯೋಗಿಕ ಅನುಭವವನ್ನು ಹೊಂದಲು ಮತ್ತು ಲೈವ್ ಟ್ರೇಡಿಂಗ್ ಸೆಷನ್‌ನೊಂದಿಗೆ ಗುಣಮಟ್ಟದ ಷೇರುಗಳ ಮೇಲೆ ಹೂಡಿಕೆ ಮಾಡಲು ಸಂಪನ್ಮೂಲ ವ್ಯಕ್ತಿಗಳು ಭಾಗವಹಿಸುವವರಿಗೆ ಮಾರ್ಗದರ್ಶನ ನೀಡಿದರು. ಕಾಲೇಜಿನ ಪ್ರಾಂಶುಪಾಲ ಡಾ.ಎಸ್.ಮರೀಗೌಡ, ಸಹ ಪ್ರಾಧ್ಯಾಪಕಿ ಹಾಗೂ ಸ್ನಾತಕೋತ್ತರ ಕೇಂದ್ರದ ಮುಖ್ಯಸ್ಥೆ ಡಾ.ಎಸ್.ಪೂರ್ಣಿಮಾ ಉಪಸ್ಥಿತರಿದ್ದರು.

ನಾಳೆ ತಲ್ಕಿ ನಾಟಕ ಪ್ರದರ್ಶನ



ಮೈಸೂರು,ಜು.19(ಎಂಟಿವೈ)– ಲೈಂಗಿಕ ಅಲ್ಪಸಂಖ್ಯಾತರು ಸ್ಥಾಪಿಸಿರುವ ಬೆಂಗಳೂರಿನ ಪಯಣ ಸಂಸ್ಥೆ ವತಿಯಿಂದ ಜು.21ರಂದು ಸಂಜೆ 6.30ಕ್ಕೆ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಲೈಂಗಿಕ ಅಲ್ಪಸಂಖ್ಯಾತರೇ ಅಭಿನಯಿಸುತ್ತಿರುವ 'ತಲ್ಕಿ' ಎಂಬ ನಾಟಕ ಪ್ರದರ್ಶನ ಆಯೋಜಿಸಲಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಚಾಂದಿನಿ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಲೈಂಗಿಕ ಅಲ್ಪಸಂಖ್ಯಾತರ ಸಮುದಾಯದ ನೋವು, ನಲಿವು, ಸಂಸ್ಕೃತಿಯನ್ನು ಈ ನಾಟಕ ಒಳಗೊಂಡಿದೆ. ನಟಿಸುತ್ತಿರುವವರೆಲ್ಲರೂ 50 ವರ್ಷ ಮೀರಿದವರೇ ಆಗಿದ್ದಾರೆ. ಈ ನಾಟಕ ವೇಳೆ ಕೆಲವೊಮ್ಮೆ ಈ ಸಮುದಾಯದವರೇ ಬಳಸುವ ವಿಶಿಷ್ಟವಾದ ಲಿಪಿ ಇಲ್ಲದ ಭಾಷೆ ಬಳಕೆಯೂ ಆಗಿದೆ ಎಂದರು. ರಾಜ್ಯದ ನೂತನ ಕಾಂಗ್ರೆಸ್ ಸರ್ಕಾರ ತನ್ನ ಗ್ಯಾರಂಟಿ ಯೋಜನೆ ವೇಳೆ ಲೈಂಗಿಕ ಅಲ್ಪಸಂಖ್ಯಾತರಿಗಗೂ ಮಾನ್ಯತೆ ನೀಡಿರುವುದು ಸಂತಸ ತಂದಿದೆ. ಶಕ್ತಿ ಯೋಜನೆಯಿಂದ ಉಚಿತ ಪ್ರಯಾಣದ ಸೌಲಭ್ಯವಿದೆ. ಅಲ್ಲದೆ, ಗೃಹಲಕ್ಷ್ಮಿ ಯೋಜನೆಯ ಪ್ರಯೋಜನವೂ ದೊರೆಯುತ್ತಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಪಯಣ ಸಂಸ್ಥೆಯ ಸದಸ್ಯರಾದ ಸವಿತಾ, ತ್ರಿಮೂರ್ತಿ ಇದ್ದರು.

ನಾಳೆ 'ಅಣ್ಣಾವ್ರ ವಿಶೇಷ ಪ್ರೇಮ ಗೀತೆಗಳ' ಸಂಗೀತ ಸಂಜೆ



ಮೈಸೂರು,ಜು.19(ಎಂಟಿವೈ)– ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ನಾದಬ್ರಹ್ಮ ಸಂಗೀತ ಸಭಾದಲ್ಲಿ ಜು.21 ರಂದು ಸಂಜೆ 5.30ರಿಂದ 'ಅಣ್ಣಾವ್ರ ವಿಶೇಷ ಪ್ರೇಮಗೀತೆಗಳು' ಎಂಬ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ಗಾಯಕ ಸುಧೀಂದ್ರ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉದಯಗಿರಿಯಲ್ಲಿರುವ ಡಾ. ರಾಜ್‌ಕುಮಾರ್ ಮ್ಯೂಸಿಕಲ್ ಗ್ರೂಪ್ ವಾರ್ಷಿಕೋತ್ಸವ ಅಂಗವಾಗಿ ಸಂಗೀತ ಸಂಜೆ ಕಾರ್ಯಕ್ರಮ ಆಯೋಜಿಸಲಾಗಿದೆ. ಗಾಯಕ ಬಿ.ಎಸ್. ಜಯರಾಮರಾಜು ಅವರ ನೇತೃತ್ವದಲ್ಲಿ ಈ ಕಾರ್ಯಕ್ರಮ ಸಂಜೆ 5.30ಕ್ಕೆ ಆರಂಭವಾಗಿ ರಾತ್ರಿ 9.30 ರವರೆಗೆ ನಡೆಯಲಿದೆ ಡಾ. ರಾಜ್‌ಕುಮಾರ್ ಅವರ ಗಾಯನ ಹಾಗೂ ಅಭಿನಯದ ಸುಮಾರು 40 ಗೀತೆಗಳನ್ನು ಈ ವೇಳೆ ಹಾಡಲಾಗುವುದು. ಎಲ್ಲರಿಗೂ ಉಚಿತ ಪ್ರವೇಶವಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಗಾಯಕರಾದ ಜನಾರ್ಧನ್, ಸುರೇಶ್, ರಮೇಶ್ ಇದ್ದರು.

ಇಂದು ಗ್ರಾಹಕರ ಹಿತ ಚಿಂತನ ಸಭೆ

ಮೈಸೂರು, ಜು. 19– ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ನೂತನ ಅಧ್ಯಕ್ಷರು ಸೇರಿದಂತೆ ಪದಾಧಿಕಾರಿಗಳ ಪದಗ್ರಹಣ ಹಾಗೂ ಗ್ರಾಹಕರ ಹಿತ ಚಿಂತನ ಸಭೆಯನ್ನು ಚಾಮುಂಡಿಪುರಂ ಅಪೂರ್ವ ಹೋಟೆಲ್ ಸಭಾಂಗಣದಲ್ಲಿ ಜುಲೈ 20 ರಂದು ಬೆಳಗ್ಗೆ 11 ಗಂಟೆಗೆ ಏರ್ಪಡಿಸಲಾಗಿದೆ ಎಂದು ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್ ತಿಳಿಸಿದ್ದಾರೆ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಖ್ಯಾತ ವೈದ್ಯರು ಹಾಗೂ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಡಾ. ಚಂದ್ರಶೇಖರ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ರಾಜ್ಯ ಶಿಕ್ಷಣ ಕ್ಷೇತ್ರದ ಸಂಚಾಲಕರಾದ ಡಾ. ಜಿ.ವಿ. ರವಿಶಂಕರ್, ಹಾಗೂ ಇನ್ನಿತರರು ಭಾಗವಹಿಸಲಿದ್ದಾರೆ.

ಶ್ರೀರಾಮನಾಮ ಜಪಯಜ್ಞ ಉದ್ಘಾಟನೆ



ಮೈಸೂರು, ಜು.19–ಸರಸ್ವತಿಪುರಂನ ಶ್ರೀ ಕೃಷ್ಣಧಾಮದಲ್ಲಿ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪದಲ್ಲಿರುವ ಶ್ರೀ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು ಅಧಿಕ ಮಾಸದ ಪ್ರಯುಕ್ತ ತಾವು ನಾಡಿನಾದ್ಯಂತ ನಡೆಸುವಂತೆ ಕರೆ ನೀಡಿರುವ ದಶಕೋಟಿ ಶ್ರೀ ರಾಮನಾಮ ಜಪಯಜ್ಞವನ್ನು ಉದ್ಘಾಟಿಸಿ, ಸರಳ ಜಪಯಜ್ಞದ ಮಾಹಿತಿ ಕರಪತ್ರ ಬಿಡುಗಡೆಗೊಳಿಸಿದರು. ಬಳಿಕ ಸಾಮೂಹಿಕ ಜಪ ನಡೆಯಿತು.

ಪ್ರತಿನಿತ್ಯ ಸಾಯಂಕಾಲ ನಡೆಯುವ ಶ್ರೀಗಳ ವಿದ್ಯಾರ್ಥಿ ಕೌಶಿಕ್ ಜಪ ವಿಧಾನ ಬೋಧಿಸಿದರು. ಈ ಸಂದರ್ಭ ನೂರಾರು ಮಂದಿ ಭಕ್ತರಿಂದ ಸಾಮೂಹಿಕ ಜಪ ನಡೆಯಲಿದೆ. ಅಲ್ಲದೇ ಸೋಮವಾರದಂದು ನಾಡಿನಾದ್ಯಂತ ಇರುವ ಪೇಜಾವರ ಮಠದ ಶಿಕ್ಷಣ ಸಂಸ್ಥೆಗಳೂ ಸೇರಿದಂತೆ ಅನೇಕ ಕಡೆಗಳಲ್ಲಿ ಜಪಯಜ್ಞಕ್ಕೆ ಚಾಲನೆ ದೊರೆತಿದೆ.

ಉದ್ಘಾಟನಾ ಕಾರ್ಯಕ್ರಮದಲ್ಲಿ ವಿದ್ವಾನ್ ಎ.ಹರಿದಾಸ್ ಭಟ್, ಚಾತುರ್ಮಾಸ್ಯ ಸಮಿತಿ ಅಧ್ಯಕ್ಷ ಎಂ.ಕೆ. ಪುರಾಣಿಕ್, ಕಾರ್ಯದರ್ಶಿ ರವಿಶಾಸ್ತ್ರಿ, ಶ್ರೀನಿವಾಸ ಪ್ರಸಾದ್, ವಿದ್ವಾನ್ ವರಖೇಡಿ ಪದ್ಮನಾಭ ಆಚಾರ್ಯ ಮತ್ತಿತರರು ಹಾಜರಿದ್ದರು.

ಗಂಗೋತ್ರಿ ಲಯನ್ಸ್ ಕ್ಲಬ್ ಆಫ್ ಮೈಸೂರು ಸಂಸ್ಥೆಯ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಜು. 19– ಮೈಸೂರಿನ ಯಾದವಗಿರಿಯಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಪ್ರಸಕ್ತ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಇತ್ತೀಚೆಗೆ ಜರುಗಿತು.

2023–24ನೇ ಸಾಲಿನ ಲಯನ್ಸ್ ಕ್ಲಬ್ ಆಫ್ ಮೈಸೂರು, ಗಂಗೋತ್ರಿಯ ನೂತನ ಅಧ್ಯಕ್ಷರಾಗಿ ಮಾಲಾ ಚಂದ್ರಶೇಖರ್, ಕಾರ್ಯದರ್ಶಿಯಾಗಿ ಅನುರಾಧ ನಂದೀಶ್, ಖಜಾಂಚಿಯಾಗಿ ಮಾಲಾ ನಂಜುಂಡೇಗೌಡ ಅಧಿಕಾರ ವಹಿಸಿಕೊಂಡರು. ಲಯನ್ಸ್ ಕ್ಲಬ್ ಬೆಂಗಳೂರಿನ ಮಾಜಿ ಜಿಲ್ಲಾ ರಾಜ್ಯಪಾಲರಾದ ಲಯನ್ ಹೇಮಂತ್ ಕುಮಾರ್ ಪದಗ್ರಹಣ ನೆರವೇರಿಸಿ, ಯಾವುದೇ ಕೆಲಸ ಮಾಡುವ ಮೊದಲು ಇಚ್ಛಾಶಕ್ತಿ ಇರಬೇಕು. ಆಗ ಮಾತ್ರ ಗುರಿ ಮುಟ್ಟಲು ಸಾಧ್ಯ ಎಂದರು. ಜನರ ನಂಬಿಕೆ ಹಾಗೂ ವಿಶ್ವಾಸ ಉಳಿಸಿಕೊಳ್ಳುವಂತಹ ಕೆಲಸ ಮಾಡುವುದರತ್ತ ಗಮನ ಹರಿಸೋಣ ಎಂದರು. ಇದೇ ಸಂದರ್ಭದಲ್ಲಿ ವೈದ್ಯರ ದಿನಾಚರಣೆ ಅಂಗವಾಗಿ ಹೋಮಿಯೋಪತಿ ವೈದ್ಯರಾದ ಡಾ. ಮಧುರ ಅವರನ್ನು ಸನ್ಮಾನಿಸಲಾಯಿತು

ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್ ಆಫ್ ಮೈಸೂರ್, ಗಂಗೋತ್ರಿ ಸಂಸ್ಥೆಯ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.

ಎಸ್ಕಲೇಟರ್ ಸೇವೆ 15 ನಿಮಿಷ ಮಾತ್ರ ಸ್ಥಗಿತವಾಗಿತ್ತು: ರೈಲ್ವೆ ಇಲಾಖೆ ಸ್ಪಷ್ಟನೆ

ಮೈಸೂರು, ಜು.19(ಬಿಎಲ್‌ಯು)– ಮೈಸೂರು ನಗರದ ಪ್ರಧಾನ ರೈಲ್ವೆ ನಿಲ್ದಾಣದಲ್ಲಿ ಎಸ್ಕಲೇಟರ್ ಸೇವೆಯು ಜುಲೈ 16ರ ಬೆಳಗ್ಗೆ 9.30 ರಿಂದ 9.45 ಗಂಟೆ ತನಕ ಮಾತ್ರ ಸ್ಥಗಿತಗೊಂಡಿತ್ತು ಎಂದು ನೈರುತ್ಯ ರೈಲ್ವೆಯ ಸೀನಿಯರ್ ಡಿವಿಷನಲ್ ಆಪರೇಷನ್ ಮ್ಯಾನೇಜರ್ ಹಾಗೂ ಹಿರಿಯ ಸಾರ್ವಜನಿಕ ಸಂಪರ್ಕಾಧಿಕಾರಿ ಕೆ.ಲೋಹಿತೇಶ್ವರ ಸ್ಪಷ್ಟಪಡಿಸಿದ್ದಾರೆ.

ಜುಲೈ 17ರ 'ಮೈಸೂರು ಮಿತ್ರ' ಸಂಚಿಕೆಯಲ್ಲಿ ಪ್ರಕಟವಾಗಿದ್ದ "ಕೆಟ್ಟು ನಿಂತಿರುವ ಮೈಸೂರು ರೈಲ್ವೆ ನಿಲ್ದಾಣದ ಎಸ್ಕಲೇಟರ್" ವರದಿಗೆ ಪ್ರತಿಕ್ರಿಯೆ ನೀಡಿರುವ ಅವರು, ವಿನಾ ಕಾರಣ ಪ್ರಯಾಣಿಕರು ತುರ್ತು ಸ್ಥಗಿತ ಬಟನ್ ಒತ್ತಿದ್ದರ ಪರಿಣಾಮ ಎಸ್ಕಲೇಟರ್ ಸ್ಥಗಿತಗೊಂಡಿತ್ತು. ಇದರಿಂದ ಪ್ರಯಾಣಿಕರಿಗೆ ತೊಂದರೆ ಆಗಿತ್ತು. ಆದರೆ ಅರಿವಿಲ್ಲದೆ ಪ್ರಯಾಣಿಕರು ಈ ಪ್ರಮಾದ ವೆಸಗಿದ್ದರು. ರೈಲ್ವೆ ಸರ್ವೀಸ್ ಇಂಜಿನಿಯರ್‌ಗಳು ತಕ್ಷಣ ದುರಸ್ತಿ ಮಾಡಿದರು. ಇದೇ ರೀತಿಯ ಪ್ರಮಾದಗಳು ಆಗಾಗ ಸಂಭವಿಸುತ್ತಿರುತ್ತವೆ ಎಂದು ತಿಳಿಸಿದ್ದಾರೆ.

ರೈಲ್ವೆ ಇಲಾಖೆ ಸದಾ ಅನಿಯಮಿತವಾಗಿ ಎಸ್ಕಲೇಟರ್ ಸೇವೆ ಒದಗಿಸುತ್ತದೆ. ಪ್ರಯಾಣಿಕರು ಎಸ್ಕಲೇಟರ್‌ನ ತುರ್ತು ಸ್ಥಗಿತ ಬಟನ್ ಒತ್ತಬಾರದು. ಹೆಚ್ಚುವರಿಯಾಗಿ ನವೀಕೃತ ಫುಟ್ ಓವರ್ ಬ್ರಿಡ್ಜ್ ಅನ್ನು ಜು.17ರಿಂದ ಸೇವೆಗೆ ಮುಕ್ತಗೊಳಿಸಿದ್ದು, ಪ್ರಯಾಣಿಕರು ಇದರ ಉಪಯೋಗ ಪಡೆದುಕೊಳ್ಳಬಹುದು ಎಂದು ಲೋಹಿತೇಶ್ವರ ಸಲಹೆ ನೀಡಿದ್ದಾರೆ.

ಪ್ರಯಾಣಿಕರಿಗೆ ಹೆಚ್ಚಿನ ಅನುಕೂಲ ಆಗುವ ಹಾಗೆ ಸೇವೆ ಒದಗಿಸಲು ರೈಲ್ವೆ ಇಲಾಖೆ ಸದಾ ಬದ್ಧವಾಗಿದೆ ಎಂದು ಲೋಹಿತೇಶ್ವರ್ ಭರವಸೆ ನೀಡಿದ್ದಾರೆ.

ದಕ್ಷಿಣ ಕೊಡಗಿನಲ್ಲಿ ಪುನರ್ವಸು ಮಳೆ ಚುರುಕು

ಭತ್ತದ ನಾಟಿಗೆ ಸಜ್ಜಾಗುತ್ತಿರುವ ಅನ್ನದಾತರು



ಮಡಿಕೇರಿ, ಜು.19– ದಕ್ಷಿಣ ಕೊಡಗಿನಲ್ಲಿ ಪುನರ್ವಸು ಮಳೆ ಕಳೆದೆರಡು ದಿನಗಳಿಂದ ಚುರುಕುಗೊಂಡಿದ್ದು, ಕಳೆದ ವರ್ಷಗಳಿಗೆ ಹೋಲಿಸಿದ್ದಲ್ಲಿ ಮಳೆಯ ಪ್ರಮಾಣ ಈ ವರ್ಷ ಕುಂಠಿತಗೊಂಡಿದೆ. ಈ ನಡುವೆಯೂ ಸಹ ಭತ್ತದ ನಾಟಿ ಕಾರ್ಯಕ್ಕೆ ಅನ್ನದಾತ ಅಣಿಯಾಗುತ್ತಿದ್ದಾನೆ. ಪೊನ್ನಂಪೇಟೆ ತಾಲೂಕಿನ ಹಳ್ಳಿಗಟ್ಟು, ನಲ್ಲೂರು ಗ್ರಾಮಗಳ ವ್ಯಾಪ್ತಿಯಲ್ಲಿ ಭತ್ತ ಬೆಳೆಯಲು ರೈತರು ಸಿದ್ಧರಾಗುತ್ತಿದ್ದಾರೆ.

ನಲ್ಲೂರು ಗ್ರಾಮದ ಸೋಮೆಂಗಡ ಗಣೇಶ್ ತಿಮ್ಮಯ್ಯ ಅವರ ಭತ್ತದ ಗದ್ದೆಯಲ್ಲಿ ಭತ್ತದ ಸಸಿ ಮಡಿಗಳು ನಾಟಿ ಕಾರ್ಯಕ್ಕೆ ಸಿದ್ಧಗೊಂಡಿವೆ. ಕೃಷಿ ಕ್ಷೇತ್ರದ ಸಾಧನೆಗಾಗಿ ಕರ್ನಾಟಕ ರಾಜ್ಯದ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಭಾಜನರಾಗಿರುವ ಸೋಮೆಂಗಡ ಗಣೇಶ್ ತಿಮ್ಮಯ್ಯ ಅವರು ಪ್ರಸಕ್ತ ಸಾಲಿನಲ್ಲಿ ವಾಡಿಕೆ ಮಳೆಗಿಂತ ಕಡಿಮೆ ಮಳೆಯಾಗಿರುವ ಹಿನ್ನೆಲೆಯಲ್ಲಿ 170ರಿಂದ 180 ದಿನಗಳ ಭತ್ತದ ತಳಿಗಳ ಬದಲಿಗೆ 120ರಿಂದ 130 ದಿನಗಳಲ್ಲಿ ಬೆಳೆಯುವ ಭತ್ತದ ತಳಿಗಳನ್ನು ಬೆಳೆಯಲು ಮುಂದಾಗಿದ್ದಾರೆ. ಸೋಮೆಂಗಡ ಗಣೇಶ್ ತಿಮ್ಮಯ್ಯ ಅವರ ಭತ್ತದ ಸಸಿ ಮಡಿಗಳು ತಯಾರಾಗಿದ್ದು, ನಾಟಿ ಕಾರ್ಯಕ್ಕೆ ಅಣಿಯಾಗುತ್ತಿದ್ದಾರೆ. ಈ ಕುರಿತು ಮಾತ ನಾಡಿದ ಸೋಮೆಂಗಡ ಗಣೇಶ್ ತಿಮ್ಮಯ್ಯ ಅವರು, ಹಿಂದಿನ ವರ್ಷಗಳಿಗೆ ಹೋಲಿಸಿದ್ದಲ್ಲಿ ಈ ವರ್ಷ ಶೇ.40ರಷ್ಟು ಮಳೆ ಕೊರತೆಯಾಗಿರುವ ಹಿನ್ನೆಲೆಯಲ್ಲಿ ರೈತರು 120ರಿಂದ 130 ದಿನಗಳಲ್ಲಿ ಬೆಳೆಯುವ ಸುಧಾರಿತ ಅಥವಾ ಹೈಬ್ರೀಡ್ ಭತ್ತದ ತಳಿಗಳನ್ನು ಆಯ್ಕೆ ಮಾಡಿಕೊಂಡು ನಾಟಿ ಕಾರ್ಯ ಕೈಗೊಂಡಲ್ಲಿ ಲಾಭ ಪಡೆದುಕೊಳ್ಳಬಹುದೆಂದು ರೈತರಿಗೆ ಸಲಹೆ ನೀಡಿದ್ದಾರೆ.

ಪೊನ್ನಂಪೇಟೆ ತಾಲೂಕಿನ ಹುದೂರು ಗ್ರಾಮದ ಉದಯೋನ್ಮುಖ ಕೃಷಿ ಪಂಡಿತ ಪ್ರಶಸ್ತಿಗೆ ಭಾಜನರಾಗಿರುವ ಪದ್ಮನಾಭರಾವ್ ಅವರ ಪುತ್ರ ಪ್ರಗತಿಪರ ಕೃಷಿಕ ಬಿ.ಪಿ.ರವಿಶಂಕರ್ ಅವರು ತಮ್ಮ ಸಹೋದರ ಜೈಶಂಕರ್ ಅವರ ಸಹಕಾರದೊಂದಿಗೆ ತಮ್ಮ ಕುಟುಂಬಕ್ಕೆ ಸೇರಿದ 33 ಎಕರೆ ಗದ್ದೆಯಲ್ಲಿ ಭತ್ತದ ಕೃಷಿ ಮಾಡುತ್ತಾ ಬರುತ್ತಿದ್ದಾರೆ.

ಸರಾಸರಿ 750 ಕ್ವಿಂಟಾಲ್ ಭತ್ತ ಬೆಳೆಯುವ ಇವರು 20ಕ್ಕೂ ಹೆಚ್ಚು ತಳಿಗಳನ್ನು ಬೆಳೆಯುವ ಮೂಲಕ, ಬಿತ್ತನೆ ಬೀಜ ಉತ್ಪಾದನೆ ಮಾಡುತ್ತಿರುವುದು ವಿಶೇಷತೆಯಾಗಿದೆ. ಪ್ರಸಕ್ತ ಸಾಲಿನಲ್ಲಿ ಮಳೆ ಕೊರತೆಯ ನಡುವೆಯೂ ಗದ್ದೆಯಲ್ಲಿ ವಿವಿಧ ಭತ್ತದ ತಳಿಗಳು ಬೆಳೆಯಲು ಅಣಿಯಾಗಿದ್ದು, ಭತ್ತದ ಸಸಿ ಮಡಿಗಳಲ್ಲಿ ಅಗೆ ತೆಗೆಯುವ ಕಾರ್ಯ ನಡೆಯುತ್ತಿದೆ. ಕೃಷಿ ಕಾರ್ಮಿಕ ವರ್ಗ ಗದ್ದೆಗಳಲ್ಲಿ ಅಗೆ ತೆಗೆಯುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ವರ್ಷ ಮಳೆ ಕೊರತೆಯ ನಡುವೆಯೂ ಪುನರ್ವಸು ಮಳೆ ಚುರುಕುಗೊಂಡಿರುವ ಹಿನ್ನೆಲೆಯಲ್ಲಿ ಭತ್ತದ ನಾಟಿ ಕಾರ್ಯಕ್ಕೆ ಅನ್ನದಾತ ಮುಂದಾಗಿರುವುದು ನೆಮ್ಮದಿ ತಂದಿದೆ.

ಜನರಲ್ ತಿಮ್ಮಯ್ಯ ಜನಿಸಿದ ಮಣ್ಣಿಗೆ ನಮನ

ಜನರಲ್ ತಿಮ್ಮಯ್ಯ ಮ್ಯೂಸಿಯಂ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್



ಮಡಿಕೇರಿ, ಜು.19– ಜನರಲ್ ತಿಮ್ಮಯ್ಯ ಅವರು ಮಹಾನ್ ಸೇನಾನಿಯಾಗಿದ್ದು, ದೇಶದ ವಿವಿಧ ಭಾಗಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ಹುಟ್ಟಿದ ಮಣ್ಣಿಗೆ ನಮಿಸುತ್ತೇನೆ ಎಂದು ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ, ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಅಖಿಲೇಶ್ ಯಾದವ್ ಹೆಮ್ಮೆಯ ನುಡಿಯಾಡಿದರು.

ಮಂಗಳವಾರ ಬೆಂಗಳೂರಿನಲ್ಲಿ ನಡೆದ 'ಮಹಾ ಘಟ್‌ಬಂಧನ್' ಸಭೆಯಲ್ಲಿ ಪಾಲ್ಗೊಂಡ ಬಳಿಕ ಮಡಿಕೇರಿಗೆ ಆಗಮಿಸಿದ್ದ ಅಖಿಲೇಶ್ ಯಾದವ್ ಮಡಿಕೇರಿ ಹೊರವಲಯದ ರೆಸಾರ್ಟ್ ಒಂದರಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಮಡಿಕೇರಿ ಜನರಲ್ ತಿಮ್ಮಯ್ಯ ಮ್ಯೂಸಿಯಂಗೆ ಭೇಟಿ ನೀಡಿದ ಅಖಿಲೇಶ್ ಯಾದವ್, ಜನರಲ್ ತಿಮ್ಮಯ್ಯ ಮ್ಯೂಸಿಯಂ ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜನರಲ್ ತಿಮ್ಮಯ್ಯ ಅವರ ಬಾಲ್ಯ, ಸೇನಾ ಸಾಧನೆ ಬಗ್ಗೆ ಮಾಹಿತಿ ಪಡೆದ ಅಖಿಲೇಶ್ ಯಾದವ್, ತಿಮ್ಮಯ್ಯ ಅವರ ಅಪ್ರತಿಮ ಸೇನಾ ಸೇವೆ ಎಲ್ಲರಿಗೂ ಮಾದರಿಯಾಗಿದೆ ಎಂದು ಶ್ಲಾಘಿಸಿದರು. ತಿಮ್ಮಯ್ಯ ಮ್ಯೂಸಿಯಂ ಕುರಿತು ಅಲ್ಲಿನ ವ್ಯವಸ್ಥಾಪಕ ಸುಬೇದಾರ್ ಮೇಜರ್ ಗೌಡಂಡ ತಿಮ್ಮಯ್ಯ ಸವಿಸ್ತಾರವಾಗಿ ಅಖಿಲೇಶ್ ಯಾದವ್ ಅವರಿಗೆ ಮಾಹಿತಿ ನೀಡಿದರು. ಈ ಸಂದರ್ಭ ಸಮಾಜವಾದಿ ಪಕ್ಷದ ರಾಷ್ಟ್ರೀಯ ವಕ್ತಾರ ರಾಜೇಂದ್ರ ಚೌಧರಿ ಜೊತೆಗಿದ್ದು ಮ್ಯೂಸಿಯಂ ವೀಕ್ಷಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅಖಿಲೇಶ್ ಯಾದವ್, ಮೈಸೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಸಂದರ್ಭ ಅನೇಕ ಬಾರಿ ಕೊಡಗಿಗೆ ಬಂದಿದ್ದೇನೆ. ಮೈಸೂರು ದಸರಾವನ್ನೂ ನೋಡಿದ್ದೇನೆ. ಮಡಿಕೇರಿ ದಸರಾ ನೋಡಲು ವಿಭಿನ್ನವಾಗಿದೆ ಎಂದು ತಮ್ಮ ನೆನಪುಗಳನ್ನು ಬಿಚ್ಚಿಟ್ಟರು. ಮಿಲಿಟರಿ ಶಾಲೆಯಲ್ಲಿ ಓದುತ್ತಿದ್ದ ಸಂದರ್ಭ ಅಲ್ಲಿದ್ದ ಸೇನಾಧಿಕಾರಿಗಳು ಕೊಡಗಿನ ಜನರ ದೇಶಸೇವೆ, ಸೇನಾ ಪರಂಪರೆ, ದೇಶಕ್ಕಾಗಿ ಮಾಡಿದ ತ್ಯಾಗ, ನೀಡಿದ ಬಲಿದಾನಗಳನ್ನು ವಿವರಿಸುತ್ತಿದ್ದರು. ಆ ವೇಳೆಯಲ್ಲಿಯೇ ಜನರಲ್ ತಿಮ್ಮಯ್ಯ ಅವರ ಬಗ್ಗೆಯೂ ತಿಳಿದುಕೊಂಡಿದ್ದೆ. ಮಡಿಕೇರಿಗೆ ಬಂದ ಸಂದರ್ಭ ಜನರಲ್ ತಿಮ್ಮಯ್ಯ ಅವರ ಹೆಸರಲ್ಲಿ ಒಂದು ಅದ್ಭುತವಾದ ಮ್ಯೂಸಿಯಂ ನಿರ್ಮಿಸಲಾಗಿದೆ ಎಂದು ಮಾಹಿತಿ ದೊರೆಯಿತು. ಅದನ್ನು ಕಣ್ತುಂಬಿಕೊಳ್ಳಲು ಇಲ್ಲಿಗೆ ಆಗಮಿಸಿದ್ದೇನೆ ಎಂದು ಹೇಳಿದರು. ಜನರಲ್ ತಿಮ್ಮಯ್ಯ ಅವರು ಮಹಾನ್ ಸೇನಾನಿಯಾಗಿದ್ದು ಅವರು ಹುಟ್ಟಿದ ಮಣ್ಣಿಗೆ ನಮಿಸುತ್ತೇನೆ ಎಂದು ಹೆಮ್ಮೆಯಿಂದ ನುಡಿದರು.

ಗೃಹಲಕ್ಷ್ಮಿ ನೋಂದಣಿ ಇಂದಿನಿಂದ

ಮಡಿಕೇರಿ, ಜು.19– ಜಿಲ್ಲೆಯ ಕುಟುಂಬದಲ್ಲಿನ ಯಜಮಾನಿ ಮಹಿಳೆಗೆ ಪ್ರತಿ ತಿಂಗಳು 2000 ರೂ. ಗಳನ್ನು ನೀಡುವ ಸರ್ಕಾರದ ಪ್ರಮುಖ ಕಾರ್ಯಕ್ರಮ ಗೃಹಲಕ್ಷ್ಮಿ ಯೋಜನೆಗೆ ಬುಧವಾರ ಚಾಲನೆ ದೊರೆತಿದ್ದು, ಜುಲೈ, 20 ರಿಂದ ಕೊಡಗು ಜಿಲ್ಲೆಯಲ್ಲಿ ನೋಂದಣಿ ಕಾರ್ಯ ಆರಂಭವಾಗಲಿದೆ ಎಂದು ಜಿಲ್ಲಾಧಿಕಾರಿ ವೆಂಕಟ್‌ರಾಜಾ ತಿಳಿಸಿದ್ದಾರೆ.

ಗೃಹಲಕ್ಷ್ಮಿ ಯೋಜನೆಯ ಸೌಲಭ್ಯ ಪಡೆಯಲು ಪ್ರಮುಖ ಅರ್ಹತೆಗಳು: ಗೃಹಲಕ್ಷ್ಮಿ ಯೋಜನೆಯು ಕರ್ನಾಟಕ ರಾಜ್ಯದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯಿಂದ ವಿತರಿಸಿರುವ ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಗೆ ಮಾತ್ರ ಅನ್ವಯವಾಗುತ್ತದೆ.

ಗೃಹಲಕ್ಷ್ಮಿ ಯೋಜನೆಗೆ ಯಾರು ಅರ್ಹರಾಗುವುದಿಲ್ಲ: ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಈ ಯೋಜನೆಗೆ ಅರ್ಹರಾಗುವುದಿಲ್ಲ. ಕುಟುಂಬದ ಯಜಮಾನಿ ಅಥವಾ ಯಜಮಾನಿಯ ಪತಿ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವವರಾಗಿದ್ದಲ್ಲಿ ಅರ್ಹರಾಗುವುದಿಲ್ಲ.

ಯೋಜನೆಯಡಿ ನೋಂದಾಯಿಸಲು ಬೇಕಾದ ದಾಖಲಾತಿಗಳು: ಪಡಿತರ ಚೀಟಿಯ ಸಂಖ್ಯೆ, ಯಜಮಾನಿಯ ಹಾಗೂ ಯಜಮಾನಿ ಪತಿಯ ಆಧಾರ್ ಕಾರ್ಡ್ ಸಂಖ್ಯೆ, ಯಜಮಾನಿ ಆಧಾರ್‌ಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್/ ಫಲಾನುಭವಿಯು ಇಚ್ಛಿಸುವ ಪರ್ಯಾಯ ಬ್ಯಾಂಕ್ ಖಾತೆಯ ವಿವರ, ಆಧಾರ್‌ಗೆ ಜೋಡಣೆಯಾಗಿರುವ ಮೊಬೈಲ್ ಸಂಖ್ಯೆ.

ಜಿಲ್ಲಾ ಹಾಗೂ ತಾಲೂಕು ಸಹಾಯವಾಣಿ ವಿವರ ಇಂತಿದೆ: ಜಿಲ್ಲಾ ಸಹಾಯವಾಣಿ 08272–298379, 9535626053, ಮಡಿಕೇರಿ ಸಹಾಯವಾಣಿ 08272–295087, 9980898522, ಸೋಮವಾರಪೇಟೆ ಸಹಾಯವಾಣಿ 08276–200023, 9980955250, ಕುಶಾಲನಗರ ಸಹಾಯವಾಣಿ 08276–200023, 9980955250, ವಿರಾಜಪೇಟೆ ಸಹಾಯವಾಣಿ 7795732295, ಪೊನ್ನಂಪೇಟೆ ಸಹಾಯವಾಣಿ 7795732295.

ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಒಟ್ಟು 203 ಸೇವಾ ಕೇಂದ್ರಗಳಿದ್ದು ವಿವರಗಳು ಇಂತಿದೆ. ಮಡಿಕೇರಿ ತಾಲ್ಲೂಕಿನಲ್ಲಿ ಗ್ರಾಮ ಒನ್ 24, ಬಾಪೂಜಿ ಸೇವಾ ಕೇಂದ್ರ 26, ಸ್ಥಳೀಯ ಸಂಸ್ಥೆ 04 ಒಟ್ಟು 54.

ಸೋಮವಾರಪೇಟೆ ತಾಲೂಕಿನಲ್ಲಿ ಗ್ರಾಮ ಒನ್ 18, ಬಾಪೂಜಿ ಸೇವಾ ಕೇಂದ್ರ 24, ಸ್ಥಳೀಯ ಸಂಸ್ಥೆ 01 ಒಟ್ಟು 43, ಕುಶಾಲನಗರ ತಾಲೂಕಿನಲ್ಲಿ ಗ್ರಾಮ ಒನ್ 17, ಬಾಪೂಜಿ ಸೇವಾ ಕೇಂದ್ರ 16, ಸ್ಥಳೀಯ ಸಂಸ್ಥೆ 03 ಒಟ್ಟು 36. ವಿರಾಜಪೇಟೆ ತಾಲೂಕಿನಲ್ಲಿ ಗ್ರಾಮ ಒನ್ 14, ಬಾಪೂಜಿ ಸೇವಾ ಕೇಂದ್ರ 19, ಸ್ಥಳೀಯ ಸಂಸ್ಥೆ 03 ಒಟ್ಟು 36, ಪೊನ್ನಂಪೇಟೆ ತಾಲ್ಲೂಕಿನಲ್ಲಿ ಗ್ರಾಮ ಒನ್ 15, ಬಾಪೂಜಿ ಸೇವಾ ಕೇಂದ್ರ 19, ಒಟ್ಟು 34 ಸೇವಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ ಎಂದು ಜಿಲ್ಲಾಧಿಕಾರಿ ಅವರು ತಿಳಿಸಿದ್ದಾರೆ.

ನೋಂದಣಿ ವಿಧಾನ

ಫಲಾನುಭವಿಗಳು ಗ್ರಾಮಒನ್, ನಗರ ಪ್ರದೇಶದಲ್ಲಿ ತೆರೆಯಲಾದ ಕೇಂದ್ರಗಳು ಹಾಗೂ ಬಾಪೂಜಿ ಸೇವಾ ಕೇಂದ್ರದ ಮೂಲಕ ಸೇವಾಸಿಂಧು ಪೋರ್ಟಲ್‌ನಲ್ಲಿ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು. ಫಲಾನುಭವಿಗಳು ಕೇಂದ್ರಗಳಲ್ಲದೆ ಪ್ರಜಾಪ್ರತಿನಿಧಿ ಮೂಲಕ ಸಹ ಸೇವಾ ಸಿಂಧು ಪೋರ್ಟಲ್‌ನಲ್ಲಿ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು. ಪ್ರತಿ ದಿನ ಅರ್ಹ ಫಲಾನುಭವಿಗಳಿಗೆ (ಬೆಳಗ್ಗೆ 30 ಮತ್ತು ಮಧ್ಯಾಹ್ನ 30 ಮಂದಿಗೆ ಮಾತ್ರ) ಸಮಯ ಹಾಗೂ ನೋಂದಣಿ ಕೇಂದ್ರದ ವಿವರಗಳು ಮೊಬೈಲ್ ಸಂದೇಶದ ಮೂಲಕ ಸ್ವೀಕೃತವಾಗಲಿದ್ದು, ಈ ಸಂದೇಶ ಸ್ವೀಕೃತಗೊಂಡ ಫಲಾನುಭವಿಗಳು ಮಾತ್ರ ಸಂದೇಶದಲ್ಲಿ ವಿವರಿಸಿದ ಸೇವಾ ಕೇಂದ್ರಕ್ಕೆ ನಿಗದಿಪಡಿಸಿದ ಸಮಯಕ್ಕೆ ಹಾಜರಾಗಿ ಅರ್ಜಿ ಸಲ್ಲಿಸಬಹುದಾಗಿರುತ್ತದೆ.

ಪ್ರತಿ ಫಲಾನುಭವಿಯ ನೋಂದಾವಣಿಗೆ ನಿಗದಿ ಮಾಡಿರುವ ದಿನಾಂಕ, ಸಮಯ ಮತ್ತು ಸ್ಥಳವನ್ನು 8147500500 ನಂಬರ್‌ಗೆ ಎಸ್‌ಎಂಎಸ್ ಮೂಲಕ ಸಂದೇಶ ಕಳುಹಿಸಿ ಅಥವಾ 1902 ಕ್ಕೆ ಕರೆ ಮಾಡಿ ಮಾಹಿತಿ ಪಡೆಯಬಹುದಾಗಿದೆ.

ಲಕ್ಷ್ಮಿ ನಿಧನ



ನಾಪೋಕ್ಲು, ಜು.19– ಇಲ್ಲಿಗೆ ಸಮೀಪದ ಹಳೆತಾಲೂಕು ನಿವಾಸಿ ಬಾಬು ಪೂಜಾರಿ ಅವರ ಧರ್ಮಪತ್ನಿ ಲಕ್ಷ್ಮಿ(60) ಬುಧವಾರ ಸಂಜೆ ನಿಧನ ಹೊಂದಿದ್ದಾರೆ. ಮೃತರು ಪತಿ ಬಾಬು ಪೂಜಾರಿ ಹಾಗೂ ಇಬ್ಬರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸ್ವಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಜಾನನ ಭಟ್

ನಾಪೋಕ್ಲು, ಜು.19– ಸ್ಥಳೀಯ ನಿವಾಸಿ ಇದೀಗ ಪಾಲೂರು ಗ್ರಾಮದ ಬಕ್ಕದಲ್ಲಿ ವಾಸವಾಗಿರುವ ಜ್ಯೋತಿಷಿ ಗಜಾನನ ಭಟ್ (65) ನಿಧನರಾಗಿದ್ದಾರೆ. ಮೃತರು ಪತ್ನಿ ಲಕ್ಷ್ಮಿ ಹಾಗೂ ಪುತ್ರಿ ಗಾಯತ್ರಿ ಸೇರಿದಂತೆ ಅಪಾರ ಬಂಧು ಬಾಂಧವರನ್ನು ಅಗಲಿದ್ದು, ಮಂಗಳವಾರ ಬಕ್ಕದಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಗಂಧದಕೋಟಿ: ನೂತನ ಡಯಾಲಿಸಿಸ್ ಕೇಂದ್ರ ಉದ್ಘಾಟನೆ



ಕುಶಾಲನಗರ, ಜು.19– ಇಲ್ಲಿನ ಲಯನ್ಸ್ 317 ಡಿ ಹಾಗೂ ಕೆಎಂಟಿ ರಿನಾಲ್ ಕೇರ್ ಸೊಲ್ಯೂಷನ್ ಸಹಭಾಗಿತ್ವದೊಂದಿಗೆ ಕುಶಾಲನಗರದ ಗಂಧದಕೋಟಿ ಬಳಿ ನಿರ್ಮಿಸಿರುವ ಡಯಾಲಿಸಿಸ್ ಸೆಂಟರ್ ಲೋಕಾರ್ಪಣೆಗೊಳಿಸಲಾಯಿತು.

ಲಯನ್ಸ್ ಮಾಜಿ ರಾಜ್ಯಪಾಲ ವಸಂತ ಕುಮಾರ್ ಶೆಟ್ಟಿ ಅವರು ಡಯಾಲಿಸಿಸ್ ಸೆಂಟರ್ ಉದ್ಘಾಟಿಸಿದರು. ಲಯನ್ಸ್ ಟ್ರಸ್ಟ್ ಮೂಲಕ ಲಯನ್ಸ್ ಜಿಲ್ಲೆಗೆ 11 ಯಂತ್ರಗಳನ್ನು ಈಗಾಗಲೆ ನೀಡಲಾಗಿದೆ. ಡಯಾಲಿಸಿಸ್‌ಗೆಂದು ಬರುವವರ ಸಮಯ ವ್ಯರ್ಥವಾಗದಂತೆ ಅನುಕೂಲ ಒದಗಿಸಲು ಕುಶಾಲನಗರದಲ್ಲಿ ಕೇಂದ್ರ ಆರಂಭಿಸಿದ್ದು 14 ಲಕ್ಷ ವೆಚ್ಚದಲ್ಲಿ ಎರಡು ಯಂತ್ರಗಳನ್ನು ಒದಗಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕೆಎಂಟಿ ರಿನಾಲ್ ಕೇರ್ ಸೊಲ್ಯೂಷನ್ ಅಧ್ಯಕ್ಷ ಪೊನ್ನಚ್ಚನಮೋಹನ್ ಪ್ರಾಸ್ತಾವಿಕವಾಗಿ ಮಾತನಾಡಿ, ಡಯಾಲಿಸಿಸ್ ಸೆಂಟರ್ ಬಗ್ಗೆ ಮಾಹಿತಿ ಒದಗಿಸಿದರು. ದಾನಿಗಳ ಸಹಕಾರ ದೊರೆತಲ್ಲಿ ಬಿಪಿಎಲ್ ಕಾರ್ಡ್ ಹೊಂದಿರುವವರಿಗೆ ಶೇ.50 ರಿಯಾಯಿತಿ ನೀಡಲು ಉದ್ದೇಶಿಸಲಾಗಿದೆ. ಪ್ರಸಕ್ತ ಕನಿಷ್ಠ ದರದಲ್ಲಿ ಈ ಚಿಕಿತ್ಸೆ ಒದಗಿಸಲಾಗುವುದು. ದೂರದ ಸ್ಥಳಗಳಿಗೆ ಚಿಕಿತ್ಸೆಗೆ ತೆರಳುತ್ತಿದ್ದ ಕುಶಾಲನಗರದಲ್ಲಿ ಇರುವ 50 ಕ್ಕೂ ಅಧಿಕ ಮಂದಿ ಇದರಿಂದ ಹೆಚ್ಚಿನ ಪ್ರಯೋಜನ ಪಡೆಯಲಿದ್ದಾರೆ ಎಂದರು. ಲಯನ್ಸ್ ಪ್ರಾಂತೀಯ ಅಧ್ಯಕ್ಷ ಅಂಬೇಕಲ್ ನವೀನ್, ಕುಶಾಲ ನಗರ ಲಯನ್ಸ್ ನೂತನ ಅಧ್ಯಕ್ಷ ಸುಮನ್ ಬಾಲಚಂದ್ರ, ಕಾರ್ಯದರ್ಶಿ ಟಿ.ಕೆ.ರಾಜ ಶೇಖರ್, ನಿತಿನ್ ಎನ್ ಗುಪ್ತ ನಿಕಟಪೂರ್ವ ಅಧ್ಯಕ್ಷ ಎಂ.ಎಸ್.ಚಿಣ್ಣಪ್ಪ, ಹೇಮಂತ್, ಮಾಜಿ ಅಧ್ಯಕ್ಷ ಕೊಡಗನ ಹರ್ಷ, ಲಯನ್ಸ್ ಜಿಲ್ಲಾ ಪ್ರಮುಖರು ಹಾಜರಿದ್ದರು.

ಇಂದಿನಿಂದ ಚಾ.ನಗರ ಗೃಹಲಕ್ಷ್ಮಿ ನೋಂದಣಿ

ಚಾಮರಾಜನಗರ, ಜು.19– ಕುಟುಂಬದ ಯಜಮಾನಿ ಮಹಿಳೆಗೆ ತಿಂಗಳಿಗೆ ಎರಡು ಸಾವಿರ ರೂ. ನೀಡುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಗೃಹಲಕ್ಷ್ಮಿ ಯೋಜನೆಗೆ ಜುಲೈ 19 ರಂದು ಸಂಜೆ ಚಾಲನೆ ದೊರೆತ್ತಿದ್ದು, ಜುಲೈ 20ರಿಂದ ಜಿಲ್ಲೆಯಲ್ಲೂ ನೋಂದಣಿ ಪ್ರಕ್ರಿಯೆ ಪ್ರಾರಂಭವಾಗಲಿದೆ.

ಪಡಿತರ ಚೀಟಿಯಲ್ಲಿ ಕುಟುಂಬದ ಯಜಮಾನಿ ಎಂದು ನಮೂದಿಸಿರುವ ಮಹಿಳೆಗೆ ಮಾತ್ರ ಯೋಜನೆಯು ಅನ್ವಯವಾಗುತ್ತದೆ. ಕುಟುಂಬದ ಯಜಮಾನಿ ಅಥವಾ ಆಕೆಯ ಪತಿ ಆದಾಯ ತೆರಿಗೆ ಪಾವತಿದಾರರಾಗಿದ್ದಲ್ಲಿ ಅಥವಾ ಜಿಎಸ್‌ಟಿ ರಿಟರ್ನ್ಸ್ ಸಲ್ಲಿಸುವರಾಗಿದ್ದಲ್ಲಿ ಯೋಜನೆಗೆ ಅರ್ಹರಾಗುವುದಿಲ್ಲ.

ದಾಖಲೆಗಳು: ಯೋಜನೆಗೆ ನೋಂದಾಯಿಸಲು ಪಡಿತರ ಚೀಟಿಯ ಸಂಖ್ಯೆ, ಯಜಮಾನಿ ಹಾಗೂ ಯಜಮಾನಿ ಪತಿಯ ಆಧಾರ್ ಕಾರ್ಡ್ ಸಂಖ್ಯೆ, ಯಜಮಾನಿ ಆಧಾರ್‌ಗೆ ಜೋಡಣೆಯಾಗಿರುವ ಬ್ಯಾಂಕ್ ಖಾತೆಯ ಪಾಸ್‌ಬುಕ್ ಅಥವಾ ಫಲಾನುಭವಿಯು ಇಚ್ಛಿಸುವ ಪರ್ಯಾಯ ಬ್ಯಾಂಕ್ ಖಾತೆಯ ವಿವರ ನೀಡಬೇಕು.

ಉಚಿತ ನೋಂದಾವಣೆಗೆ ಅವಕಾಶ: ಫಲಾನುಭವಿಗಳು ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಹಾಗೂ ಬಾಪೂಜಿ ಸೇವಾ ಕೇಂದ್ರದ ಮೂಲಕ ಸೇವಾ ಸಿಂಧು ಪೋರ್ಟಲ್‌ನಲ್ಲಿ ಉಚಿತವಾಗಿ ನೋಂದಾಯಿಸಿಕೊಳ್ಳಬಹುದು. ಈ ಕೇಂದ್ರಗಳಲ್ಲದೆ ಪ್ರಜಾಪ್ರತಿನಿಧಿ (Citizen Volunteers) ಮೂಲಕ ಸಹ ಸೇವಾ ಸಿಂಧು ಪೋರ್ಟಲ್‌ನಲ್ಲಿ ಉಚಿತವಾಗಿ ನೋಂದಾಯಿಸಿಕೊಳ್ಳಬಹುದಾಗಿದೆ.

ಫಲಾನುಭವಿಯು ನೋಂದಣಿಗೆ ನಿಗದಿ ಮಾಡಿರುವ ದಿನಾಂಕ, ಸಮಯ ಮತ್ತು ಸ್ಥಳವನ್ನು 1902 ಸಂಖ್ಯೆಗೆ ಕರೆ ಮಾಡಿ ಅಥವಾ 8147500500 ನಂಬರ್‌ಗೆ ಎಸ್.ಎಂ.ಎಸ್. ಮೂಲಕ ಸಂದೇಶ ಕಳುಹಿಸಿಯೂ ಮಾಹಿತಿ ಪಡೆಯಬಹುದಾಗಿದೆ.

ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಸಹಾಯವಾಣಿ ತೆರೆಯಲಾಗಿದೆ. ಜಿಲ್ಲಾ ಸಹಾಯವಾಣಿ ಸಂಖ್ಯೆ 08226–223160 ಆಗಿದೆ. ಚಾಮರಾಜನಗರ ತಾಲೂಕು 08226–200254, ಗುಂಡ್ಲುಪೇಟೆ 08229–222225, ಯಳಂದೂರು 08226–240029, ಕೊಳ್ಳೇಗಾಲ 08224–252042, ಹನೂರು 08224–268032 ಸಹಾಯವಾಣಿ ಸಂಖ್ಯೆಯಾಗಿದೆ.

270 ಸೇವಾ ಕೇಂದ್ರ: ಜಿಲ್ಲೆಯಲ್ಲಿ ನೋಂದಣಿಗಾಗಿ 115 ಗ್ರಾಮ ಒನ್, 130 ಬಾಪೂಜಿ ಸೇವಾ ಕೇಂದ್ರ, 7 ಕರ್ನಾಟಕ ಒನ್, ಸ್ಥಳೀಯ ಸಂಸ್ಥೆಗಳು ಪಟ್ಟಣಗಳಲ್ಲಿ ತೆರೆದಿರುವ 18 ಕೇಂದ್ರಗಳು ಸೇರಿದಂತೆ ಒಟ್ಟು 270 ಸೇವಾ ಕೇಂದ್ರಗಳಿವೆ ಎಂದು ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾಹಿತಿ ನೀಡಿದ್ದಾರೆ.



ಗೃಹಲಕ್ಷ್ಮಿ ಯೋಜನೆಗೆ ಜಿಲ್ಲೆಯಲ್ಲಿ ಗುರುವಾರದಿಂದ ಚಾಲನೆ ದೊರೆಯಲಿದ್ದು, ಇದಕ್ಕಾಗಿ ಎಲ್ಲಾ ಸಿದ್ಧತೆ ಕೈಗೊಳ್ಳಲಾಗಿದೆ. ಜಿಲ್ಲೆಯ ಪ್ರತಿಯೊಬ್ಬ ಅರ್ಹ ಫಲಾನುಭವಿಗೂ ಈ ಯೋಜನೆ ತಲುಪುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಅಧಿವೇಶನ ನಡೆಯುತ್ತಿರುವುದರಿಂದ ಜಿಲ್ಲಾ ಉಸ್ತುವಾರಿ ಸಚಿವರು, ಶಾಸಕರುಗಳು ಗೃಹಲಕ್ಷ್ಮಿ ಯೋಜನೆ ಜಾರಿಗೊಳಿಸುವಂತೆ ತಿಳಿಸಿದ್ದಾರೆ. ಈ ಯೋಜನೆಯ ಚಾಲನಾ ಕಾರ್ಯಕ್ರಮಕ್ಕೆ ಜಿಲ್ಲಾ ಮಟ್ಟದ ಎಲ್ಲಾ ಮಹಿಳಾ ಅಧಿಕಾರಿಗಳನ್ನ ಆಹ್ವಾನಿಸಲಾಗಿದೆ.

-ಸಿ.ಟಿ ಶಿಲ್ಪಾ ನಾಗ್,
ಜಿಲ್ಲಾಧಿಕಾರಿ, ಚಾಮರಾಜನಗರ.

ತಾಲೂಕುವಾರು ಗೃಹಲಕ್ಷ್ಮಿ ಸೇವಾ ಕೇಂದ್ರಗಳು

ಚಾಮರಾಜನಗರ ವ್ಯಾಪ್ತಿಯಲ್ಲಿ 40 ಗ್ರಾಮ ಒನ್, 43 ಬಾಪೂಜಿ ಸೇವಾ ಕೇಂದ್ರ, 2 ಕರ್ನಾಟಕ ಒನ್, ನಗರ ಸ್ಥಳೀಯ ಸಂಸ್ಥೆಗಳು ಪಟ್ಟಣದಲ್ಲಿ ತೆರೆದಿರುವ 6 ಕೇಂದ್ರಗಳು ಸೇರಿ ಒಟ್ಟಾರೆ 91 ಸೇವಾ ಕೇಂದ್ರಗಳಿವೆ.

ಗುಂಡ್ಲುಪೇಟೆ ವ್ಯಾಪ್ತಿಯಲ್ಲಿ 24 ಗ್ರಾಮ ಒನ್, 34 ಬಾಪೂಜಿ ಸೇವಾ ಕೇಂದ್ರ, 2 ಕರ್ನಾಟಕ ಒನ್, ನಗರ ಸ್ಥಳೀಯ ಸಂಸ್ಥೆಗಳು ಪಟ್ಟಣದಲ್ಲಿ ತೆರೆದಿರುವ 3 ಕೇಂದ್ರಗಳು ಸೇರಿ ಒಟ್ಟಾರೆ 63 ಸೇವಾ ಕೇಂದ್ರಗಳಿವೆ. ಕೊಳ್ಳೇಗಾಲ ವ್ಯಾಪ್ತಿಯಲ್ಲಿ 16 ಗ್ರಾಮ ಒನ್, 16 ಬಾಪೂಜಿ ಸೇವಾ ಕೇಂದ್ರ, 2 ಕರ್ನಾಟಕ ಒನ್, ನಗರ ಸ್ಥಳೀಯ ಸಂಸ್ಥೆಗಳು ಪಟ್ಟಣದಲ್ಲಿ ತೆರೆದಿರುವ 5 ಕೇಂದ್ರಗಳು ಸೇರಿ ಒಟ್ಟಾರೆ 39 ಸೇವಾ ಕೇಂದ್ರಗಳಿವೆ.

ಹನೂರು ವ್ಯಾಪ್ತಿಯಲ್ಲಿ 28 ಗ್ರಾಮ ಒನ್, 25 ಬಾಪೂಜಿ ಸೇವಾ ಕೇಂದ್ರ, ನಗರ ಸ್ಥಳೀಯ ಸಂಸ್ಥೆಗಳು ಪಟ್ಟಣದಲ್ಲಿ ತೆರೆದಿರುವ 2 ಕೇಂದ್ರಗಳು ಸೇರಿ ಒಟ್ಟಾರೆ 55 ಸೇವಾ ಕೇಂದ್ರಗಳಿವೆ.

ಯಳಂದೂರು ವ್ಯಾಪ್ತಿಯಲ್ಲಿ 7 ಗ್ರಾಮ ಒನ್, 12 ಬಾಪೂಜಿ ಸೇವಾ ಕೇಂದ್ರ, 1 ಕರ್ನಾಟಕ ಒನ್, ನಗರ ಸ್ಥಳೀಯ ಸಂಸ್ಥೆಗಳು ಪಟ್ಟಣದಲ್ಲಿ ತೆರೆದಿರುವ 2 ಕೇಂದ್ರಗಳು ಸೇರಿ ಒಟ್ಟಾರೆ 22 ಸೇವಾ ಕೇಂದ್ರಗಳಿವೆ.

ಸರ್ಕಾರಿ ನೌಕರರ ಸಂಘದಿಂದ ಡಿಸಿಗೆ ಮನವಿ



ಚಾಮರಾಜನಗರ, ಜು.19– ರಾಜ್ಯ ಸರ್ಕಾರಿ ನೌಕರರ ಸಂಘದ ಕುರಿತು ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಂಘದ ಜಿಲ್ಲಾ ಸಮಿತಿ ವತಿಯಿಂದ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ನಗರದ ಜಿಲ್ಲಾಡಳಿತ ಭವನದಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ತೆರಳಿದ ಸಂಘದ ಪದಾಧಿಕಾರಿಗಳು ಜಿಲ್ಲಾಧಿಕಾರಿ ಸಿ.ಟಿ. ಶಿಲ್ಪನಾಗ್ ಅವರಿಗೆ ಮನವಿ ಸಲ್ಲಿಸಿದರು.


ರಾಜ್ಯ ಸರ್ಕಾರಿ ನೌಕರರ ಸಂಘವು 1920ರಲ್ಲಿ ಸ್ಥಾಪನೆಯಾಗಿದ್ದು, ಸಂಘ ಸಂಸ್ಥೆಗಳ ನೋಂದಣಿ ಕಾಯ್ದೆ ಅನ್ವಯ ನೋಂದಣಿಯಾಗಿ ಸರ್ಕಾರ ಮಾನ್ಯತೆಯನ್ನು ಹೊಂದಿ ಸುಮಾರು 5.25 ಲಕ್ಷ ಸರ್ಕಾರಿ ನೌಕರರನ್ನು ಪ್ರತಿನಿಧಿಸುವ ರಾಷ್ಟ್ರದಲ್ಲಿಯೇ ಮಾದರಿ ಸಂಘಟನೆಯಾಗಿದೆ. ಅಲ್ಲದೇ ಅನೇಕ ಉತ್ತಮ ಕಾರ್ಯಗಳನ್ನು ಮಾಡಿದೆ. ಇಂತಹ ಸಂಘದ ಸಂಘಟನೆಯನ್ನು ದುರ್ಬಲಗೊಳಿಸುವ ದುರುದ್ದೇಶದ ಹುನ್ನಾರ ನಡೆಸಿ ಸತ್ಯಕ್ಕೆ ದೂರವಾದ ಆರೋಪಗಳನ್ನು ಮಾಡಿರುವುದೂ ಅಲ್ಲದೇ, ದೂರಿನ ಪ್ರತಿಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು ಸಂಘಟನೆಯ ಘನತೆಗೆ ಮಸಿ ಬಳಿಯುವ ಕೆಲಸ ಮಾಡಿರುವುದು ತುಂಬಾ ವಿಷಾದನೀಯ ಸಂಗತಿಯಾಗಿದೆ ಎಂದು ಮನವಿಯಲ್ಲಿ ತಿಳಿಸಿದ್ದಾರೆ.

ಸಂಘಟನೆಯ ತೇಜೋವಧೆ ಮಾಡುವ ದುರುದ್ದೇಶದಿಂದ ಆಧಾರರಹಿತ ಆರೋಪಗಳನ್ನು ಮಾಡಿ, ಸರ್ಕಾರಿ ನೌಕರರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ ನಮ್ಮ ಸಂಘಟನೆಯ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಅಪಪ್ರಚಾರ ಮಾಡುತ್ತಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ತಿಳಿಸಿದ್ದಾರೆ.

ಈ ವೇಳೆ ಸಂಘದ ಜಿಲ್ಲಾಧ್ಯಕ್ಷ ಚಂದ್ರಶೇಖರ್, ಕಾರ್ಯದರ್ಶಿ ಮಹದೇವಸ್ವಾಮಿ, ಖಜಾಂಚಿ ಮಹದೇವಯ್ಯ, ಶಿವಮೂರ್ತಿ, ನೇತ್ರಾವತಿ, ವಸಂತ, ಪ್ರಮೀಳಾ, ಪಾರ್ವತಿ ಸೇರಿದಂತೆ ಇತರರು ಇದ್ದರು.

ಹೆಬ್ಬಸೂರು ಬಸವಣ್ಣ ತೆಂಗು ಬೆಳೆಗಾರರ ಸಂಘದ ನಿರ್ದೇಶಕ

ಸಂಘದ ಅಧ್ಯಕ್ಷರಾಗಿದ್ದ ಹೊಮ್ಮದ ಸ್ವಾಮಿಗೆ ಸೋಲು



ಚಾಮರಾಜನಗರ, ಜು.19– ಚಾಮರಾಜನಗರ ತಾಲೂಕು ತೆಂಗು ಬೆಳೆಗಾರರ ಸಂಸ್ಕರಣ ಮತ್ತು ಮಾರಾಟ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಜಿಲ್ಲಾ ರೈತ ಸಂಘದ ಅಧ್ಯಕ್ಷ ಹೆಬ್ಬಸೂರು ಬಸವಣ್ಣ ಇಂದು ಆಯ್ಕೆಯಾದರು.

ಸಂಘದ ಅಧ್ಯಕ್ಷರಾಗಿದ್ದ ಆಲೂರು ಚನ್ನಬಸಪ್ಪ ಅವರು ನಿಧನದಿಂದ ತೆರವಾಗಿದ್ದ ನಿರ್ದೇಶಕ ಸ್ಥಾನಕ್ಕೆ ಇಂದು ಚುನಾವಣೆ ಘೋಷಣೆಯಾಗಿತ್ತು. ನಿರ್ದೇಶಕ ಸ್ಥಾನಕ್ಕೆ ಹೆಬ್ಬಸೂರು ಬಸವಣ್ಣ, ಹಾಗೂ ಹೊಮ್ಮ ಸ್ವಾಮಿ ನಾಮಪತ್ರ ಸಲ್ಲಿಸಿದ್ದರು. ಬಳಿಕ ನಗರದ ಟಿಎಪಿಎಂಎಸ್ ಕಚೇರಿಯಲ್ಲಿ ಇಂದು ಮತದಾನ ನಡೆಯಿತು. ಬಳಿಕ ಮತ ಎಣಿಕೆ ನಡೆದು ಹೆಬ್ಬಸೂರು ಬಸವಣ್ಣ 115 ಮತಗಳನ್ನು ಪಡೆದು ನಿರ್ದೇಶಕರಾಗಿ ಆಯ್ಕೆಯಾದರೆ, ಹೊಮ್ಮದ ಸ್ವಾಮಿ 79 ಮತಗಳನ್ನು ಪಡೆದು, 35 ಮತಗಳ ಅಂತರದಲ್ಲಿ ಸೋಲುಂಡರು. ಚುನಾವಣಾಧಿಕಾರಿಯಾಗಿದ್ದ ಹೇಮಂತಕುಮಾರ್ ಅವರು ಅಧಿಕೃತವಾಗಿ ಬಸವಣ್ಣ ಅವರ ಹೆಸರನ್ನು ಘೋಷಣೆ ಮಾಡಿದರು.

ಎಂಡಿಎನ್ ಪುತ್ಥಳಿಗೆ ಮಾಲಾರ್ಪಣೆ: ನಂತರ ತೆಂಗು ಸಂಸ್ಕರಣಾ ಘಟಕದಲ್ಲಿರುವ ರೈತ ನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿಯವರ ಪುತ್ಥಳಿಗೆ ನೂತನ ನಿರ್ದೇಶಕ ಹೆಬ್ಬಸೂರು ಬಸವಣ್ಣ ಮಾಲಾರ್ಪಣೆ ಮಾಡಿ, ಗೌರವ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಎ.ಎಂ.ಮಹೇಶ್ ಪ್ರಭು, ಹೆಚ್.ಸಿ. ಮಹೇಶ್‌ಕುಮಾರ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿ. ಸಿದ್ದರಾಜು, ಮುಖಂಡರಾದ ಎಚ್.ಎಸ್. ರಮೇಶ, ಹೊಸೂರು ಶಿವಾನಂದ್ ಮಹಾದೇವಸ್ವಾಮಿ, ಮಾದೇವ ಪ್ರಸಾದ್, ನಿರ್ದೇಶಕರಾದ ಸೋಮಶೇಖರ್, ಎಸ್. ಬಸವರಾಜು, ಪಾರ್ವತಮ್ಮ ಜಯಣ್ಣ ಮಾದೇವಸ್ವಾಮಿ ಮಹೇಶ್ ಚಿನ್ನಸ್ವಾಮಿ ಎ.ವಿ. ನಾಗರಾಜಸ್ವಾಮಿ, ಎ.ಎಲ್, ಸಂತೋಷ್ ಹೊನ್ನೇಗೌಡಹುಂಡಿ ಸಿದ್ದರಾಜು, ಸುಂದರಮೂರ್ತಿ ಲಕ್ಷ್ಮಣ, ರಾಜೇಶ್, ನಾಗೇಂದ್ರ ಸ್ವಾಮಿ ಅನೇಕರು ಇದ್ದರು.

ಮಾಂಸಾಹಾರ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥ ಪ್ರಕರಣ

ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾಂಶುಪಾಲ ಕುಮಾರಸ್ವಾಮಿ ಅಮಾನತು

ಗುಂಡ್ಲುಪೇಟೆ, ಜು. 19– ಚಿಕನ್ ಊಟ ಸೇವಿಸಿ ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಪ್ರಕರಣಕ್ಕೆ ಸಂಬಂಧಿಸಿದಂತೆ ಗುಂಡ್ಲುಪೇಟೆ ತಾಲೂಕು ಯಡವನಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಪ್ರಾಂಶುಪಾಲ ಎಂ. ಕುಮಾರಸ್ವಾಮಿ ಅವರನ್ನು ಅಮಾನತುಪಡಿಸಿ, ಕರ್ನಾಟಕ ವಸತಿಶಿಕ್ಷಣ ಸಂಸ್ಥೆಗಳ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಎಸ್. ನವೀನ್ ಕುಮಾರ್ ರಾಜು ಅವರು ಆದೇಶ ಹೊರಡಿಸಿದ್ದಾರೆ.

ಮೊರಾರ್ಜಿ ದೇಸಾಯಿ ಶಾಲೆಯಲ್ಲಿ ಜುಲೈ 7ರಂದು ಚಿಕನ್ ಊಟ ಸೇವಿಸಿದ್ದ 24 ವಿದ್ಯಾರ್ಥಿಗಳಲ್ಲಿ ವಾಂತಿ, ಭೇದಿ ಕಾಣಿಸಿಕೊಂಡು ಅಸ್ವಸ್ಥಗೊಂಡಿದ್ದರು. ಅವರನ್ನು ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ರವಾನಿಸಿ ಚಿಕಿತ್ಸೆ ಕೊಡಿಸಲಾಗಿತ್ತು. ಈ ವೇಳೆ ಸಮಾಜ ಕಲ್ಯಾಣ ಇಲಾಖೆಯ ಚಾಮರಾಜನಗರ ಜಿಲ್ಲಾ ಉಪ ನಿರ್ದೇಶಕರು ವಸತಿ ಶಾಲೆಗೆ ಭೇಟಿ ನೀಡಿ, ವರದಿ ಸಲ್ಲಿಸಿದ್ದರು. ಅಲ್ಲದೇ ಬೇಗೂರು ಪ್ರಾಥಮಿಕ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿಗಳು ಕೂಡ ವರದಿ ನೀಡಿದ್ದರು.

ಪ್ರಾಂಶುಪಾಲ ಕುಮಾರಸ್ವಾಮಿ ಕಳೆದ ಒಂದು ವಾರದಿಂದ ನಿಲಯಪಾಲಕರ ಪ್ರಭಾರವನ್ನು ಬೇರೆ ಯಾರಿಗೂ ವಹಿಸದೆ ತಾವೇ ನಿರ್ವಹಣೆ ಮಾಡುತ್ತಿದ್ದರು. ಜುಲೈ 17ರಂದು ವಿದ್ಯಾರ್ಥಿಗಳು ಅಸ್ವಸ್ಥಗೊಂಡ ವಿಚಾರವನ್ನು ತಮ್ಮ ಮೇಲಧಿಕಾರಿಗಳಿಗಾಗಲೀ ವಿದ್ಯಾರ್ಥಿಗಳ ಪೋಷಕರಿಗಾಗಲೀ ತಿಳಿಸಿರುವುದಿಲ್ಲ. ಈ ಹಿಂದೆ ಲೋಕಾಯುಕ್ತ ಡಿವೈಎಸ್ಪಿಯವರು ವಸತಿ ಶಾಲೆಗೆ ಭೇಟಿ ನೀಡಿ, ಸ್ವಚ್ಛತೆ ಮತ್ತು ಆಹಾರ ನಿರ್ವಹಣೆ ಬಗ್ಗೆ ಎಚ್ಚರಿಕೆ ನೀಡಿದ್ದರೂ ಪ್ರಾಂಶುಪಾಲರು ಎಚ್ಚೆತ್ತುಕೊಂಡಿಲ್ಲ. ಅಡುಗೆ ಸಿಬ್ಬಂದಿಗೆ ಸೂಕ್ತ ರೀತಿಯ ಆಹಾರ ನಿರ್ವಹಣೆ ಮತ್ತು ಸ್ವಚ್ಛತೆ ಬಗ್ಗೆ ತಿಳುವಳಿಕೆ ನೀಡಿರುವುದಿಲ್ಲ. ಶೌಚಾಲಯ ಮತ್ತು ಸ್ನಾನಗೃಹಗಳು, ಅಶುಚಿತ್ವದಿಂದ ಕೂಡಿರುತ್ತವೆ. ಅಡುಗೆ ಸಿಬ್ಬಂದಿ ನಡುವೆ ಹೊಂದಾಣಿಕೆ ಇರುವುದಿಲ್ಲ ಎಂದು ವರದಿಗಳಲ್ಲಿ ತಿಳಿಸಲಾಗಿತ್ತು.

ಈ ವರದಿಗಳನ್ನಾಧರಿಸಿ ಪ್ರಾಂಶುಪಾಲ ಕುಮಾರಸ್ವಾಮಿಯವರನ್ನು ಇಲಾಖಾ ವಿಚಾರಣೆ ಕಾಯ್ದಿರಿಸಿ, ಅಮಾನತುಪಡಿಸಲಾಗಿದ್ದು, ಪ್ರಾಂಶುಪಾಲರ ಹೆಚ್ಚುವರಿ ಪ್ರಭಾರವನ್ನು ತಾತ್ಕಾಲಿಕವಾಗಿ ವಸತಿ ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಂಪ್ಯೂಟರ್ ಶಿಕ್ಷಕರಿಗೆ ವಹಿಸಬೇಕೆಂದು ಆದೇಶದಲ್ಲಿ ಹೇಳಲಾಗಿದೆ.

ಕೊಳ್ಳೇಗಾಲ: ಪಾಲಿಟೆಕ್ನಿಕ್ ಪ್ರವೇಶಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.19– ಕೊಳ್ಳೇಗಾಲದ ಚಿಲಕವಾಡಿ ಬೆಟ್ಟದ ಸರ್ಕಾರಿ ಪಾಲಿಟೆಕ್ನಿಕ್ ನಲ್ಲಿ 2023–24 ನೇ ಸಾಲಿಗೆ ಪ್ರಥಮ ವರ್ಷದ ಡಿಪ್ಲೋಮಾ ಪ್ರವೇಶಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ. ಪಾಲಿಟೆಕ್ನಿಕ್‌ನಲ್ಲಿ ಎಲೆಕ್ಟ್ರಾನಿಕ್ ಮತ್ತು ಕಮ್ಯುನಿಕೇಶನ್ ಕೋರ್ಸ್ ಇದ್ದು ಒಟ್ಟು 63 ಸೀಟುಗಳಲ್ಲಿ 13 ಸೀಟುಗಳು ಲಭ್ಯವಿದೆ. ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಹಾಗೂ ಪಿಯುಸಿ ಅನುತ್ತೀರ್ಣರಾದ ವಿದ್ಯಾರ್ಥಿಗಳು ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗಾಗಿ ಮೊ.ಸಂ 9972014274, 9663626047 ಹಾಗೂ 9739744688 ಸಂಪರ್ಕಿಸುವಂತೆ ಪ್ರಾಂಶುಪಾಲರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರಾಮುವಿವಿ: ಪ್ರವೇಶಾತಿಗೆ ಅರ್ಜಿ ಆಹ್ವಾನ

ಚಾಮರಾಜನಗರ, ಜು.19– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯವು 2023–24ನೇ ಸಾಲಿನ ಜುಲೈ ಹಾಗೂ ಜನವರಿ ಆವೃತ್ತಿಯ ಪ್ರಥಮ ಬಿಎ, ಬಿಕಾಂ, ಬಿಬಿಎ, ಬಿಸಿಎ, ಬಿಎಸ್ಸಿ, ಬಿಎಸ್‌ಡಬ್ಲ್ಯೂ, ಎಂಎ, ಎಂಕಾಂ, ಎಂ.ಎಸ್.ಡಬ್ಲ್ಯೂ, ಬಿಎಲ್ಐಎಸ್ಸಿ, ಎಂಎಲ್‌ಐಎಸ್ಸಿ, ಎಂಎಸ್ಸಿ, ಎಂಬಿಎ, ಎಂಬಿಎ, ಎಂಸಿಎ, ಪಿಜಿ ಡಿಪ್ಲೊಮಾ, ಡಿಪ್ಲೊಮಾ ಹಾಗೂ ಸರ್ಟಿಫಿಕೇಟ್ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಅರ್ಹ ಅಭ್ಯರ್ಥಿಗಳು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಚಾಮರಾಜನಗರ ಪ್ರಾದೇಶಿಕ ಕೇಂದ್ರದಲ್ಲಿ ಪ್ರವೇಶಾತಿ ಪಡೆಯಬಹುದು. ಬಿಪಿಎಲ್ ಕಾರ್ಡ್ ಹೊಂದಿರುವ ವಿದ್ಯಾರ್ಥಿಗಳಿಗೆ ಬೋಧನಾ ಶುಲ್ಕದಲ್ಲಿ ಶೇ.15ರಷ್ಟು, ಆಟೋ, ಕ್ಯಾಬ್ ಚಾಲಕರ ಮಕ್ಕಳಿಗೆ ಬೋಧನಾ ಶುಲ್ಕದಲ್ಲಿ ಶೇ.30ರಷ್ಟು ವಿನಾಯಿತಿ ನೀಡಲಾಗುವುದು. ಕೋವಿಡ್‌ನಿಂದ ನಿಧನ ಹೊಂದಿರುವ ಪೋಷಕರ ಮಕ್ಕಳಿಗೆ ಉಚಿತ ಪ್ರವೇಶಾತಿಗೆ ಅವಕಾಶ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ: 9986564913, 7411136301, 8453114419, 7760200885, 97407–01186, 6363056805, 9632346618 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಕೆ.ಎಂ. ಬಾಲನ್ ನಿಧನ



ಗುಂಡ್ಲುಪೇಟೆ, ಜು.19– ಗುಂಡ್ಲುಪೇಟೆ ಪಟ್ಟಣದ 1ನೇ ವಾರ್ಡ್ ನಿವಾಸಿ ಕೆ.ಎಂ. ಬಾಲನ್ (72) ಅವರು ಮಂಗಳವಾರ ರಾತ್ರಿ ನಿಧನರಾದರು.

ಅವರು ಪತ್ನಿ ಆರ್. ಕಮಲಾಕ್ಷಿ, ಮಕ್ಕಳಾದ ಪ್ರಶಾಂತ್, ವಿನೋದ್, ಪ್ರಿಯಾ ಬಾಲನ್ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಇಂದು ಬೆಳಗ್ಗೆ ಗುಂಡ್ಲುಪೇಟೆ ಪಟ್ಟಣದ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಮಿತ್ರ

ಗುರುವಾರ 20 ಜುಲೈ 2023

ಐವರು ಶಂಕಿತ ಉಗ್ರರು 7 ದಿನ ಸಿಸಿಬಿ ಕಸ್ಟಡಿಗೆ

ಬೆಂಗಳೂರು, ಜು.19– ಬೆಂಗಳೂರಿನಲ್ಲಿ ಬಂಧಿಸಲಾಗಿದ್ದ ಐವರು ಶಂಕಿತ ಉಗ್ರರನ್ನು 7 ದಿನಗಳ ಕಾಲ ಸಿಸಿಬಿ ಪೊಲೀಸರ ಕಸ್ಟಡಿಗೆ ನೀಡಲಾಗಿದೆ.

ಬಂಧಿತ ಸಯ್ಯದ್ ಸುಹೇಲ್, ಉಮರ್, ಜುನೇದ್ ಮುದಾಶೀರ್, ಜಾಹಿದ್‌ನನ್ನು ಇಂದು ಸಿಸಿಬಿ ಕೋರ್ಟ್‌ಗೆ ಹಾಜರುಪಡಿಸಿದ್ದು 15 ದಿನಗಳ ಕಸ್ಟಡಿಗೆ ನೀಡುವಂತೆ ಮನವಿ ಮಾಡಿತ್ತು. ಆದರೆ ನ್ಯಾಯಾಲಯ 7 ದಿನಗಳ ಕಾಲ ಕಸ್ಟಡಿಗೆ ನೀಡಿದೆ.

ಬಂಧಿತ ಶಂಕಿತ ಉಗ್ರರು ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ ಭಾರಿ ವಿಧ್ವಂಸಕ ಕೃತ್ಯಕ್ಕೆ ಸಂಚು ರೂಪಿಸಿದ್ದರು ಎಂದು ತಿಳಿದುಬಂದಿದೆ. 2017ರ ಅಕ್ಟೋಬರ್‌ನಲ್ಲಿ ಬೆಂಗಳೂರಿನ ಆರ್.ಟಿ.ನಗರದಲ್ಲಿ ನಡೆದಿದ್ದ ಮೂವರ ಕಿಡ್ನ್ಯಾಪ್, ಓರ್ವನ ಹತ್ಯೆ ಪ್ರಕರಣದಲ್ಲಿ ಜೈಲುಪಾಲಾಗಿದ್ದ ಹಲವು ಆರೋಪಿಗಳು, ಪರಪ್ಪನ ಅಗ್ರಹಾರ ಜೈಲಿನಿಂದ ಉಗ್ರರ ಜೊತೆಗೆ ಸಂಪರ್ಕ ಹೊಂದಿದ್ದರು ಎನ್ನಲಾಗಿದ್ದು, ಈ ಬಗ್ಗೆ ಐವರು ಶಂಕಿತ ಉಗ್ರರನ್ನು ಸಿಸಿಬಿ ಪೊಲೀಸರು ಬಂಧಿಸಿ ವಿಚಾರಣೆಗೊಳಪಡಿಸಿದ್ದಾರೆ.

ಸಿಸಿಬಿಯು ನಗರದ ವಿವಿಧ ಪ್ರದೇಶಗಳಿಂದ ಐವರು ಶಂಕಿತ ಭಯೋತ್ಪಾದಕರನ್ನು ಬಂಧಿಸಿ ಅವರಿಂದ ಅನೇಕ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡಿದೆ.

ಸಿಸಿಬಿ ಪೊಲೀಸರ ಕಾರ್ಯಕ್ಕೆ ಗೃಹ ಸಚಿವ, ಸಿಎಂ ಶ್ಲಾಘನೆ

ಬೆಂಗಳೂರು, ಜು.19– ಬೆಂಗಳೂರಿನಲ್ಲಿ ಶಂಕಿತ ಉಗ್ರರ ಬಂಧನ ವಿಚಾರವಾಗಿ ಸಿಸಿಬಿ ಪೊಲೀಸರ ಕಾರ್ಯಕ್ಕೆ ಗೃಹ ಸಚಿವ ಡಾ.ಜಿ ಪರಮೇಶ್ವರ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಉಗ್ರ ಬಂಧನ ಹಾಗೂ ಕಾರ್ಯಾಚರಣೆ ಕುರಿತು ವಿಧಾನಸಭೆಯಲ್ಲಿ ಮಾತನಾಡಿದ ಸಚಿವರು, ಐವರು ಆರೋಪಿಗಳನ್ನು ಬಂಧನಕ್ಕೊಳಪಡಿಸಲಾಗಿದೆ. ಬಂಧಿತರು ಈ ಹಿಂದೆ ಹಲವು ಅಪರಾಧ ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ನಂತರ ಜಾಮೀನು ಮೇಲೆ ಹೊರಗೆ ಬಂದಿದ್ದರು. ನಂತರ ದೇಶದ್ರೋಹಿ ಸಂಘಟನೆಗಳ ಸಂಪರ್ಕಕ್ಕೆ ಬಂದಿದ್ದಾರೆಂದು ಹೇಳಿದರು. ಬಂಧಿತರು ಕರ್ನಾಟಕ ಹಾಗೂ ಇತರೆಡೆಗಳಲ್ಲಿ ಉಗ್ರ ಚಟುವಟಿಕೆಗಳನ್ನು ಕೈಗೊಳ್ಳಲು ಮುಂದಾಗಿದ್ದರು. ಶಂಕಿತರ ಸಂಭವನೀಯ ಉಗ್ರ ಚಟುವಟಿಕೆಗಳನ್ನು ಸಿಸಿಬಿ ಪೊಲೀಸರು ತಡೆದು ಬಂಧಿಸಿದ್ದಾರೆ. ಈ ಶಂಕಿತರು ಯಾವ ಉಗ್ರ ಚಟುವಟಿಕೆಗೆ ಉದ್ದೇಶಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಬೇಕಿದೆ ಎಂದು ತಿಳಿಸಿದರು.

ಈ ನಡುವೆ ಸಾಮಾಜಿಕ ಜಾಲತಾಣ ಟ್ವಿಟರ್ ನಲ್ಲಿ ಟ್ವೀಟ್ ಮಾಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಬೆಂಗಳೂರಿನಲ್ಲಿ ವಿಧ್ವಂಸಕ ಕೃತ್ಯವೆಸಗಲು ಸಂಚು ರೂಪಿಸಿದ್ದ ಐವರು ಶಂಕಿತ ಉಗ್ರರನ್ನು ಬಂಧಿಸುವ ಮೂಲಕ ಸಂಭವಿಸಬಹುದಾಗಿದ್ದ ಭಾರೀ ಅನಾಹುತವನ್ನು ವಿಫಲಗೊಳಿಸಿರುವ ರಾಜ್ಯದ ಸಿಸಿಬಿ ಪೊಲೀಸರಿಗೆ ಅಭಿನಂದನೆಗಳು ಎಂದು ಹೇಳಿದ್ದಾರೆ. ಭಯೋತ್ಪಾದಕ ಚಟುವಟಿಕೆಗಳು ಸೇರಿದಂತೆ ಯಾವುದೇ ತೆರನಾದ ದೇಶವಿರೋಧಿ ಚಟುವಟಿಗಳಲ್ಲಿ ತೊಡಗಿರುವವರನ್ನು ಪತ್ತೆಹಚ್ಚಿ, ಬೇರು ಸಮೇತ ಅಂತಹ ಶಕ್ತಿಗಳನ್ನು ರಾಜ್ಯದಿಂದ ಕಿತ್ತೊಗೆಯಲು ನಾವು ಸದಾ ಸಿದ್ಧರಿದ್ದೇವೆ. ನಾಡಿನ ಪ್ರತಿಯೊಬ್ಬರೂ ಸುರಕ್ಷತೆಯ ಬದುಕು ನೀಡಲು ನಮ್ಮ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ಉಗ್ರರ ಸುರಕ್ಷಿತ ತಾಣವಾಗುತ್ತಿದೆ

ಬೆಂಗಳೂರು, ಜು.19– ರಾಜ್ಯ ರಾಜಧಾನಿ ಬೆಂಗಳೂರು ಉಗ್ರರ ಸುರಕ್ಷಿತ ತಾಣವಾಗಿ



ಪರಿವರ್ತನೆಯಾಗುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಎರಡು ತಿಂಗಳಿಂದ ಬೆಂಗಳೂರಿನ ಕ್ರೈಮ್ ಹೆಚ್ಚಾಗುತ್ತಿದೆ. ಬೆಂಗಳೂರಿನ ಕಾನೂನು ಸುವ್ಯವಸ್ಥೆ ಅಪರಾಧ ನಿಯಂತ್ರಣ ಕೈ ತಪ್ಪುತ್ತಿದೆ. ದಿನನಿತ್ಯ ಕೊಲೆ ಸುಲಿಗೆ ಸಾಮಾನ್ಯವಾಗುತ್ತಿದೆ ಎಂದು ಹೇಳಿದರು.

ಬಹಳಷ್ಟು ಕೇಸ್‌ಗಳು ಪೊಲೀಸ್ ಠಾಣೆಗಳಲ್ಲಿ ರಿಜಿಸ್ಟರ್ ಆಗುತ್ತಿಲ್ಲ. ಕಾನೂನು ಸುವ್ಯವಸ್ಥೆ, ಅಪರಾಧ ನಿಯಂತ್ರಣ ಮಾಡುವುದು ಪೊಲೀಸರ ಕೆಲಸ. ಈ ಸರ್ಕಾರ ಬಂದಮೇಲೆ ಮಧ್ಯವರ್ತಿಗಳು ಕೈ ಹಾಕಿ ನಿಯಂತ್ರಣ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಸರ್ಕಾರ ಅವಕಾಶ ಕೊಡಬಾರದು. ಬೆಂಗಳೂರಿನಲ್ಲಿ ಕ್ಲಬ್ ಚಟುವಟಿಕೆಗಳು ಹೆಚ್ಚಾಗಿದೆ, ಹಫ್ತಾ ವಸೂಲಿ ತೀವ್ರವಾಗುತ್ತಿದೆ ಎಂದು ಆರೋಪಿಸಿದರು.

ಒಂದನೇ ಪುಟದಿಂದ

ಐವರು ಶಂಕಿತ ಉಗ್ರರ ಬಂಧನ

ಫೈಸಲ್ ರಬ್ಬಾನಿ, ಉಮರ್, ಸುಹೇಲ್ ಸೇರಿದಂತೆ ಐವರನ್ನು ಬಂಧಿ ಸುವ ಮೂಲಕ ರಾಜಧಾನಿಯ 10 ಕಡೆ ನಡೆಯಬಹುದಾಗಿದ್ದ ವಿಧ್ವಂಸಕ ಕೃತ್ಯವನ್ನು ತಡೆಯುವಲ್ಲಿ ಯಶಸ್ವಿಯಾಗಿದ್ದಾರೆ. ಬಂಧಿತ ರಿಂದ ಕೃತ್ಯಕ್ಕೆ ಬಳಸಲು ತಂದಿದ್ದ ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಸಿಸಿಬಿ ಪೊಲೀಸರ ಕಾರ್ಯಾಚರಣೆಯನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ವಿಧನ ಸಭೆಯಲ್ಲಿಂದು ಶ್ಲಾಘಿಸಿ, ಉಗ್ರರ ಬಂಧ ನಕ್ಕೆ ಸಂಬಂಧಿಸಿದ ಮಾಹಿತಿಯನ್ನು ನೀಡಿ ದರು. ಈ ಮಧ್ಯೆ ಮುಖ್ಯಮಂತ್ರಿ ಸಿದ್ದ ರಾಮಯ್ಯ ಟ್ವೀಟ್ ಮಾಡಿ, ರಾಜ್ಯದಲ್ಲಿ ಸಂಭವಿಸಬಹುದಾಗಿದ್ದ ಭಾರೀ ಅನಾಹುತ ವನ್ನು ವಿಫಲಗೊಳಿಸಿರುವ ಸಿಸಿಬಿ ಪೊಲೀಸ ರಿಗೆ ಅಭಿನಂದನೆ ಸಲ್ಲಿಸಿದ್ದಾರೆ. ಉಗ್ರರಿಂದ 40 ಸಜೀವ ಗುಂಡುಗಳು, ಎರಡು ಡ್ರ್ಯಾಗರ್, ರಿವಾಲ್ವರ್, ಮೊಬೈಲ್ ಹಾಗೂ ಹಲವು ಸ್ಫೋಟಕ ವಸ್ತುಗಳನ್ನು ವಶಪಡಿಸಿಕೊಳ್ಳ ಲಾಗಿದೆ. ಬಂಧಿತರಿಗೆ ತರಬೇತಿ ನೀಡಿದ್ದ ಜುನೈದ್ ತಲೆಮರೆಸಿಕೊಂಡಿದ್ದಾನೆ, ಈ ಹಿಂದೆ ಆರ್‌ಟಿ ನಗರದಲ್ಲಿ ನಡೆದಿದ್ದ ಕೊಲೆ ಪ್ರಕರಣದಲ್ಲಿ 21 ಮಂದಿ ಜೈಲು ಸೇರಿದ್ದರು. ಅದರಲ್ಲಿ ಬಂಧಿತ ಐವರು ಪರಪ್ಪನ ಅಗ್ರಹಾರ ಜೈಲಿನಲ್ಲಿ ಶಂಕಿತ ಉಗ್ರರ ಸಂಪರ್ಕ ಬೆಳೆಸಿ, ಸ್ಫೋಟಕ್ಕೆ ಸಂಚು ರೂಪಿಸಿದ್ದರು.

ಇವರು ಕೃತ್ಯ ನಡೆಸಲು ವಿದೇಶದಿಂದ ಹಣ ಸಂಗ್ರಹಿಸುತ್ತಿದ್ದರು, ಆನ್‌ಲೈನ್ ಹಾಗೂ ನಗದು ರೂಪದಲ್ಲಿ ಇವರುಗಳಿಗೆ ಹಣ ಪೂರೈಕೆಯಾಗಿದೆ. ಜಮಾತ್–ಇ–ಇಸ್ಲಾಮಿ ಸಂಘಟನೆ ಆಶ್ರಯದಲ್ಲಿ ತರಬೇತಿ ಪಡೆ ಯಲು ಶಂಕಿತರು ನಗರದ ಸುಲ್ತಾನ್ ಪಾಳ್ಯದಲ್ಲಿ ಎಲ್ಲಾ ರೀತಿಯ ತಯಾರಿ ನಡೆಸಿದ್ದರು. ಇಲ್ಲಿನ ಮಸೀದಿ ಒಂದರ ಪಕ್ಕದಲ್ಲಿಯೇ ವಾಸವಿದ್ದು ಕೃತ್ಯ ನಡೆಸುವ ಬಗ್ಗೆ ಯೋಜನೆ ರೂಪಿಸುತ್ತಿದ್ದರು. ಆರೋಪಿಗಳು ಕೊಲೆ, ದರೋಡೆ ಇನ್ನಿತರ ಅಪರಾಧ ಎಸಗಿದ ಆರೋಪ ಎದು ರಿಸುತ್ತಿದ್ದಾರೆ. ಇವರು ಜೈಲಿನಲ್ಲಿದ್ದ ಇತರ ಭಯೋತ್ಪಾದನಾ ಆರೋಪಿಗಳೊಂದಿಗೆ ಸಂಪರ್ಕದಲ್ಲಿದ್ದರು. ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ ಲಷ್ಕರ್–ಎ–ತೊಯಿಬಾ ಜೊತೆ ನಜೀರ್ ಸಂಪರ್ಕ ಹೊಂದಿದ್ದಾನೆಂದು ನಗರದ ಪೊಲೀಸ್ ಆಯುಕ್ತ ದಯಾನಂದ್ ಮಾಹಿತಿ ನೀಡಿದ್ದಾರೆ. ನಗರದ 10 ಕಡೆ ವಿಧ್ವಂಸಕ ಕೃತ್ಯ ನಡೆಸಲು ಇವರು ಸಂಚು ನಡೆಸಿದ್ದರು ಎನ್ನಲಾಗಿದೆ. ಮಡಿವಾಳದಲ್ಲಿನ ಪೊಲೀಸ್ ಇಲಾಖೆಯ ತಾಂತ್ರಿಕ ವಿಭಾಗದಲ್ಲಿ ಉಗ್ರರ ವಿಚಾರಣೆ ನಡೆಯುತ್ತಿದ್ದು ಅವರ ಮೊಬೈಲ್ ಫೋನ್‌ಗಳ ಪರಿಶೀಲನೆ ಮಾಡುತ್ತಿದ್ದಾರೆ. 2008ರ ಸರಣಿ ಬಾಂಬ್ ಸ್ಫೋಟ ಪ್ರಕರಣ ರೂವಾರಿ ಟಿ. ನಜೀರ್ ಮತ್ತು 2017ರ ಪ್ರಕರಣದ ಮುಖ್ಯ ಆರೋಪಿ ಜುನೈದ್ ಇವರಿಗೆ ತರಬೇತಿ ನೀಡಿದ್ದಾರೆ. ಸದ್ಯ ನಜೀರ್ ಕಾರಾಗೃಹದಲ್ಲಿದ್ದು, ಇನ್ನೊಬ್ಬ ಆರೋಪಿ ಜುನೈದ್ ವಿದೇಶಕ್ಕೆ ಪರಾರಿಯಾಗಿದ್ದಾನೆ.

ವಿಧ್ವಂಸಕ ಕೃತ್ಯ ಎಸಗಲು ಶಂಕಿತರು ಏನೆಲ್ಲಾ ಯೋಜನೆ ರೂಪಿಸಿದ್ದರು ಎಂಬ ಬಗ್ಗೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ, ಬಂಧಿತರನ್ನು 15 ದಿನಗಳ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಉಗ್ರರಲ್ಲಿ ನಾಲ್ವರು ರೌಡಿಶೀಟರ್‌ಗಳಾಗಿದ್ದು, ಇವರು ಉಗ್ರರ ಜೊತೆ ಸಂಪರ್ಕ ಬೆಳೆಸಿ ದುಷ್ಕೃತ್ಯ ಎಸಗಲು ತರಬೇತಿ ಪಡೆದಿದ್ದರು. ಜೈಲಿನಿಂದ ಹೊರ ಬಂದ ನಂತರ ಕೃತ್ಯಕ್ಕೆ ಯೋಜನೆ ರೂಪಿಸಿ, ಬಾಂಬ್ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳನ್ನೆಲ್ಲ ಸಿದ್ಧಪಡಿಸಿದ್ದರು. ಈ ಆರೋಪಿಗಳ ಜೊತೆ ಮತ್ತಷ್ಟು ಮಂದಿ ಇರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಸಿಎಂ ಸಿದ್ದರಾಮಯ್ಯ ಚಾಲನೆ

ಮೇಲಿರುವ ಮತ್ತು ಅಂತ್ಯೋದಯ ಕಾರ್ಡ್‌ಗಳಲ್ಲಿ ಮನೆ ಮುಖ್ಯಸ್ಥರಾಗಿ ಹೆಸರನ್ನು ನಮೂದಿಸಿರುವ ಮಹಿಳೆಯರು ಯೋಜನೆಗೆ ಅರ್ಹರಾಗಿರುತ್ತಾರೆ. ಆದಾಯ ತೆರಿಗೆ ಪಾವತಿಸುವ ಮಹಿಳೆಯರು ಮತ್ತು ಪತಿಯು ಆದಾಯ ತೆರಿಗೆ ಪಾವತಿಸುತ್ತಿದ್ದರೆ ಅಂಥವರ ಪತ್ನಿಯರು ಯೋಜನೆಗೆ ಅರ್ಹರಲ್ಲ. ಯೋಜನೆಯ ಪ್ರಯೋಜನಗಳನ್ನು ಪಡೆಯಲು ಬಯಸುವ ಮಹಿಳೆಯರು ಗ್ರಾಮ ಒನ್, ಕರ್ನಾಟಕ ಒನ್ ಮತ್ತು ಬೆಂಗಳೂರು ಒನ್ ಕೇಂದ್ರಗಳಲ್ಲಿ ಅರ್ಜಿಗಳನ್ನು ಸಲ್ಲಿಸಬೇಕು. ಯೋಜನೆಯ ಪ್ರಯೋಜನಗಳನ್ನು ಪಡೆಯಲು ಫಲಾನುಭವಿ ಮತ್ತು ಪತಿಯ ಆಧಾರ್ ಕಾರ್ಡ್‌ಗಳು ಮತ್ತು ಬಿಪಿಎಲ್, ಎಪಿಎಲ್ ಮತ್ತು ಅಂತ್ಯೋದಯ ಕಾರ್ಡ್‌ಗಳನ್ನು ಸಲ್ಲಿಸಬೇಕಾಗುತ್ತದೆ. ವಿಧಾನಸಭೆ ಚುನಾವಣೆ ವೇಳೆ ಕಾಂಗ್ರೆಸ್ ನೀಡಿದ ಐದು ಚುನಾವಣಾ ಗ್ಯಾರಂಟಿಗಳಲ್ಲಿ ಗೃಹಲಕ್ಷ್ಮಿ ಯೋಜನೆಯೂ ಒಂದಾಗಿದೆ.

ಫುಟ್‌ಪಾತ್ ಒತ್ತುವರಿ ತೆರವು ಆರಂಭ

ಫುಟ್‌ಪಾತ್‌ನ ಎರಡೂ ಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದರಿಂದ ಸಾರ್ವಜನಿಕರು ಓಡಾಡಲು ಸ್ಥಳಾವಕಾಶವಿಲ್ಲದ ಕಾರಣ ಅವರು ಅನಿವಾರ್ಯವಾಗಿ ರಸ್ತೆಗಿಳಿಯ ಬೇಕಾಗಿತ್ತು. ಅದರಿಂದಾಗಿ ಉಂಟಾಗುತ್ತಿದ್ದ ಸಮಸ್ಯೆಯನ್ನು ಪಾದಚಾರಿಗಳು, ಪಾಲಿಕೆ ಅಧಿಕಾರಿಗಳ ಗಮನಕ್ಕೆ ತರುತ್ತಲೇ ಬಂದಿದ್ದರು. ಮೂರು ಅಭಯ ವಾಹನ, ಟ್ರ್ಯಾಕ್ಟರ್‌ಗಳಲ್ಲಿ ತೆರವುಗೊಳಿಸಿದ ಅನುಪಯುಕ್ತ ವಸ್ತುಗಳನ್ನು ಬೇರೆಡೆಗೆ ಸಾಗಿಸಲಾಯಿತು. ಕಾರ್ಯಾಚರಣೆಗೆ ಮುಂದಾಗುತ್ತಿದ್ದಂತೆಯೇ ವ್ಯಾಪಾರಿಗಳು ತಾವೇ ತಮ್ಮ ವಸ್ತುಗಳನ್ನು ತೆರವುಗೊಳಿಸಿದರೆ, ಕೆಲವರು ಅಧಿಕಾರಿಗಳನ್ನು ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದರು. ಇಂಜಿನಿಯರಿಂಗ್ ವಿಭಾಗ, ಪರಿಸರ ಇಂಜಿನಿಯರ್‌ಗಳು, ಆರೋಗ್ಯ ಶಾಖೆ ಅಧಿಕಾರಿಗಳು, ವಲಯ ಕಚೇರಿ ಅಭಿವೃದ್ಧಿ ಅಧಿಕಾರಿಗಳು ಫುಟ್‌ಪಾತ್ ಒತ್ತುವರಿ ತೆರವು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ದೇವರಾಜ ಮತ್ತು ಲಷ್ಕರ್ ಠಾಣೆ ಇನ್‌ಸ್ಪೆಕ್ಟರ್‌ಗಳ ನೇತೃತ್ವದಲ್ಲಿ ಕಾರ್ಯಾಚರಣೆಗೆ ಸಿಬ್ಬಂದಿಗಳನ್ನು ನಿಯೋಜಿಸಿ ಪೊಲೀಸ್ ಬಂದೋಬಸ್ತ್ ಮಾಡಲಾಗಿತ್ತು. ಡಿ. ದೇವರಾಜ ಅರಸು ರಸ್ತೆ, ಜೆಎಲ್‌ಬಿ ರಸ್ತೆ, ಅರಮನೆ ಸುತ್ತಲಿನ ರಸ್ತೆ, ಬಿ.ಎನ್. ರಸ್ತೆ, ಇರ್ವಿನ್ ರಸ್ತೆ, ಧನ್ವಂತರಿ ರಸ್ತೆ, ಶಿವರಾಂಪೇಟೆ ರಸ್ತೆ, ಸಂತೇಪೇಟೆ, ಮಂಡಿ ಮೊಹಲ್ಲಾ, ಲಷ್ಕರ್ ಮತ್ತು ದೇವರಾಜ ಮೊಹಲ್ಲಾ ಸೇರಿದಂತೆ ಪ್ರಮುಖ ವಾಣಿಜ್ಯ ಮಾರ್ಗಗಳಲ್ಲಿ ಪಾಲಿಕೆ ಅಧಿಕಾರಿಗಳು ತೆರವು ಕಾರ್ಯಾಚರಣೆ ನಡೆಸುವರು.

ಮೈಸೂರಿನ ಕಾರಂಜಿ ಕೆರೆ ಬಂಡ್ ರಸ್ತೆಯಲ್ಲಿ ಮತ್ತೆ ಅಡ್ಡಿ–ಆತಂಕ!

ಮತ್ತೆ ಮ್ಯಾನ್‌ಹೋಲ್ ಕುಸಿದ ಸ್ಥಳದಲ್ಲಿ ಈಗಲೂ ಬ್ಯಾರಿಕೇಡ್ ನಿಲ್ಲಿಸಿ ಕೈ ತೊಳೆದುಕೊಂಡ ಅಧಿಕಾರಿಗಳು



ವರ್ಷದ ಹಿಂದೆ ಇದ್ದಂತಹ ಸ್ಥಿತಿ



ಕಳೆದ ತಿಂಗಳು ಮ್ಯಾನ್‌ಹೋಲ್ ಸರಿಪಡಿಸಲಾಗಿತ್ತು



ಈಗ ಮತ್ತೆ ವರ್ಷದ ಹಿಂದೆ ಸ್ಥಿತಿಗೆ ಮರಳಿದೆ

ಮೈಸೂರು, ಜು.19(ಬಿಎಲ್‌ಯು)– ಮೈಸೂರಿನ ಕಾರಂಜಿಕೆರೆ ಬಂಡ್ ರಸ್ತೆಯಲ್ಲಿ ಕುಸಿದು ಅಪಾಯದ ಹೊಂಡವಾಗಿದ್ದ ಮ್ಯಾನ್‌ಹೋಲ್ ಅನ್ನು ದುರಸ್ತಿ ಮಾಡಿ, ಇನ್ನು ಕೆಲ ದಿನಗಳು ಕಳೆದಿಲ್ಲ. ಆಗಲೇ ಅದು ಮತ್ತೆ ಕುಸಿದು ಪುನಃ ಹೊಂಡ ನಿರ್ಮಾಣವಾಗಿದೆ. ಅನಾಹುತಕ್ಕೆ ಆಸ್ಪದವಾಗಬಾರದು ಎಂದು ಯಥಾ ಪ್ರಕಾರ ಬ್ಯಾರಿಕೇಡ್ ಪ್ರತಿಷ್ಠಾಪಿಸಲಾಗಿದೆ!

ಈ ರಸ್ತೆಯ ಮಧ್ಯೆ ಹಾದು ಹೋಗಿರುವ ಒಳಚರಂಡಿ ಪೈಪ್‌ನ ಮ್ಯಾನ್‌ಹೋಲ್ ಕುಸಿದು, ಹೊಂಡ ನಿರ್ಮಾಣವಾಗಿತ್ತು. ಇದರಿಂದ ಅಪಘಾತಗಳಾಗುತ್ತಿರುವ ಬಗ್ಗೆ 'ಮೈಸೂರು ಮಿತ್ರ' ವರದಿ ಮಾಡಿತ್ತು. ಅದರಲ್ಲೂ ಹೊಂಡದ ಮಧ್ಯೆ ಬ್ಯಾರಿಕೇಡ್ ಇರಿಸಿದ್ದರಿಂದ ಸಣ್ಣಪುಟ್ಟ ವಾಹನ ಸವಾರರಿಗೆ ಕಂಟಕವಾಗಿರುವುದರ ಮೇಲೆ ಬೆಳಕು ಚೆಲ್ಲಿತ್ತು. ನಂತರ ಎಚ್ಚೆತ್ತುಕೊಂಡ ಅಧಿಕಾರಿಗಳು ದುರಸ್ತಿ ಮಾಡಿ, ಬ್ಯಾರಿಕೇಡ್ ತೆರವುಗೊಳಿಸಿದ್ದರು. ಈ ದುರಸ್ತಿ ಕಾರ್ಯ ಕೈಗೊಂಡ ಮಹನೀಯರು ಯಾರು ಎಂಬುದು ಇದುವರೆಗೂ ತಿಳಿದುಬಂದಿಲ್ಲ. ಆದರೆ ಈಗ ಮತ್ತೆ ಅದೇ ಜಾಗದಲ್ಲಿ ಮ್ಯಾನ್‌ಹೋಲ್ ಕುಸಿದು ಹಳ್ಳ ಬಿದ್ದಿದೆ.

ಅಪಘಾತಗಳಾಗದಂತೆ ಮ್ಯಾನ್‌ಹೋಲ್ ಮಧ್ಯೆ ಮತ್ತೆ ಬ್ಯಾರಿಕೇಡ್ ನಿಲ್ಲಿಸಲಾಗಿದೆ. ಮೃಗಾಲಯದಿಂದ ಕಾರಂಜಿಕೆರೆಗೆ ಹೋಗುವ ಪ್ರವಾಸಿಗರು ಹೆಚ್ಚಾಗಿ ಬಳಸುವುದು ಈ ರಸ್ತೆಯನ್ನೇ.

ಈ ಹಿಂದೆ ಮ್ಯಾನ್‌ಹೋಲ್ ಕುಸಿದು ಹಳ್ಳ ಬಿದ್ದಾಗ ಸರಿಯಾದ ರೀತಿಯಲ್ಲಿ ರಿಪೇರಿ ಮಾಡಿದ್ದರೆ ಪ್ರಾಯಶಃ ಮತ್ತೊಮ್ಮೆ ಮ್ಯಾನ್‌ಹೋಲ್ ಕುಸಿಯುತ್ತಿರಲಿಲ್ಲ. ಆದರೆ ಅಧಿಕಾರಿಗಳ ಭ್ರಷ್ಟಾಚಾರ, ಬೇಜವಾಬ್ದಾರಿ ಹಾಗೂ ನಿರ್ಲಕ್ಷ್ಯತನದಿಂದ ಈಗ ಮ್ಯಾನ್‌ಹೋಲ್ ಮತ್ತೆ ಕುಸಿದಿದೆ. ಹಿಂದೆ ದುರಸ್ತಿ ಮಾಡಿದವರು ಹೆಸರೇ ಇದೇ ನಿಗೂಢವಾಗುಳಿದರು. ಬಹುಶಃ ಇದು ಹೀಗೆ ಮತ್ತೆ ಕುಸಿಯಬಹುದು ಎಂಬ ಭವಿಷ್ಯ ಬಲ್ಲವರೇ ಇರಬೇಕು.

ಇನ್ನು ಎಷ್ಟು ದಿನ ಹೀಗೆ ಮ್ಯಾನ್‌ಹೋಲ್ ಮಧ್ಯೆ ಬ್ಯಾರಿಕೇಡ್ ನಿಂತಿರುತ್ತೋ ದೇವರೇ ಬಲ್ಲ. ಮತ್ತೆ ವಾಹನ ಸವಾರರಿಗೆ ಅಪಾಯ ಕಾದಿದ್ದು, ಎಚ್ಚರ... ಎಚ್ಚರ...

ನಮಾಮಿ ಗಂಗೆ ಯೋಜನೆ ವೇಳೆ ಭೀಕರ ದುರಂತ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡು 15 ಮಂದಿ ಸಾವು

ಡೆಹ್ರಾಡೂನ್, ಜು.19– ಅಲಕನಂದಾ ನದಿ ತೀರದಲ್ಲಿ ಟ್ರಾನ್ಸ್‌ಫಾರ್ಮರ್ ಸ್ಫೋಟಗೊಂಡ ಪರಿಣಾಮ ಉಂಟಾದ ಅವಘಡದಲ್ಲಿ ಸುಮಾರು 15 ಮಂದಿ ಮೃತಪಟ್ಟು, ಅನೇಕರು ಗಾಯಗೊಂಡ ಭೀಕರ ಘಟನೆ ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಬುಧವಾರ ನಡೆದಿದೆ. ಅನೇಕ ಗಾಯಾಳುಗಳ ಸ್ಥಿತಿ ಗಂಭೀರವಾಗಿರುವುದರಿಂದ ಮರಣ ಸಂಖ್ಯೆ ಮತ್ತಷ್ಟು ಹೆಚ್ಚುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪರಿಷತ್ತಿನಲ್ಲಿ ಪಾಸಾಗದ ಎಪಿಎಂಸಿ ತಿದ್ದುಪಡಿ ವಿಧೇಯಕ

ಮತ ವಿಭಜನೆಯಲ್ಲಿ ಸರ್ಕಾರಕ್ಕೆ ಸೋಲು, ಪರಿಶೀಲನೆಗೆ ಸದನ ಸಮಿತಿ ರಚನೆ

ಬೆಂಗಳೂರು, ಜು.19– ವಿಧಾನಸಭೆಯಲ್ಲಿ ಅಂಗೀಕೃತವಾದ 'ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ತಿದ್ದುಪಡಿ ವಿಧೇಯಕ 2023' ಅನ್ನು ಮೇಲ್ಮನೆಯಲ್ಲಿ ಪ್ರತಿಪಕ್ಷಗಳು ತೀವ್ರ ವಿರೋಧ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಮತದಾನದ ಮೂಲಕ ಶಾಸನ ಪರಿಶೀಲನಾ ಸಮಿತಿಗೆ ಒಪ್ಪಿಸಲು ನಿರ್ಧರಿಸಲಾಯಿತು. ಇದರಿಂದಾಗಿ, ರಾಜ್ಯ ಸರ್ಕಾರಕ್ಕೆ ಹಿನ್ನಡೆಯಾದಂತಾಗಿದೆ.

ಬುಧವಾರ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಎಸ್.ಪಾಟೀಲ್ ಅವರು, ವಿಧೇಯಕ ಅಂಗೀಕರಿಸುವಂತೆ ಪ್ರಸ್ತಾವನೆಯನ್ನು ಸದನದಲ್ಲಿ ಮಂಡಿಸಿದರು. ಮಧ್ಯಾಹ್ನದ ವಿರಾಮದ ನಂತರ ವಿಧೇಯಕದ ಕುರಿತು ಸುಮಾರು 3 ಗಂಟೆಗಳ ಸುದೀರ್ಘ ಚರ್ಚೆ ನಡೆಯಿತು. ಆ ನಂತರ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಶಾಸನ ಪರಿಶೀಲನಾ ಸಮಿತಿಗೆ ವಹಿಸಲು ಪಟ್ಟು ಹಿಡಿದರು.

ಸಚಿವ ಹೆಚ್.ಕೆ.ಪಾಟೀಲ, ಸುದೀರ್ಘ ಚರ್ಚೆ ನಂತರವೂ ಶಾಸನ ಪರಿಶೀಲನಾ ಸಮಿತಿಗೆ ಒಪ್ಪಿಸಲು ಬರುವುದಿಲ್ಲ. ವಿಧೇಯಕ ಮಂಡನೆಯ ವೇಳೆಯೇ ಈ ಬಗ್ಗೆ ಪ್ರಸ್ತಾಪಿಸಬೇಕಿತ್ತು, ಈಗ ಅದು ಸಾಧ್ಯವಿಲ್ಲ ಎಂದರು. ಈ ಸಂದರ್ಭದಲ್ಲಿ ಬಿಜೆಪಿ ಸದಸ್ಯ ನಾರಾಯಣಸ್ವಾಮಿ ಮಾತನಾಡಿ, ಶಾಸನ ಪರಿಶೀಲನಾ ಸಮಿತಿಗೆ ಒಪ್ಪಿಸಲು ಎಲ್ಲಾ ಅವಕಾಶಗಳು ಇವೆ ಎಂದು ನಿಯಮಾವಳಿ ಉಲ್ಲೇಖಿಸಿದರು.

ಈ ವೇಳೆ ಸಭಾಪತಿ ಬಸವರಾಜ ಹೊರಟ್ಟಿ ಅವರು, ವಿಧೇಯಕವನ್ನು ಶಾಸನ ಪರಿಶೀಲನಾ ಸಮಿತಿಗೆ ಒಪ್ಪಿಸುವ ನಿಟ್ಟಿನಲ್ಲಿ ಮತದಾನ ಪ್ರಕ್ರಿಯೆ ಆರಂಭಿಸಿದರು. ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರು ಕುಳಿತ ಆಸನಗಳಲ್ಲೇ ಸಾಲು, ಸಾಲಾಗಿ ಶಾಸಕರ ಪರ–ವಿರೋಧ ಹಾಜರಾತಿ ಪಡೆಯಲಾಯಿತು. ಶಾಸಕ ಪರಿಶೀಲನಾ ಸಮಿತಿಗೆ ಒಪ್ಪಿಸುವ ಪರವಾಗಿ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ಸೇರಿ 31 ಶಾಸಕರು, ವಿರುದ್ಧವಾಗಿ ಕಾಂಗ್ರೆಸ್ ಸದಸ್ಯರು ಮತ್ತು ಜೆಡಿಎಸ್'ನ ಮರಿತಿಬ್ಬೇಗೌಡ ಅವರು ಒಳಗೊಂಡಂತೆ ಒಟ್ಟು 21 ಶಾಸಕರು ಮತ ಚಲಾಯಿಸಿದರು. ವಿರೋಧ ಪಕ್ಷಗಳ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದ ಹಿನ್ನೆಲೆಯಲ್ಲಿ ವಿಧೇಯಕವನ್ನು ಶಾಸನ ಪರಿಶೀಲನಾ ಸಮಿತಿಗೆ ವಹಿಸಲು ನಿರ್ಧರಿಸಲಾಯಿತು.

ಐಎಎಸ್ ಅಧಿಕಾರಿಗಳನ್ನು ಗುಲಾಮರಂತೆ ನಡೆಸಿಕೊಂಡ ಕಾಂಗ್ರೆಸ್ ಸರ್ಕಾರ: ಹೆಚ್.ಡಿ.ಕುಮಾರಸ್ವಾಮಿ ವಾಗ್ದಾಳಿ

ಬೆಂಗಳೂರು, ಜು.19– ವಿಧಾನಸಭೆ ಕಲಾಪದ ವೇಳೆ ಅಶಿಸ್ತಿನ ವರ್ತನೆ ತೋರಿದ ಬಿಜೆಪಿ ಶಾಸಕರನ್ನು ಸ್ಪೀಕರ್ ಯುಟಿ ಖಾದರ್ ಅಮಾನತುಗೊಳಿಸಿದ ಬೆನ್ನಲ್ಲೇ ಆಡಳಿತಾರೂಢ ಕಾಂಗ್ರೆಸ್ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಜೆಡಿಎಸ್ ನಾಯಕ ಹೆಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದ್ದಾರೆ. ವಿಧಾನಸೌಧದಲ್ಲಿ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ದರ್ಪ, ದಬ್ಬಾಳಿಕೆ ನಡೆಸುತ್ತಿದೆ. ಐಎಎಸ್ ಅಧಿಕಾರಿಗಳನ್ನು ಗುಲಾಮರಂತೆ ನಡೆಸಿಕೊಂಡಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ಬಿಜೆಪಿ, ಜೆಡಿಎಸ್ ಮೇಲೆ ಸರ್ಕಾರ ದಬ್ಬಾಳಿಕೆ ನಡೆಸಿದೆ ಎಂದು ಅವರು ಟೀಕಿಸಿದ್ದಾರೆ.

ಪ್ರತಿಪಕ್ಷಗಳ ನಾಯಕರನ್ನು ಸ್ವಾಗತಿಸಲು ಹಿರಿಯ ಐಎಎಸ್ ಅಧಿಕಾರಿಗಳನ್ನು ದುರ್ಬಳಕೆ ಮಾಡಿಕೊಳ್ಳಲಾಗಿದೆ. ಇದನ್ನು ಪ್ರಶ್ನಿಸಿದ ಬಿಜೆಪಿ, ಜೆಡಿಎಸ್ ಮೇಲೆ ಸರ್ಕಾರ ದಬ್ಬಾಳಿಕೆ ನಡೆಸಿದೆ. ಅದರ ಬದಲು, ನಮ್ಮಿಂದ ತಪ್ಪಾಗಿದೆ, ಇನ್ಮುಂದೆ ಮಾಡುವುದಿಲ್ಲ ಎಂದು ಹೇಳಿದ್ದರೆ ಸಾಕಾಗುತ್ತಿತ್ತು. ಆದರೆ, ಆಡಳಿತಾರೂಢ ಕಾಂಗ್ರೆಸ್‌ನವರಿಗೆ ಇದು ಪ್ರತಿಷ್ಠೆಯಾಗಿದೆ ಎಂದು ಕುಮಾರಸ್ವಾಮಿ ಕಿಡಿಕಾರಿದರು.

ಸಮ್ಮಿಶ್ರ ಸರ್ಕಾರದಲ್ಲಿ ನಾನು ಸಿಎಂ ಆಗಿದ್ದಾಗ ಬೇರೆ ರಾಜ್ಯಗಳ ಸಿಎಂಗಳ ಸ್ವಾಗತಕ್ಕೆ ಐಎಎಸ್ ಅಧಿಕಾರಿಗಳನ್ನು ನಿಯೋಜಿಸಿರಲಿಲ್ಲ. ಜೆಡಿಎಸ್ ನಾಯಕರಾಗಿದ್ದ ಡ್ಯಾನಿಶ್ ಅಲಿ ಸ್ವಾಗತಕ್ಕೂ ನೇಮಿಸಿರಲಿಲ್ಲ. ಅಧಿಕಾರಿ ಒ.ಎಸ್.ಪಾಟೀಲ್‌ರನ್ನು ನಾನು ನೇಮಕ ಮಾಡಿರಲಿಲ್ಲ. ಆದರೆ, ಸರ್ಕಾರದ ಸಮನ್ವಯ ಸಮಿತಿ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯ ತಮಗೆ ವಿಶೇಷ ಕ್ಯಾಬಿನ್, ಅಧಿಕಾರಿ ಬೇಕು ಎಂದಿದ್ದರು. ಸರ್ಕಾರದಲ್ಲಿ ಯಾವುದೇ ಸ್ಥಾನ ಇಲ್ಲದಿದ್ದೂ ಸವಲತ್ತು ಪಡೆದಿದ್ದರು. ಅಂಥವರು ಇಂದು ನಮ್ಮ ಬಗ್ಗೆ ಮಾತನಾಡುತ್ತಿದ್ದಾರೆಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು. ಬಿಜೆಪಿ, ಜೆಡಿಎಸ್ ಒಟ್ಟಿಗೆ ಸೇರಿ ಸರ್ಕಾರದ ವಿರುದ್ಧ ಹೋರಾಡುತ್ತೇವೆ. ಧರಣಿನಿರತರಿಗೆ ಶಿಕ್ಷೆ ಕೊಡುತ್ತೇವೆಂದು ಊಟಕ್ಕೆ ಬಿಟ್ಟಿರಲಿಲ್ಲ. ಭೋಜನ ವಿರಾಮಕ್ಕೆ ಬಿಡದೆ ಡೆಪ್ಯುಟಿ ಸ್ಪೀಕರ್ ಕಲಾಪ ನಡೆಸಿದ್ದರು ಎಂದರು.

ಜೈನಮುನಿ ಹತ್ಯೆ ಪ್ರಕರಣ ಸಿಐಡಿ ತನಿಖೆಗೆ

ಬೆಂಗಳೂರು, ಜು.19– ರಾಜ್ಯಾದ್ಯಂತ ಭಾರೀ ಸುದ್ದಿ ಮಾಡಿದ ಬೆಳಗಾವಿ ಜಿಲ್ಲೆಯ ಜೈನಮುನಿ ನಂದಿ ಕಾಮಕುಮಾರ ಸ್ವಾಮೀಜಿ ಹತ್ಯೆ ಪ್ರಕರಣವನ್ನು ಸಿಐಡಿ ತನಿಖೆಗೆ ಒಪ್ಪಿಸಿ ರಾಜ್ಯ ಸರ್ಕಾರ ಆದೇಶ ನೀಡಿದೆ.

ಇಂದು ಬುಧವಾರ ವಿಧಾನಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಈ ವಿಚಾರವನ್ನು ಪ್ರಕಟಿಸಿದ್ದಾರೆ. ಜೈನ ಮುನಿಯನ್ನು ಹಣಕಾಸು ವಿಚಾರಕ್ಕೆ ಸಂಬಂಧಿಸಿದಂತೆ ಹತ್ಯೆ ಮಾಡಲಾಗಿತ್ತು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದುಬಂದಿದೆ.

ಆದರೆ ಹತ್ಯೆ ಪ್ರಕರಣದಲ್ಲಿ ಬೇರೆ ಆಯಾಮ ಇದೆ. ಈ ಹಿನ್ನೆಲೆಯಲ್ಲಿ ಇದನ್ನು ಸಿಬಿಐ ತನಿಖೆಗೆ ನೀಡಬೇಕು ಎಂದು ಬಿಜೆಪಿ ಆಗ್ರಹಿಸಿತ್ತು. ಆದರೆ ಇದೀಗ ಸರ್ಕಾರ ಸಿಐಡಿ ತನಿಖೆಗೆ ನೀಡಲು ನಿರ್ಧಾರ ಮಾಡಿದೆ ಎಂದು ತಿಳಿಸಿದರು.

ನಡೆದ ಘಟನೆಯೇನು: ಕಳೆದ ಜುಲೈ 6ರಂದು ಬೆಳಗ್ಗೆಯಿಂದ ನಂದಿ ಕಾಮಕುಮಾರ ಸ್ವಾಮಿಗಳು ಆಶ್ರಮದಲ್ಲಿ ಕಾಣಸಿಗಲಿಲ್ಲ. ಆಗ ಆತಂಕಗೊಂಡ ಭಕ್ತರು ಎಲ್ಲ ಕಡೆ ಹುಡುಕಿದರೂ ಮುನಿಗಳು

ಸಿಎಂ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಪ್ರಕಟ



ಪತ್ತೆಯಾಗಿರಲಿಲ್ಲ. ಹೀಗಾಗಿ ಚಿಕ್ಕೋಡಿ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಬಳಿಕ ಪೊಲೀಸರು ತನಿಖೆ ಆರಂಭಿಸಿದ್ದರು. ಶುಕ್ರವಾರ ರಾತ್ರಿ ಪೊಲೀಸರು ಶಂಕಿತ ಆರೋಪಿಗಳನ್ನು ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದರು. ಆರೋಪಿಗಳು ರಾಯಬಾಗ ತಾಲೂಕಿನ ಕಟಕಬಾವಿ ಗ್ರಾಮದ ಹೊರವಲಯದ ಬೋರ್‌ವೆಲ್ ನಲ್ಲಿ ಜೈನ ಮುನಿಗಳ ಶವ ಎಸೆದಿರುವುದಾಗಿ ಮಾಹಿತಿ ನೀಡಿದ್ದರು. ಹೀಗಾಗಿ ಪೊಲೀಸರು ರಾತ್ರಿಯಿಂದಲೇ ಕಾರ್ಯಾಚರಣೆ ಆರಂಭಿಸಿದ್ದರು. ಜೈನ ಮುನಿಗಳ ದೇಹದ ತುಂಡುಗಳನ್ನು ಬಟ್ಟೆಯಲ್ಲಿ ಕಟ್ಟಿ ತೆರೆದ ಕೊಳವೆ ಬಾವಿಯಲ್ಲಿ ಆರೋಪಿಗಳು ಎಸೆದಿದ್ದರು. 20 ಅಡಿ ಆಳದಲ್ಲಿ ಶವದ ಭಾಗಗಳು ಪತ್ತೆಯಾಗಿತ್ತು.

ಹಣಕಾಸು ವ್ಯವಹಾರ: ಆರಂಭದಲ್ಲಿ ಹಣಕಾಸಿನ ವ್ಯವಹಾರಕ್ಕಾಗಿ ಜೈನ ಮುನಿಗಳ ಕೊಲೆ ಮಾಡಲಾಗಿದೆ ಎನ್ನಲಾಗಿತ್ತು. ಕೊಲೆ ಆರೋಪದಲ್ಲಿ ಹಿರೇಕೋಡಿ ಗ್ರಾಮದ ನಾರಾಯಣ ಮಾಳಿ ಮತ್ತು ಹುಸೇನ್ ಡಾಲಾಯತ ಎಂಬುವವರನ್ನು ಬಂಧಿಸಲಾಗಿದೆ ಕೊಲೆ ಆರೋಪಿ ಮುನಿಗಳಿಂದ ಹಣ ಪಡೆದಿದ್ದ ಹಣ ಮರಳಿಸುವಂತೆ ಮುನಿಗಳು ಕೇಳಿದ್ದರಿಂದ ಕೊಲೆ ಮಾಡಲಾಗಿದೆ ಎಂದು ಪ್ರಾಥಮಿಕ ತನಿಖೆಯ ನಂತರ ಪೊಲೀಸರು ಹೇಳಿದ್ದರು.

ತಮ್ಮ ರಾಜಕೀಯ ಲಾಭಕ್ಕಾಗಿ ವಿರೋಧ ಪಕ್ಷಗಳು ದೇಶದ ಹೆಸರನ್ನು ಬಳಸಿಕೊಳ್ಳುತ್ತಿವೆ

ಚುನಾವಣಾ ಆಯೋಗಕ್ಕೆ ಬಿಜೆಪಿ ನಾಯಕ ದೂರು


ನವದೆಹಲಿ, ಜು.19– ಭಾರತೀಯ ಜನತಾ ಪಕ್ಷದ ನಾಯಕ ಅಶುತೋಷ್ ದುಬೆ, ಭಾರತದ ಚುನಾವಣಾ ಆಯೋಗಕ್ಕೆ ಪತ್ರ ಬರೆದು ವಿರೋಧ ಪಕ್ಷಗಳ ಮೈತ್ರಿಗೆ ಇಂಡಿಯನ್ ನ್ಯಾಷನಲ್ ಡೆವಲಪ್ ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್ (ಇಂಡಿಯಾ) ಎಂದು ಹೆಸರಿಟ್ಟಿರುವುದರ ವಿರುದ್ಧ ಚುನಾವಣಾ ಆಯೋಗ ಮೊರೆ ಹೋಗಿದ್ದಾರೆ.

ವಿರೋಧ ಪಕ್ಷಗಳು ರಾಷ್ಟ್ರದ ಹೆಸರನ್ನು ದುರುಪಯೋಗಪಡಿಸಿಕೊಳ್ಳುತ್ತಿರುವಂತೆ ಕಾಣುತ್ತಿದೆ, ಭಾರತದ ಹೆಸರಿನಲ್ಲಿ ರಾಜಕೀಯ ಮಾಡುತ್ತಿದೆ ಎಂದು ಚುನಾವಣಾ ಆಯೋಗಕ್ಕೆ ಬರೆದಿರುವ ಪತ್ರದಲ್ಲಿ ಆರೋಪಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ಸಭೆಯಲ್ಲಿ, 26 ವಿರೋಧ ಪಕ್ಷಗಳು ತಮ್ಮ ಒಕ್ಕೂಟವನ್ನು ಘೋಷಿಸಿ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್ (INDIA) ಎಂದು ಕರೆದಿವೆ. 2024ರ ಲೋಕಸಭೆ ಚುನಾವಣೆಯಲ್ಲಿ ಆಡಳಿತಾರೂಢ ಎನ್‌ಡಿಎಯನ್ನು ಒಗ್ಗಟ್ಟಿನಿಂದ ಎದುರಿಸಲು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಈ ಹೋರಾಟ ಇಂಡಿಯಾ ಮತ್ತು ಪ್ರಧಾನಿ ನರೇಂದ್ರ ಮೋದಿಯವರ ನಡುವೆ ಎಂದಿದ್ದರು. ವಿರೋಧ ಪಕ್ಷಗಳ ಹೆಸರಿನ ನಿರ್ಧಾರ ಸ್ವಂತಿಕೆಯ ಕೊರತೆಯನ್ನು ತೋರಿಸಿರುವುದು ಮಾತ್ರವಲ್ಲದೆ ನಮ್ಮ ರಾಷ್ಟ್ರದ ಹೆಸರನ್ನು ಅಧಿಕಾರ ಪಡೆಯಲು ಕೇವಲ ಸಾಧನವಾಗಿ ಬಳಸುತ್ತಿರುವಂತೆ ತೋರುತ್ತಿದೆ ಎಂದು ಬಿಜೆಪಿ ಮಹಾರಾಷ್ಟ್ರದ ಸಾಮಾಜಿಕ ಮಾಧ್ಯಮ–ಕಾನೂನು ಮತ್ತು ಸಲಹಾ ವಿಭಾಗದ ಮುಖ್ಯಸ್ಥ ದುಬೆ ಹೇಳಿದ್ದಾರೆ.

ಚುನಾವಣಾ ಆಯೋಗಕ್ಕೆ ಅವರು ಬರೆದ ಪತ್ರದಲ್ಲಿ, ಇತ್ತೀಚೆಗೆ ಯುನೈಟೆಡ್ ಪ್ರೋಗ್ರೆಸಿವ್ ಅಲೈಯನ್ಸ್ (ಯುಪಿಎ)ನ್ನು ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್‌ಕ್ಲೂಸಿವ್ ಅಲೈಯನ್ಸ್ (ಇಂಡಿಯಾ) ಎಂದು ಮರುನಾಮಕರಣ ಮಾಡಲಾಗುತ್ತಿದೆ. ಈ ಕ್ರಮವು ವಿರೋಧ ಪಕ್ಷಗಳ ರಾಜಕೀಯ ಆಕಾಂಕ್ಷೆಗಳಿಗಾಗಿ ನಮ್ಮ ರಾಷ್ಟ್ರದ ಹೆಸರನ್ನು ಬಳಸಿಕೊಳ್ಳುವ ದುರುದ್ದೇಶಪೂರ್ವಕವಾಗಿ ಬಳಸಿಕೊಳ್ಳುವ ಪ್ರಯತ್ನವೆಂದು ಪರಿಗಣಿಸಲಾಗಿದೆ, ಇದು ದೇಶ ಮತ್ತು ಅದರ ನಾಗರಿಕರಿಗೆ ಅಗೌರವ ಎಂದು ನಾನು ನಂಬುತ್ತೇನೆ ಎಂದಿದ್ದಾರೆ.

ಹೆಸರು ಬದಲಾವಣೆ ಬಿಟ್ಟು ಇಂಡಿಯಾ ಸಭೆಯಿಂದ ಏನೂ ಪ್ರಯೋಜನ ಆಗಿಲ್ಲ

ಬೆಂಗಳೂರು, ಜು.19– ಹೆಸರು ಬದಲಾವಣೆ ಬಿಟ್ಟು ಇನ್ನೇನು ಅನುಕೂಲ ಇಂಡಿಯಾ ಸಭೆಯಿಂದ ಆಗಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಬೆಂಗಳೂರಿನಲ್ಲಿ ನಡೆದ ವಿಪಕ್ಷಗಳ ಸಭೆಗೆ ಲೇವಡಿ ಮಾಡಿದ್ದಾರೆ.



ಬೆಂಗಳೂರಿನಲ್ಲಿ ಮಾತನಾಡಿದ ಅವರು, ಯುಪಿಎ ಮೈತ್ರಿಕೂಟಕ್ಕೆ ಇಂಡಿಯಾ ಎಂಬ ನಾಮಕರಣ ಮಾಡಿರುವ ಬಗ್ಗೆ ನಾನು ಯಾಕೆ ಹಗುರವಾಗಿ ಮಾತನಾಡಲಿ. ನಿನ್ನೆ ದಿನ ಯುಪಿಎ ಬದಲಾವಣೆ ಮಾಡಿಕೊಂಡು ಇಂಡಿಯಾ ಅಂತ ಇಟ್ಟಿದ್ದಾರೆ. ಅದು ಅವರಿಗೆ ಸೇರಿದ್ದು, ಹೆಸರು ಇಟ್ಟ ತಕ್ಷಣ ನಾಡಿನ ಸಮಸ್ಯೆ ಬಗೆಹರಿಯಲ್ಲ ಅಂತ ಕಿಡಿಕಾರಿದರು.

ಕಾಂಗ್ರೆಸ್ ಇಷ್ಟು ದೊಡ್ಡ ಮಟ್ಟದಲ್ಲಿ ರಾಜಕೀಯ ಸಭೆ ಮಾಡಿ ಜನರ ಮೇಲೆ ಹೊರೆ ಹೊರಿಸಿ ಮಾಡಿರುವ ಕಾರ್ಯಕ್ರಮ ಇದು. ಕೊನೆಗೆ ಏನು ಸಂದೇಶ ನೀಡಿದ್ದಾರೆ. ನಾವು ಕಾಂಗ್ರೆಸ್‌ನವರು ಪ್ರಧಾನಿ ಹುದ್ದೆಯ ಆಕಾಂಕ್ಷಿ ಅಲ್ಲ ಅಂತ ಹೇಳಿದ್ದಾರೆ. ಅದು ಬಿಟ್ಟು ಇನ್ನೇನು ಆಗಿಲ್ಲ ಎಂದು ವ್ಯಂಗ್ಯವಾಡಿದರು.

ಸಂವಿಧಾನದ ಪ್ರಕಾರ ಇಂಡಿಯಾ ಎಂಬ ಹೆಸರು ಇಡುವಂತಿಲ್ಲ ಎಂಬ ವಾದಕ್ಕೆ ಪ್ರತಿಕ್ರಿಯೆ ನೀಡಿದ ಅವರು,ಯಾರಾದರೂ ಕೋರ್ಟ್‌ಗೆ ಹೋಗ್ತಾರಾ ಏನು ಮಾಡ್ತಾರೆ ಮುಂದೆ ನೋಡೋಣ. ಅವರು ಏನೋ ಹೆಸರು ಇಟ್ಟುಕೊಂಡಿದ್ದಾರೆ. ಮುಂದೆ ಏನಾಗುತ್ತೆ ನೋಡೋಣ ಎಂದರು.

ಇಂದು ವಿಪಕ್ಷಗಳ ಮೈತ್ರಿಕೂಟದ ಮೊದಲ ಸಭೆ

ಸಂಸತ್ತಿನ ಮುಂಗಾರು ಅಧಿವೇಶನದ ಕಾರ್ಯತಂತ್ರ ಕುರಿತು ಚರ್ಚೆ

ನವದೆಹಲಿ, ಜು.19– ಸಂಸತ್ತಿನ ಮುಂಗಾರು ಅಧಿವೇಶನಕ್ಕಾಗಿ ಜಂಟಿ ಕಾರ್ಯತಂತ್ರವನ್ನು ರೂಪಿಸಲು ವಿರೋಧ ಪಕ್ಷಗಳ ಮೈತ್ರಿಕೂಟವಾದ INDIAದ ಮೊದಲ ಸಭೆ ಗುರುವಾರ ನಡೆಯಲಿದೆ. ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರ ಕಚೇರಿಯಲ್ಲಿ ಸಭೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ. ಮುಂಗಾರು ಅಧಿವೇಶನ ಆರಂಭವಾದ ಮೊದಲ ದಿನದಿಂದ ಸಂಸತ್ತಿನಲ್ಲಿ ಕೈಗೊಳ್ಳಬೇಕಾದ ಕಾರ್ಯತಂತ್ರಗಳ ಬಗ್ಗೆ ಚರ್ಚಿಸಲು ಸಭೆ ಕರೆಯಲಾಗಿದೆ ಎಂದು ವಿರೋಧ ಪಕ್ಷದ ನಾಯಕರೊಬ್ಬರು ಹೇಳಿದರು.

ಸಂಸತ್ತಿನ ಮುಂಗಾರು ಅಧಿವೇಶನ ಜುಲೈ 20ರಂದು ಆರಂಭವಾಗಿ ಆಗಸ್ಟ್ 11ರಂದು ಮುಕ್ತಾಯಗೊಳ್ಳಲಿದೆ. ಬೆಂಗಳೂರಿನಲ್ಲಿ ಮಂಗಳವಾರ ಸಭೆ ಸೇರಿದ್ದ 26 ವಿರೋಧ ಪಕ್ಷಗಳು ತಮ್ಮ ಒಕ್ಕೂಟಕ್ಕೆ ಇಂಡಿಯನ್ ನ್ಯಾಷನಲ್ ಡೆವಲಪ್‌ಮೆಂಟಲ್ ಇನ್ ಕ್ಲೂಸಿವ್ ಅಲೈಯನ್ಸ್ (INDIA)' ಎಂದು ಹೆಸರಿಟ್ಟಿದ್ದು, ಆಡಳಿತಾರೂಢ ಬಿಜೆಪಿ ನೇತೃತ್ವದ ಎನ್‌ಡಿಎಗೆ ಸವಾಲು ಹಾಕಿವೆ.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ



ಅವರು, 'INDIA ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವೆ' ಈ ಹೋರಾಟ ನಡೆಯಲಿದೆ ಎಂದು ಪ್ರತಿಪಾದಿಸಿದರು. ಮಂಗಳವಾರ ಮುಕ್ತಾಯಗೊಂಡ ಬೆಂಗಳೂರಿನಲ್ಲಿ ನಡೆದ ಎರಡು ದಿನಗಳ ವಿಪಕ್ಷಗಳ ಸಭೆಯಲ್ಲಿ, ಸರ್ಕಾರದ ವಿರುದ್ಧ ಸಂಸತ್ತಿನಲ್ಲಿ ಪ್ರಸ್ತಾಪಿಸಲು ಬಯಸುವ ವಿಷಯಗಳ ಬಗ್ಗೆ ಸಮನ್ವಯ ಸಾಧಿಸಲು ಎಲ್ಲಾ ಪಕ್ಷದ ನಾಯಕರು ಸರ್ವಾನುಮತದಿಂದ ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. 26 ವಿರೋಧ ಪಕ್ಷಗಳು ಲೋಕಸಭೆಯಲ್ಲಿ ಸುಮಾರು 150 ಸ್ಥಾನಗಳ ಬಲವನ್ನು ಹೊಂದಿವೆ. ಎನ್‌ಡಿಎ 330ಕ್ಕೂ ಹೆಚ್ಚು ಸ್ಥಾನಗಳನ್ನು ಹೊಂದಿದ್ದು, ದೆಹಲಿ ಮತ್ತು 10 ರಾಜ್ಯಗಳಲ್ಲಿ ವೈಯಕ್ತಿಕವಾಗಿ ಅಥವಾ ಮೈತ್ರಿಯೊಂದಿಗೆ ಅಧಿಕಾರದಲ್ಲಿದೆ.

ವಿರೋಧ ಪಕ್ಷಗಳ ಒಕ್ಕೂಟದಲ್ಲಿನ 26 ಪಕ್ಷಗಳು: ಕಾಂಗ್ರೆಸ್, ಟಿಎಂಸಿ, ಡಿಎಂಕೆ, ಎಎಪಿ, ಜೆಡಿ(ಯು), ಆರ್‌ಜೆಡಿ, ಜೆಎಂಎಂ, ಎನ್‌ಸಿಪಿ (ಶರದ್ ಪವಾರ್), ಶಿವಸೇನೆ (ಯುಬಿಟಿ), ಎಸ್‌ಪಿ, ಎನ್‌ಸಿ, ಪಿಡಿಪಿ, ಸಿಪಿಐ(ಎಂ), ಸಿಪಿಐ, ಆರ್‌ಎಲ್‌ಡಿ, ಎಂಡಿಎಂಕೆ, ಕೊಂಗುನಾಡು ಮಕ್ಕಳ್ ದೇಶಿಯಾ ಕಚ್ಚಿ (ಕೆಎಂಡಿಕೆ), ವಿಸಿಕೆ, ಆರ್‌ಎಸ್‌ಪಿ, ಸಿಪಿಐ–ಎಂಎಲ್ (ಲಿಬರೇಶನ್), ಫಾರ್ವರ್ಡ್ ಬ್ಲಾಕ್, ಐಯುಎಂಎಲ್, ಕೇರಳ ಕಾಂಗ್ರೆಸ್ (ಜೋಸೆಫ್), ಕೇರಳ ಕಾಂಗ್ರೆಸ್ (ಮಣಿ), ಅಪ್ನಾದಳ (ಕಾಮೆರವಾಡಿ) ಮತ್ತು ಮನಿತಾನೇಯ ಮಕ್ಕಳ್ ಕಚ್ಚಿ (ಎಂಎಂಕೆ).

ಭರತ್ ಮಂಜೇಗೌಡರ ಹುಟ್ಟುಹಬ್ಬ ಅದ್ಧೂರಿ ಆಚರಣೆ



ಮೈಸೂರು, ಜು. 19– ಮೈಸೂರು–ಚಾಮರಾಜನಗರ ಕ್ಷೇತ್ರದ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡರ ಪುತ್ರ ಭರತ್ ಮಂಜೇಗೌಡರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ಕೇಕ್ ಕತ್ತರಿಸಿ, ಪಟಾಕಿ ಸಿಡಿಸಿ, ಮೈಸೂರು ಪೇಟ, ಹೂವಿನ ಹಾರ ಹಾಕಿ ಅದ್ದೂರಿಯಾಗಿ ಆಚರಿಸಿದರು.

ಭರತ್ ಮಂಜೇಗೌಡರು ಶ್ರೀರಾಂಪುರದ ಬೆಮೆಲ್ ಲೇಔಟ್‌ನಲ್ಲಿರುವ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ ತಂದೆ–ತಾಯಿ, ಅಜ್ಜಿ ನಾಗಮ್ಮನವರ ಆಶೀರ್ವಾದ ಪಡೆದು, ಅಭಿಮಾನಿಗಳಿಂದ ಅಭಿನಂದನೆ ಸ್ವೀಕರಿಸಿದರು. ನಂತರ ಮಾತನಾಡಿದ ಅವರು, ಸ್ನೇಹಿತರೆಲ್ಲರು ಸೇರಿ ನನ್ನ ಹುಟ್ಟುಹಬ್ಬವನ್ನು ಆಚರಿಸಿದ್ದಾರೆ. ಇವರೆಲ್ಲರಿಗೂ ಚಿರಋಣಿಯಾಗಿದ್ದೇನೆ. ನಮ್ಮ ಕ್ಷೇತ್ರ ವ್ಯಾಪ್ತಿಯಲ್ಲಿ ಸದಾ ಜನರ ಸೇವೆ ಮಾಡಿಕೊಂಡಿರುತ್ತೇನೆ ಎಂದರು. ಇದೇ ವೇಳೆ ಜಯಪುರ ಹೋಬಳಿಯ ಹಾರೋಹಳ್ಳಿ ಆದಿಶಕ್ತಿ ದೇವಸ್ಥಾನದ ಅಭಿವೃದ್ಧಿಗೆ ಲಕ್ಷ ರೂ.ಗಳ ಚೆಕ್ಕನ್ನು ಗ್ರಾಮಸ್ಥರಿಗೆ ಹಸ್ತಾಂತರಿಸಿದರು. ಅವರ ತಂದೆ ಸಿ.ಎನ್. ಮಂಜೇಗೌಡರು ಇನ್ನೋವಾ ಕಾರನ್ನು ಉಡುಗೊರೆಯಾಗಿ ನೀಡಿದರು.

ಈ ಸಂದರ್ಭದಲ್ಲಿ ಜೆಡಿಎಸ್ ಹಿಂದುಳಿದ ವರ್ಗದ ಜಿಲ್ಲಾ ಅಧ್ಯಕ್ಷ ಅಪೆಕ್ಸ್ ಶ್ರೀನಿವಾಸ್, ಶ್ರೀರಾಂಪುರ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ರಮೇಶ್, ಟ್ಯೂಬ್ ಮಹಾದೇವ, ಕೆ.ಜಿ.ಕೊಪ್ಪಲು ದಿನೇಶ್ ಗೌಡ, ಹೆಚ್.ಎಂ. ರಾಜಶೇಖರಮೂರ್ತಿ, ದೂರ ರಾಜಣ್ಣ, ನಂಜರಾಜು, ಮಹದೇವ ಸ್ವಾಮಿ, ತ್ರಿಶೂಲ್, ರಾಘವೇಂದ್ರ ವಿನೋದ್, ಜಗದೀಶ್, ಧರ್ಮ, ಸುರೇಶ್ ಕುಮಾರ್, ಚಲುವರಾಜು, ಆಪ್ತಸಹಾಯಕ ಸುರೇಂದ್ರ ಕುಮಾರ್, ರಮೇಶ್, ಅನಿಲ್, ಮಹೇಶ್, ಸತೀಶ್, ದಯಾನಂದ್ ಹಾಜರಿದ್ದರು.

ಪ್ರತಿಭಾ ಪುರಸ್ಕಾರ, ಸ್ನೇಹ ಸಿಂಚನ ಪುಸ್ತಕ ಬಿಡುಗಡೆ ಸಮಾರಂಭ

ಮೈಸೂರು, ಜು. 19–ಶ್ರೀ ನಟರಾಜ ಮಹಿಳಾ ಪದವಿಪೂರ್ವ ಕಾಲೇಜು ಮತ್ತು ಶ್ರೀ ಶರಣಜ್ಯೋತಿ ಪ್ರಸಾರಾಂಗ ಮೈಸೂರು ಸಹಯೋಗದಲ್ಲಿ ಜು. 21 ರಂದು ಬೆಳಗ್ಗೆ 10.30ಕ್ಕೆ ಶ್ರೀ ನಟರಾಜ ಸಭಾ ಭವನದಲ್ಲಿ ಪ್ರತಿಭಾ ಪುರಸ್ಕಾರ, ಸ್ನೇಹ ಸಿಂಚನ, ಪುಸ್ತಕ ಬಿಡುಗಡೆ ಸಮಾರಂಭ ಏರ್ಪಡಿಸಲಾಗಿದೆ. ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ ಸಾನ್ನಿಧ್ಯ ವಹಿಸುವರು. ಚಾಮರಾಜನಗರ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎಂ.ಆರ್. ಗಂಗಾಧರ್ ಕಾರ್ಯಕ್ರಮ ಉದ್ಘಾಟಿಸಿ, ಕೃತಿ ಬಿಡುಗಡೆ ಮಾಡುವರು. ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕರಾದ ಎಂ.ಪಿ. ನಾಗಮ್ಮ ಪ್ರತಿಭಾ ಪುರಸ್ಕಾರ ಪ್ರದಾನ ಮಾಡುವರು. ಮುಖ್ಯ ಅತಿಥಿಗಳಾಗಿ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜು ಪ್ರಾಂಶುಪಾಲರಾದ ಕೆ.ಸೌಮ್ಯ ಭಾಗವಹಿಸಲಿದ್ದು, ಪ್ರೊ.ಎಸ್. ಶಿವರಾಜಪ್ಪ ಅಧ್ಯಕ್ಷತೆ ವಹಿಸುವರು. ಎ.ಶಿವಲಿಂಗಪ್ಪ, ಶ್ರೀ ನಟರಾಜ ಮಹಿಳಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ಎ.ಡಿ. ಸುನೀತಾ ರಾಣಿ ಭಾಗವಹಿಸುವರು.

ವೀಣಾ ವಿದುಷಿ ಎಂ.ಎಸ್.ಜಯಮ್ಮ ಸ್ಮಾರಕ ಕರ್ನಾಟಕ ಸಂಗೀತ ಸ್ಪರ್ಧೆಗಳು

ಮೈಸೂರು, ಜು. 19– ಮೈಸೂರಿನ ಶ್ರುತಿಮಂಜರಿ ಪ್ರತಿಷ್ಠಾನವು ತನ್ನ ರಜತ ಸಂಭ್ರಮ ವರ್ಷದ ಪ್ರಯುಕ್ತ ವೀಣಾ ವಿದುಷಿ ಎಂ.ಎಸ್.ಜಯಮ್ಮ ಸ್ಮಾರಕ ಕರ್ನಾಟಕ ಶಾಸ್ತ್ರೀಯ ಸಂಗೀತ ಜೂನಿಯರ್, ಸೀನಿಯರ್ ವಿಭಾಗಗಳಿಗೆ ಹಾಡುಗಾರಿಕೆ, ದೇವರನಾಮ, ವಾದ್ಯ ಸಂಗೀತ, ತಾಳವಾದ್ಯ ಮತ್ತು ಲಿಖಿತ ಸಂಗೀತ ರಸಪ್ರಶ್ನೆ, ಸ್ಪರ್ಧೆಗಳನ್ನು ನಡೆಸಲು ತೀರ್ಮಾನಿಸಲಾಗಿದೆ. ಸ್ಪರ್ಧೆಗಳನ್ನು ಆ. 6 ರಂದು ಬೆಳಗ್ಗೆ 9 ಗಂಟೆಗೆ ರೋಟರಿ ಪಶ್ಚಿಮ ಶಾಲಾ ಆವರಣದಲ್ಲಿ ನಡೆಸಲಾಗುವುದು. ಸ್ಪರ್ಧಿಗಳು ಅರ್ಜಿ ಮತ್ತು ವಿವರಗಳಿಗೆ ಮೊ. 9945105374, 9446622466 ಸಂಪರ್ಕಿಸಬಹುದು.



ಚಾಮರಾಜ ಕ್ಷೇತ್ರದ ಶಾಸಕ ಕೆ.ಹರೀಶ್ ಗೌಡ ಹುಟ್ಟುಹಬ್ಬ ಅಂಗವಾಗಿ ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸೇವಾದಳದಿಂದ ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಜುಲೈ 17 ರ ಮಧ್ಯರಾತ್ರಿ 12 ಗಂಟೆಯಿಂದ ಮಧ್ಯಾಹ್ನ 12 ಗಂಟೆವರೆಗೆ ಜನಿಸಿದ ಎಲ್ಲಾ ಮಕ್ಕಳಿಗೆ ಬೇಬಿ ಕಿಟ್ ವಿತರಿಸಿ, ಬಾಣಂತಿಯರಿಗೆ ಶುಭ ಹಾರೈಸಿದರು. ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ನಗರ ಪಾಲಿಕೆ ಸದಸ್ಯ ಜೆ.ಗೋಪಿ, ಕೆ.ಗಿರೀಶ್ ಗೌಡ, ಸಮೀರ್ ಅಹಮದ್, ಮೋಹನ್ ಕುಮಾರ್, ಮೈಸೂರು ಕಾಂಗ್ರೆಸ್ ಕೋ ಆಪರೇಟಿವ್ ಘಟಕದ ಉಪಾಧ್ಯಕ್ಷರಾದ ಎಸ್.ನಾಗರತ್ನ, ಸೇವಾದಳದ ಸವಿತಾ ರಾಮಚಂದ್ರ, ಎಸ್.ಎನ್.ರಾಜೇಶ್, ಚೈತ್ರ, ಚಿತ್ರ ಮತ್ತಿತರರು ಹಾಜರಿದ್ದರು.

ನಾಳೆ ಶಾರದಾವಿಲಾಸ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ವೇದಿಕೆ ಉದ್ಘಾಟನೆ

ಮೈಸೂರು, ಜು. 19– ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾವಿಲಾಸ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ವೇದಿಕೆ ಉದ್ಘಾಟನಾ ಸಮಾರಂಭವನ್ನು ಜು. 21 ರಂದು ಬೆಳಗ್ಗೆ 10.30 ಕ್ಕೆ ಶಾರದಾವಿಲಾಸ ಶತಮಾನೋತ್ಸವ ಭವನದಲ್ಲಿ ಏರ್ಪಡಿಸಲಾಗಿದೆ. ಕಾರ್ಯಕ್ರಮದ ಉದ್ಘಾಟನೆಯನ್ನು ಪುರಾತತ್ತ್ವ ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ, ಮೈಸೂರು ಆಯುಕ್ತರಾದ ಎ.ದೇವರಾಜು ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಶಾರದಾವಿಲಾಸ ವಿದ್ಯಾಸಂಸ್ಥೆಗಳ ಅಧ್ಯಕ್ಷರಾದ ಡಾ. ಬಿ.ಎಂ. ಸುಬ್ರಾಯ, ಗೌರವ ಕಾರ್ಯದರ್ಶಿ ಎನ್. ಚಂದ್ರಶೇಖರ್, ಶೈಕ್ಷಣಿಕ ಸಲಹೆಗಾರರಾದ ಕ್ಯಾಪ್ಟನ್ ಶ್ರೀನಿವಾಸ ರಾಘವಾಚಾರ್ ಉಪಸ್ಥಿತರಿದ್ದು, ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಸಿ.ಕೆ. ಅಶೋಕ್‌ಕುಮಾರ್ ವಹಿಸಲಿದ್ದಾರೆ.

ಹಜರತ್ ನವಾಬ್ ಹೈದರ್ ಅಲಿಖಾನ್ 247ನೇ ಗಂಧದ ಉರುಸ್ ಆಚರಣೆ



ಮೈಸೂರು, ಜು. 19– ಮೈಸೂರಿನ ಅಶೋಕ ರಸ್ತೆಯಲ್ಲಿರುವ ಮೀಲಾದ್ ಪಾರ್ಕ್‌ನಲ್ಲಿ ಹಜ಼ರತ್ ನವಾಬ್ ಹೈದರ್ ಅಲಿಖಾನ್ ಬಹಾದುರ್ (ಆರ್.ಎ) ಅವರ 247ನೇ ಗಂಧದ ಉರುಸ್ ಆಚರಿಸಲಾಯಿತು.

ಹಜ಼ರತ್ ಟಿಪ್ಪುಸುಲ್ತಾನ್ ವೆಲ್‌ಫೇರ್ ಉರುಸ್ ಕಮಿಟಿ, ಟಿಪ್ಪು ಹಾಲ್, ಮೀನಾ ಬಜ಼ಾರ್ ವರ್ತಕರ ಸಹಯೋಗದೊಂದಿಗೆ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ವೇಳೆ ಹಜ಼ರತ್ ಸೂಫಿ ವಲಿ ಬಾ ಭಾಯ್, ಹಜ಼ರತ್ ಮೌಲಾನಾ ಮೊಹಮ್ಮದ್ ಇನಾಯತ್–ಉರ್–ರಹಮಾನ್ ರಜ್ವಿ, ಶಾಹಿ ಇಮಾಮ್, ಟಿಪ್ಪು ಗೋರಿ, ಹಜ಼ರತ್ ಮೌಲಾನಾ ಮೊಹಮ್ಮದ್ ಇರ್ಶಾದ್ ಆಲಂ ಅಶ್ರಫಿ, ಖತೀಬ್–ಒ–ಇಮಾಮ್, ಮಸೀದಿ ರೆಹಮಾನಿಯ, ಸಿಲ್ಕ್ ವೀವಿಂಗ್ ಫ್ಯಾಕ್ಟರಿ, ಮೈಸೂರು ಸೌತ್; ತೌಫಿಕ್ ಮಜೀದ್ ಖಾನ್, ಅಧ್ಯಕ್ಷರು, ಅಜ಼ೀಜ಼್‌ಸೇಠ್ ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಮಿರ್ಜಾ ಜಂಷೀದ್ ಬೇಗ್, ಕ್ವಾಜಾ ಮೊಹಮ್ಮದ್ ಮುಷೀರ್ ಚಿಸ್ಟಿ ಸಾಹೆಬ್, ಹಜ಼ರತ್ ಅಹಮದ್ ಉಲ್ಲಾ ಸಾಹೆಬ್, ಮಜೀದ್ ಅಹಮದ್ ಮತ್ತಿತರರು ಹಾಜರಿದ್ದರು.

ವಿಧಾನಸಭೆಯಲ್ಲಿ ಮಹಾ ಘಟಬಂಧನ್ ನಾಯಕರ ಆತಿಥ್ಯಕ್ಕೆ ಐಎಎಸ್, ಐಪಿಎಸ್ ಅಧಿಕಾರಿಗಳ ಬಳಕೆ ಪ್ರತಿಧ್ವನಿ

ಆಡಳಿತ–ವಿಪಕ್ಷ ಸದಸ್ಯರ ನಡುವೆ ವಾಗ್ವಾದ; ಕಲಾಪಕ್ಕೆ ಅಡ್ಡಿ



ಬೆಂಗಳೂರು, ಜು.19(ಕೆಎಂಶಿ)– ನಗರದಲ್ಲಿ ಮಂಗಳವಾರ ಮುಕ್ತಾಯಗೊಂಡ ವಿರೋಧ ಪಕ್ಷಗಳ ಮಹಾ ಘಟಬಂಧನ್ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರ ಆತಿಥ್ಯಕ್ಕಾಗಿ ರಾಜ್ಯದ ಐಎಎಸ್ ಅಧಿಕಾರಿಗಳನ್ನು ಬಳಸಿಕೊಳ್ಳಲಾಗಿದೆ ಎಂಬ ಆರೋಪ ವಿಧಾನಸಭೆಯಲ್ಲಿ ಪ್ರತಿಧ್ವನಿಸಿ, ಆಡಳಿತ ಹಾಗೂ ಬಿಜೆಪಿ ಸದಸ್ಯರ ನಡುವೆ ಏರಿದ ದನಿಯಲ್ಲಿ ವಾಗ್ವಾದ ನಡೆದು ಕಲಾಪವನ್ನು ಕೆಲಕಾಲ ಮುಂದೂಡಲಾಯಿತು.

ಇದಕ್ಕೂ ಮುನ್ನ ವಿಷಯ ಪ್ರಸ್ತಾಪಿಸಿದ ಅಶೋಕ್, ರಾಜಕೀಯ ಕಾರ್ಯಕ್ರಮಕ್ಕೆ ಆಗಮಿಸಿದ ಗಣ್ಯರ ಆತಿಥ್ಯಕ್ಕೆ ಐಎಎಸ್, ಐಪಿಎಸ್ ಅಧಿಕಾರಿಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ. ಜೈಲಿನಲ್ಲಿದ್ದು, ಈಗ ಬೇಲ್ ಮೇಲೆ ಹೊರ ಬಂದವರಿಗೆ ಅಧಿಕಾರಿಗಳು ಆತಿಥ್ಯ ನೀಡಿದ್ದಾರೆ. ಇದು ಸರ್ಕಾರಿ ಕಾರ್ಯಕ್ರಮವಲ್ಲ, ರಾಜಕೀಯ ಕಾರ್ಯಕ್ರಮ. ರಾಜ್ಯದ ಏಳು ಕೋಟಿ ಜನರ ತೆರಿಗೆ ಹಣವನ್ನು ಈ ರೀತಿ ಬಳಕೆ ಮಾಡಬಾರದು. ರಾಜಕೀಯ ನಾಯಕರನ್ನು ಐಎಎಸ್ ಅಧಿಕಾರಿಗಳು ಹೋಟೆಲ್‌ಗೆ ಕರೆದುಕೊಂಡು ಹೋಗುವಂತೆ ಮಾಡಿ ಶಿಷ್ಟಾಚಾರ ಉಲ್ಲಂಘನೆ ಮಾಡಲಾಗಿದೆ. ಇದು ಅಪರಾಧ ಎಂದು ದೂರಿದರು.

ಬಿಜೆಪಿ ಸದಸ್ಯರು ಸರ್ಕಾರದ ಧೋರಣೆ ವಿರೋಧಿಸಿ ಸಭಾಧ್ಯಕ್ಷರ ಪೀಠದ ಮುಂದಿನ ಬಾವಿಗಿಳಿದು ಧರಣಿ ನಡೆಸಿ ಘೋಷಣೆ ಕೂಗಿದರು. ಇದಕ್ಕೆ ಉತ್ತರಿಸಿದ ಕಾನೂನು ಸಚಿವ ಎಚ್.ಕೆ.ಪಾಟೀಲ್, ಬಿಜೆಪಿಯವರು ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ. ಐಎಎಸ್, ಐಪಿಎಸ್ ಅಧಿಕಾರಿಗಳನ್ನು ರಾಜಕೀಯ ನಾಯಕರನ್ನು ಸ್ವಾಗತಿಸಲು ಬಳಸಿಕೊಂಡಿದ್ದೇವೆ ಎಂಬ ಆರೋಪದಲ್ಲಿ ಹುರುಳಿಲ್ಲ ಎಂದರು.

ಹೊರ ರಾಜ್ಯದ ಮುಖ್ಯಮಂತ್ರಿಗಳು, ಕೇಂದ್ರ ಸಚಿವರು ಮತ್ತು ರಾಜ್ಯದಲ್ಲಿ ಅಧಿಕಾರದಲ್ಲಿರುವವರು ಬಂದಾಗ ಶಿಷ್ಟಾಚಾರದಂತೆ ಗೌರವ ಕೊಟ್ಟಿದ್ದೇವೆ, ಶಿಷ್ಟಾಚಾರವನ್ನು ಉಲ್ಲಂಘಿಸಿಲ್ಲ. ಆಗ ಮಧ್ಯ ಪ್ರವೇಶಿಸಿದ ಸಭಾಧ್ಯಕ್ಷರು, ನಿಮ್ಮ ಪ್ರಸ್ತಾಪಕ್ಕೆ ಕಾನೂನು ಸಚಿವರು ಉತ್ತರ ಕೊಟ್ಟಿದ್ದಾರೆ. ಇದನ್ನು ಮುಂದುವರೆಸುವುದು ಬೇಡ, ಕಾರ್ಯಸೂಚಿಯಂತೆ ಕಲಾಪ ಆರಂಭಿಸೋಣ ಎಂದರು. ಬಿಜೆಪಿ ಸದಸ್ಯರು ಮಾತನಾಡಿ, ವಿಮಾನ ನಿಲ್ದಾಣಕ್ಕೆ ಹೋಗಿ ರಾಜಕೀಯ ನಾಯಕರನ್ನು ಕರೆದುಕೊಂಡು ಬರಲು ಅಧಿಕಾರಿ ನಿಯೋಜಿಸಿರುವುದು ಸರಿಯಲ್ಲ. ಗಣ್ಯ ವ್ಯಕ್ತಿಗಳಿಗೆ ಭದ್ರತೆ ಕೊಡಬೇಡಿ ಎನ್ನುವುದಿಲ್ಲ. ಆತಿಥ್ಯಕ್ಕೆ ಖಾಸಗಿ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಿತ್ತು. ಇದಕ್ಕೆ ಕಾಂಗ್ರೆಸ್ ಹಣ ಖರ್ಚು ಮಾಡಿದೆಯೋ ಅಥವಾ ಕಾಂಗ್ರೆಸ್ ಸರ್ಕಾರದ ಹಣ ಖರ್ಚು ಮಾಡಿದೆಯೋ ಗೊತ್ತಿಲ್ಲ.

ಈ ವಿಚಾರವನ್ನು ಸರ್ಕಾರ ಹಗುರವಾಗಿ ಪರಿಗಣಿಸುವಂತಿಲ್ಲ ಎಂದಾಗ, ಆಡಳಿತ ಪಕ್ಷದ ಹಲವು ಸದಸ್ಯರು ಎದ್ದುನಿಂತು ಮಾತನಾಡಲು ಮುಂದಾದಾಗ ಸದನದಲ್ಲಿ ಗದ್ದಲದ ವಾತಾವರಣ ಉಂಟಾಯಿತು. ಈ ವೇಳೆ ಸಚಿವರಾದ ಪ್ರಿಯಾಂಕ ಖರ್ಗೆ, ಕೃಷ್ಣಬೈರೇಗೌಡ, ಕೆ.ಜೆ.ಜಾರ್ಜ್ ಇತರರು ಬಿಜೆಪಿಯ ಧೋರಣೆಯನ್ನು ತೀವ್ರವಾಗಿ ಆಕ್ಷೇಪಿಸಿದರು. ಪದೇಪದೆ ತಾವು ಮಾಡಿಕೊಂಡ ಮನವಿಗೆ ಸ್ಪಂದಿಸದೆ ಇದ್ದಾಗ ಸಭಾಧ್ಯಕ್ಷರು ಕಲಾಪವನ್ನು ಹತ್ತು ನಿಮಿಷ ಮುಂದೂಡಿದರು.

ಬುಡಕಟ್ಟು ಸಂಶೋಧನಾ ಸಂಸ್ಥೆಯಿಂದ ಜೀವ ರಕ್ಷಣೆ ಕಾರ್ಯಾಗಾರ



ಮೈಸೂರು, ಜು. 19–ಸಾಮಾನ್ಯ ವೈದ್ಯಕೀಯ ತುರ್ತು ಪರಿಸ್ಥಿತಿಯಲ್ಲಿ ಜೀವದ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯವಾಗಿದ್ದು, ಈ ಕಾರ್ಯಾಗಾರದ ಸದುಪಯೋಗವನ್ನು ಪ್ರತಿಯೊಬ್ಬರು ಉಪಯೋಗಿಸಿಕೊಳ್ಳಬೇಕೆಂದು ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಬಿ.ಎಸ್.ಪ್ರಭಾ ಅರಸ್ ಕರೆ ನೀಡಿದರು.

ಮೈಸೂರಿನಲ್ಲಿರುವ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯಲ್ಲಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಜೀವರಕ್ಷಕ ಟ್ರಸ್ಟ್ ಹಾಗೂ ರೋಟರಿ ಮೈಸೂರು ವತಿಯಿಂದ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯ ಆಶ್ರಮ ಶಾಲೆಗಳಲ್ಲಿನ ಮುಖ್ಯ ಶಿಕ್ಷಕರು, ಶಿಕ್ಷಕರು, ನಿಲಯಪಾಲಕರು ಹಾಗೂ ಅಧಿಕಾರಿಗಳಿಗೆ ಜೀವ ಸುರಕ್ಷತೆಗೆ ಅಗತ್ಯ ಮೂಲ ಜ್ಞಾನ ಕುರಿತು 3 ದಿನಗಳ ತರಬೇತಿ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ಈ ಕಾರ್ಯಾಗಾರದಲ್ಲಿ ಕಲಿತದನ್ನು ಯಾರೂ ಮರೆಯದೆ ನಿಮ್ಮ ಶಾಲೆಯ ಮಕ್ಕಳಿಗೆ ಅಕ್ಕಪಕ್ಕದವರಿಗೆ ತರಬೇತಿ ನೀಡಿರಿ ಎಂದರು. ಹೆಚ್.ಡಿ.ಕೋಟೆ, ಹುಣಸೂರು ಪಿರಿಯಾಪಟ್ಟಣ, ನಂಜನಗೂಡು ತಾಲೂಕಿನ 21 ಆಶ್ರಮ ಶಾಲೆಗಳ ಹಾಗೂ ವಿದ್ಯಾರ್ಥಿನಿಲಯಗಳ 120 ಜನ ಶಿಕ್ಷಕರುಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ತರಬೇತಿ ಪಡೆದವರೆಲ್ಲರೂ ಹಾಡಿ ಜನರಲ್ಲಿಯು ಅರಿವು ಮತ್ತು ಜಾಗೃತಿ ಮೂಡಿಸುವ ಮುಖಾಂತರ ಜನರ ಜೀವ ರಕ್ಷಣೆ ಮಾಡಲು ಸಹಕರಿಸಬೇಕೆಂದು ತಿಳಿಸಿದರು. ಸಮಾರಂಭದಲ್ಲಿ ಸಂಶೋಧನಾಧಿಕಾರಿ ಸಿ. ಶಿವಕುಮಾರ್, ರೋಟರಿ ಮೈಸೂರಿನ ಅರುಣ್ ಬೆಳವಾಡಿ, ಡಾ.ರೇಖಾ, ಡಾ.ಸುಮಂತ್, ಡಾ.ದಾಕ್ಷಾಯಿಣಿ, ಸತ್ಯರಾಜ್, ದಿವ್ಯಾ, ವಿದ್ಯಾಶ್ರೀ, ತಾಲೂಕು ಕಲ್ಯಾಣಾಧಿಕಾರಿಗಳಾದ ಹೆಚ್.ಸಿ ಬಸವರಾಜು, ಎಂ. ನಾರಾಯಣಸ್ವಾಮಿ, ನಂದಿನಿ, ಪ್ರತೀಕ್ಷ, ಅನಿಲ್, ಕೃಷ್ಣ ಹಾಜರಿದ್ದರು.

ಮೈವಿವಿ ಅಂತರ ಕಾಲೇಜು, ಅಂತರ ವಲಯ ಪುರುಷರ ಪಂದ್ಯಾವಳಿಗೆ ಚಾಲನೆ



ಮೈಸೂರು, ಜು. 19– ಮೈಸೂರು ವಿಶ್ವವಿದ್ಯಾನಿಲಯ ಅಂತರ ಕಾಲೇಜು, ಅಂತರ ವಲಯ ಪುರುಷರ ಪಂದ್ಯಾವಳಿಗೆ ಚಾಲನೆ ದೊರೆಯಿತು.

ಮೈವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ಕ್ರೀಡಾಕೂಟಕ್ಕೆ ಕುಲಸಚಿವೆ ವಿ.ಆರ್. ಶೈಲಜಾ ಚಾಲನೆ ನೀಡಿ, ಶುಭ ಹಾರೈಸಿದರು. ಕ್ರೀಡೆಯಲ್ಲಿ ಸೋಲು– ಗೆಲುವು ಸಹಜ. ಎಲ್ಲರೂ ಕ್ರೀಡಾ ಸ್ಫೂರ್ತಿಯಿಂದ ಪಾಲ್ಗೊಳ್ಳುವಂತೆ ಅವರು ಕರೆ ನೀಡಿದರು.

ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಎಂ.ಬಿ.ಗಪ್ಪಣ್ಣ, ಏಕಲವ್ಯ ಪ್ರಶಸ್ತಿ ಪುರಸ್ಕೃತರಾದ ರಾಷ್ಟ್ರೀಯ ವಾಲಿಬಾಲ್ ಆಟಗಾರ ಟಿ.ವಿ. ರವೀಂದ್ರ ಮುಖ್ಯ ಅತಿಥಿಯಾಗಿದ್ದರು. ಮೈಸೂರು ವಿವಿ ದೈಹಿಕ ಶಿಕ್ಷಣ ನಿರ್ದೇಶಕ ಡಾ.ಸಿ. ವೆಂಕಟೇಶ್, ಉಪ ನಿರ್ದೇಶಕ ಡಾ.ಪಿ.ಕೃಷ್ಣಯ್ಯ ಇದ್ದರು.

ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ ಜಿಲ್ಲೆಗಳ 40 ಕಾಲೇಜುಗಳ 900 ಕ್ರೀಡಾಪಟುಗಳು ಮೂರು ದಿನಗಳ ಈ ಪಂದ್ಯಾವಳಿಯಲ್ಲಿ ಪಾಲ್ಗೊಂಡಿದ್ದಾರೆ. 15 ವಿವಿಧ ಆಟೋಟಗಳು ನಡೆಯಲಿವೆ.

ಜು.21 ರಂದು ಮಧ್ಯಾಹ್ನ 3ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಪರೀಕ್ಷಾಂಗ ಕುಲಸಚಿವ ಪ್ರೊ.ಕೆ.ಎಂ. ಮಹದೇವನ್ ಬಹುಮಾನಗಳನ್ನು ವಿತರಿಸುವರು. ಸಿಂಡಿಕೇಟ್ ಸದಸ್ಯೆ ಡಾ.ಚೈತ್ರಾ ನಾರಾಯಣ್, ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮುಖ್ಯ ಅತಿಥಿಗಳಾಗಿರುವರು.

ಬ್ಯೂಟಿಪಾರ್ಲರ್ ತರಬೇತಿ ಸಮಾರೋಪ ಸಮಾರಂಭ



ಮೈಸೂರು, ಜು.19– ಮೈಸೂರಿನ ರುಡ್‌ಸೆಟ್ ಸಂಸ್ಥೆ ವತಿಯಿಂದ ನಡೆದ ಬ್ಯೂಟಿ ಪಾರ್ಲರ್ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭವನ್ನು ಸಂಸ್ಥೆಯ ಆವರಣದಲ್ಲಿ ಆಯೋಜಿಸಲಾಗಿತ್ತು, ಮುಖ್ಯ ಅತಿಥಿಗಳಾಗಿ ರಾಜ್ಯಮಟ್ಟದ ಹಿರಿಯ ಸಂಪನ್ಮೂಲ ವ್ಯಕ್ತಿ ರಾಮನುಜ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು ಹಾಗೂ ಶಿಬಿರಾರ್ಥಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ಬದುಕು ಜಟಕಾಬಂಡಿ ವಿಧಿ ಅದರ ಸಾಹೇಬ ಅಲ್ಲ. ನಾವೇ ಅದರ ಸಾಹೇಬರು ಎಂದು ಅಭಿಪ್ರಾಯಪಟ್ಟರು.

ಬದುಕಲು ಕಲಿಯಿರಿ, ಪ್ರತಿ ಬಾರಿ ಕೆಳಗೆ ಬಿದ್ದಾಗಲೂ ಮೇಲೇಳುವ ಛಲದ ಮನೋಭಾವವನ್ನು ರೂಢಿಸಿಕೊಳ್ಳಿರಿ. ನಮ್ಮ ಮನಸ್ಸಿಗಿಂತ ದೊಡ್ಡ ಗುರು ಮತ್ತೊಬ್ಬರಿಲ್ಲ. ನಮ್ಮ ಬಗ್ಗೆ ನಮಗೆ ಹೆಮ್ಮೆ ಇರಬೇಕು ಕೀಳರಿಮೆ ಇರಬಾರದು. ಬ್ಯೂಟಿಪಾರ್ಲರ್ ಕ್ಷೇತ್ರದಲ್ಲಿನ ಸ್ವಉದ್ಯೋಗದಿಂದ ಉತ್ತಮ ಲಾಭವನ್ನು ಪಡೆದು ಒಳ್ಳೆಯ ಜೀವನವನ್ನು ರೂಪಿಸಿಕೊಳ್ಳಬಹುದು. ಅಲ್ಲದೇ ಇದರೊಂದಿಗೆ ಹಲವಾರು ಉಪಕಸುಬುಗಳನ್ನು ಮಾಡಲು ಕೂಡ ಅನುಕೂಲವಾಗುತ್ತದೆ. ನಮ್ಮ ಉದ್ಯಮದ ಏಳಿಗೆಗೆ ನಾಯಕತ್ವದ ಗುಣ ಜವಾಬ್ದಾರಿ ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮುಖ್ಯವಾಗುತ್ತದೆ. ತೆಗೆದುಕೊಂಡ ನಿರ್ಧಾರಗಳು ಬದುಕಿನ ಹಾದಿಯನ್ನು ಸೃಷ್ಟಿಸುತ್ತವೆ. ಉದ್ಯೋಗದಲ್ಲಿ ಏಳಿಗೆಯನ್ನು ಸಾಧಿಸಲು ವೃತ್ತಿಯನ್ನು ಪ್ರೀತಿಸಿ, ವಿಶ್ವಾಸವಿಟ್ಟು ಕಾರ್ಯಪ್ರವೃತ್ತರಾಗಿ ಎಂದು ತಿಳಿ ಹೇಳಿದರು.

ರುಡ್‌ಸೆಟ್ ಸಂಸ್ಥೆಯ ನಿರ್ದೇಶಕರಾದ ಸರಿತಾ ಕೆ.ಎಸ್. ಅಧ್ಯಕ್ಷತೆ ವಹಿಸಿ ಮಾತನಾಡಿ, ನಾವುಗಳು ಯಾವ ಕೆಲಸ ಏನು ಮಾಡುತ್ತೀವಿ ಅನ್ನುವುದಕ್ಕಿಂತ ಮಾಡುವ ಕೆಲಸವನ್ನು ಹೇಗೆ ವಿಭಿನ್ನವಾಗಿ ಮಾಡುತ್ತೇವೆ ಎಂಬುದು ಮುಖ್ಯವಾಗುತ್ತದೆ. ತರಬೇತಿ ಅವಧಿಯಲ್ಲಿ ಕಲಿತ ಜ್ಞಾನ ಮತ್ತು ಕೌಶಲ್ಯವನ್ನು ಜೀವನದಲ್ಲಿ ಅಳವಡಿಸಿ ಯಶಸ್ವಿ ಸ್ವ ಉದ್ಯೋಗಿಗಳಾಗಿ ಎಂದು ಶುಭ ಹಾರೈಸಿದರು. ಸಂಸ್ಥೆಯ ಉಪನ್ಯಾಸಕರಾದ ಆರ್. ಪಾಲ್‌ರಾಜ್, ಲತಾಮಣಿ ಮತ್ತಿತರರು ಹಾಜರಿದ್ದರು.

ಚಾಮುಂಡಿಬೆಟ್ಟದ ಮೆಟ್ಟಿಲು, ತಪ್ಪಲು ಸಂರಕ್ಷಣೆಗೆ ಆದ್ಯತೆ ನೀಡಲು ಪರಿಸರವಾದಿಗಳ ಒತ್ತಾಯ





ಮೈಸೂರು, ಜು.19(ಎಸ್‌ಪಿಎನ್)– ನಾಡ ಅಧಿದೇವತೆ ಚಾಮುಂಡೇಶ್ವರಿ ದರ್ಶನ ಪಡೆಯಲು ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಚಾಮುಂಡಿ ಬೆಟ್ಟವನ್ನು ಮೆಟ್ಟಿಲುಗಳ ಮೂಲಕ ಹತ್ತಿ ತಮ್ಮ ಭಕ್ತಿ ಸಮರ್ಪಣೆ ಮಾಡುವವರ ಸಂಖ್ಯೆ ಕೂಡ ಲಕ್ಷಗಳಲ್ಲಿ ಇದೆ. ಆದರೆ ಚಾಮುಂಡಿಬೆಟ್ಟ ಹಾಗೂ ಸುತ್ತಮುತ್ತಲ ಪರಿಸರ ಸಂರಕ್ಷಣೆ ಮಾಡುವವರ ಸಂಖ್ಯೆ ಮಾತ್ರ ಕಡಿಮೆ.

ಆಷಾಢ ಮಾಸದ ಶುಕ್ರವಾರಗಳು, ಪ್ರತಿ ಮಂಗಳವಾರ, ಶುಕ್ರವಾರ, ವಾರಾಂತ್ಯ ದಿನಗಳಲ್ಲಿ ಗೃಹಿಣಿಯರು, ಯುವತಿಯರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ 1001 ಮೆಟ್ಟಿಲುಗಳನ್ನು ಹತ್ತಿ ಚಾಮುಂಡೇಶ್ವರಿ ದೇವಿಗೆ ಸೇವೆ ಸಲ್ಲಿಸುತ್ತಿದ್ದಾರೆ. ಕೆಲವರು ಪ್ರತಿ ಮೆಟ್ಟಿಲುಗಳಿಗೂ ಅರಿಶಿನ–ಕುಂಕುಮ ಹಚ್ಚಿ ಚಾಮುಂಡಿಬೆಟ್ಟದ ಹಾದಿಯನ್ನು 'ಕೆಂಪು ಹಾಸು' ಎನ್ನುವ ರೀತಿಯಲ್ಲಿ ಮಾಡುತ್ತಿದ್ದಾರೆ. ಈ ರೀತಿ ಮಾಡುತ್ತಿರುವುದರಿಂದ ಪರಿಸರ ನಾಶವಾಗುತ್ತಿದೆ ಎಂದು ಪರಿಸರವಾದಿಗಳು, ವಾಯು ವಿಹಾರಿಗಳು ದೂರಿದ್ದಾರೆ.

ಆಷಾಢಮಾಸ, ಶ್ರಾವಣ ಮಾಸ ಹಾಗೂ ಇತರೆ ಸಂದರ್ಭದಲ್ಲಿ ನಾಡಿನ ಅಧಿದೇವತೆ ಶ್ರೀ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ, ವ್ರತ ನೆರವೇರಿಸಿ ಸಾವಿರಾರು ಮಂದಿ ಚಾಮುಂಡಿಬೆಟ್ಟಕ್ಕೆ ಆಗಮಿಸಿ ತಮ್ಮ ಭಕ್ತಿ ಸಮರ್ಪಣೆ ಮಾಡುತ್ತಾರೆ. ಆಷಾಢ ಮಾಸದ ಆರಂಭಕ್ಕೂ ಮುನ್ನ 2–3 ದಿನಗಳ ಮುಂಚೆಯಿಂದಲೇ ಸಂಘ–ಸಂಸ್ಥೆಗಳ ಕಾರ್ಯಕರ್ತರು ಮೆಟ್ಟಿಲುಗಳನ್ನು ಸ್ವಚ್ಛಗೊಳಿಸಿ ಭಕ್ತರು ಸುಗಮವಾಗಿ ಸಾಗಲು ಅನುವು ಮಾಡಿಕೊಡುತ್ತಾರೆ. ಇನ್ನು ಕೆಲವರು ಮೆಟ್ಟಿಲುಗಳ ಅಕ್ಕ–ಪಕ್ಕ ಇರುವ ಸಣ್ಣಪುಟ್ಟ ಗುಡಿಗಳಿಗೂ ಸುಣ್ಣಬಣ್ಣ ಬಳಿದು ಸ್ವಚ್ಛಗೊಳಿಸುವ ಕಾರ್ಯವನ್ನು ಹಮ್ಮಿಕೊಳ್ಳುತ್ತಾರೆ.

ಪ್ರಯೋಜನವಾಗಿಲ್ಲ: ಪರಿಸರವಾದಿಗಳು, ವಾಯುವಿಹಾರಿಗಳ ಒತ್ತಡಕ್ಕೆ ಮಣಿದಿರುವ ಜಿಲ್ಲಾಡಳಿತ ಕೆಲವು ವರ್ಷಗಳ ಹಿಂದೆಯೇ ಸುತ್ತೋಲೆ ಹೊರಡಿಸಿತ್ತು. ರಾಸಾಯನಿಕಯುಕ್ತ ಅರಿಶಿನ–ಕುಂಕುಮ ಬಳಸುವಂತಿಲ್ಲ. ಚಾಮುಂಡಿಬೆಟ್ಟದಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಮಾರುವುದು/ ಬಳಸುವುದನ್ನು ಸಂಪೂರ್ಣ ನಿಷೇಧಿಸಲಾಗಿದೆ. ತೆಂಗಿನಕಾಯಿಗಳನ್ನು ಭಕ್ತರು ನಿಗದಿತ ಸ್ಥಳಗಳಲ್ಲೇ ಒಡೆಯಬೇಕು. ಕಸವನ್ನು ನಿಗದಿತ ಕಸದ ಬುಟ್ಟಿಯಲ್ಲಿ ಹಾಕಬೇಕು. ಬೆಟ್ಟದ ಪ್ರದೇಶದಲ್ಲಿ ಕಸ ಹಾಕುವುದು ಅಪರಾಧ. ಅಂತಹ ಅಕ್ರಮ ಕೃತ್ಯಗಳಲ್ಲಿ ಭಾಗಿಯಾದವರಿಗೆ ದಂಡ ಶುಲ್ಕ ವಿಧಿಸಲಾಗುವುದು ಎಂದು ತಿಳಿಸಿತ್ತು. ಜಾಗೃತಿ ಮೂಡಿಸುವ ನಾಮಫಲಕ ಅಳವಡಿಸಿದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದು ಕೆಲ ಪರಿಸರವಾದಿಗಳು 'ಮೈಸೂರು ಮಿತ್ರ'ನ ಬಳಿ ಅಲವತ್ತುಕೊಂಡಿದ್ದಾರೆ.

ಆಷಾಢದ ಮೊದಲ ಶುಕ್ರವಾರದಿಂದ ಕಡೆಯ ಶುಕ್ರವಾರದವರೆಗೂ ಭಕ್ತರು ಪ್ರತಿ ಮೆಟ್ಟಿಲುಗಳಿಗೂ ಅರಿಶಿನ, ಕುಂಕುಮ ಹಚ್ಚಿ ಸಾಗುತ್ತಾರೆ. ಕೆಲವರು ಪ್ರತಿ ಮೆಟ್ಟಿಲುಗಳ ಮೇಲೆ ತೆಂಗಿನಕಾಯಿ ಒಡೆದು ಸಾಗುತ್ತಾರೆ. ಬೆರಳೆಣಿಕೆಯಷ್ಟು ಜನರು ಇದನ್ನು ವಿರೋಧಿಸಿ ಪರಿಸರಕ್ಕೆ ಹಾನಿಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಆದರೆ ಅದನ್ನು ತಡೆಯಲು ಮಾತ್ರ ಯಾರೂ ಮುಂದೆ ಬರುವುದಿಲ್ಲ.

ಬಹುತೇಕರು ಅವರ ನಂಬಿಕೆಗೆ ನಾವೇಕೆ ಚ್ಯುತಿ ತರಬೇಕು ಎಂದು ಸಾಗುತ್ತಾರೆ. ಆಷಾಢ ಮುಗಿದ ಮೇಲೆ ಕೆಲವು ಸಂಘ ಸಂಸ್ಥೆಗಳು 1001 ಮೆಟ್ಟಿಲುಗಳನ್ನು ತೊಳೆದು ಯಥಾ ಸ್ಥಿತಿಗೆ ತರುವ ಕಾರ್ಯದಲ್ಲಿ ನಿರತವಾಗಿವೆ. ಸಾವಿರಾರು ಭಕ್ತರು ಬರಿಗಾಲಿನಲ್ಲಿ ಮೆಟ್ಟಿಲುಗಳನ್ನು ಹತ್ತುವುದರಿಂದ ಚರ್ಮ ರೋಗಗಳು ಬರುವ ಸಾಧ್ಯತೆ ಇರುತ್ತದೆ. ನೈಸರ್ಗಿಕ ಅರಿಶಿನ–ಕುಂಕುಮಗಳನ್ನು ಹಚ್ಚುವುದು ಸೂಕ್ತ ಎಂಬ ಮಾತು ಗೃಹಿಣಿಯರಿಂದಲೇ ಕೇಳಿ ಬರುತ್ತದೆ. ಇದಕ್ಕೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂಬ ಸಲಹೆ ಕೇಳಿ ಬಂದಿದೆ. ಆದರೆ, ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಮುಂದಾಗುತ್ತಿಲ್ಲ ಎಂಬ ದೂರುಗಳು ಇವೆ. ಭಕ್ತಿ ಸಮರ್ಪಣೆಗೆ ಪರ್ಯಾಯ ಮಾರ್ಗವನ್ನು ಜಿಲ್ಲಾಡಳಿತ ಹುಡುಕಬೇಕು ಎಂದು ಆಗ್ರಹಿಸಿದ್ದಾರೆ.

ರಾಶಿರಾಶಿ ಕುಂಕುಮ: ಆಷಾಢ ಮಾಸದಲ್ಲಿ ಮೆಟ್ಟಿಲಿನ ಮೇಲೆ ಹಾಗೂ ದೇವಸ್ಥಾನದ ಸುತ್ತಮುತ್ತ ಹಾಕಿರುವ ಅರಿಸಿನ–ಕುಂಕುಮ ಸ್ವಚ್ಛಗೊಳಿಸಿದರೆ ರಾಶಿರಾಶಿ ಕುಂಕುಮ ಶೇಖರಣೆಯಾಗುತ್ತದೆ. ಈ ಜಾಗದಲ್ಲಿ ಜೋರು ಮಳೆ ಬಂದರೆ, ಮೆಟ್ಟಿಲು ಜಾರುತ್ತದೆ. ಮಳೆ ನೀರಿನ ಜತೆ ರಾಸಾಯನಿಕಯುಕ್ತ ಅರಿಶಿನ–ಕುಂಕುಮ ಭೂಮಿ ಸೇರುತ್ತಿದೆ. ಇದರಿಂದ ಪ್ರಾಣಿ–ಪಕ್ಷಿ ಹಾಗೂ ಪ್ರಕೃತಿ ಸಂಪತ್ತು ಹಾಳಾಗುತ್ತಿದೆ. ಇದರ ಬಗ್ಗೆ ಗಮನಹರಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರಿಗೆ ಮನವಿ ಮಾಡಲಾಗಿದೆ ಎಂದು ಮೈಸೂರು ಗ್ರಾಹಕರ ಪರಿಷತ್ ಕಾರ್ಯಾಧ್ಯಕ್ಷೆ ಹಾಗೂ ಮಹಿಳಾ ಚಿಂತಕಿ ಶೋಭಾ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರತಿ ಆಷಾಢ ಶುಕ್ರವಾರ ಹಾಗೂ ಪ್ರತಿ ತಿಂಗಳ ಶುಕ್ರವಾರದಂದು ಮೆಟ್ಟಿಲು ಮೂಲಕ ಚಾಮುಂಡಿಬೆಟ್ಟ ಹತ್ತಿ ದೇವಿಗೆ ಕುಟುಂಬ ಸಮೇತ ಪೂಜೆ ಸಲ್ಲಿಸುತ್ತೇನೆ. ಈ ವೇಳೆ ಕೆಲ ಗೃಹಿಣಿಯರು, ಯುವತಿಯರು ಮೆಟ್ಟಿಲುಗಳಿಗೆ ಅರಿಶಿನ–ಕುಂಕುಮ ಹಚ್ಚಿ ಹೋಗುತ್ತಾರೆ. ಆದರೆ, ಬೇರೆಯವರು ಇದನ್ನು ತುಳಿದುಕೊಂಡು ಮೆಟ್ಟಿಲು ಹತ್ತುತ್ತಾರೆ. ಇದು ಕೆಲವರ ಮನಸ್ಸಿಗೆ ಕಸಿವಿಸಿಯಾಗಬಹುದು. ಮಳೆ ಬಿದ್ದಾಗ ಮೆಟ್ಟಿಲು ಹತ್ತುವವರು ಬಿದ್ದು ಗಾಯಗೊಂಡ ಪ್ರಸಂಗವೂ ಇದೆ. ಅರಿಶಿನ–ಕುಂಕುಮ ಹಚ್ಚುವ ಕಾರ್ಯಕ್ಕೆ ಪರ್ಯಾಯ ವ್ಯವಸ್ಥೆಯನ್ನು ಜಿಲ್ಲಾಡಳಿತ ಮಾಡಬೇಕು.

– ಬಸವರಾಜು, ಅಂತಾರಾಷ್ಟ್ರೀಯ ಕ್ರೀಡಾಪಟು

ಚಾಮುಂಡಿಬೆಟ್ಟದ ಸುತ್ತಮುತ್ತ ಪರಿಸರಕ್ಕೆ ಯಾವುದೇ ರೀತಿಯಲ್ಲೂ ಹಾನಿಮಾಡದೇ ಕಾಪಾಡಿಕೊಳ್ಳುವ ಜವಾಬ್ದಾರಿ ಇಂದಿನ ಯುವ ಪೀಳಿಗೆಯ ಮೇಲಿದೆ. ಚಾಮುಂಡಿಬೆಟ್ಟದ ಅಭಿವೃದ್ಧಿ ಪರಿಸರಕ್ಕಾಗುವ ಹಾನಿ ಬಗ್ಗೆಯೂ ಸಾಮಾನ್ಯ ಜನರಲ್ಲಿ ಜಿಲ್ಲಾಡಳಿತ ಜಾಗೃತಿ ಮೂಡಿಸಬೇಕು. ಕಳೆದ 30 ವರ್ಷಗಳಿಂದ ಈ ಕುರಿತು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸುತ್ತ ಬರುತ್ತಿದ್ದೇವೆ. ಆದರೆ, ಯಾವುದೇ ಪ್ರಯೋಜನವಾಗಿಲ್ಲ. ಯುವ ಪೀಳಿಗೆಯಾದರೂ ಬಗ್ಗೆ ಗಮನಹರಿಸಿ, ಚಾಮುಂಡಿಬೆಟ್ಟ ಹಾಗೂ ಸುತ್ತಮುತ್ತಲ ಪರಿಸರ ಸಂರಕ್ಷಿಸಲು ಹೋರಾಟ ಕೈಗೊಳ್ಳಬೇಕು.

–ಬಾಮಿ ವಿ.ಶಣೈ, ಸದಸ್ಯರು, ಮೈಸೂರು ಗ್ರಾಹಕ ಪರಿಷತ್ತು.

ಸಿಎಂ ತವರಲ್ಲೇ ಅನ್ನಭಾಗ್ಯ ಯೋಜನೆಯಲ್ಲಿ ವಂಚನೆ

ಆಹಾರ ಇಲಾಖೆ ಅಧಿಕಾರಿಗಳ ಭೇಟಿ, ಗ್ರಾಮಸ್ಥರ ಸಮ್ಮುಖದಲ್ಲಿ ಪರಿಶೀಲನೆ, ಮಾಹಿತಿ ಸಂಗ್ರಹ



- ಅಂತ್ಯೋದಯ ಸ್ಕೀಂನಲ್ಲಿ 35 ಕೆಜಿ ಪಡಿತರದ ಬದಲು 6 ಕೆಜಿ ಅಕ್ಕಿ ವಿತರಣೆ
- ನ್ಯಾಯಬೆಲೆ ಅಂಗಡಿ ವಿರುದ್ಧ ಕ್ರಮಕ್ಕೆ ಶಿಫಾರಸು
- ಸರಗೂರು ಬಳಿ ಹಲವಾರು ವರ್ಷಗಳ ಮೋಸ ಬಯಲು
- ವಂಚನೆಯಲ್ಲಿ ಆಹಾರ ಇಲಾಖೆ ಅಧಿಕಾರಿಗಳು ಭಾಗಿಯಾಗಿರುವ ಆರೋಪ

ಸರಗೂರು, ಜು.19– ಮುಖ್ಯಮಂತ್ರಿಗಳ ಕನಸಿನ ಯೋಜನೆಯಾದ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳಿಗೆ ಸಮರ್ಪಕವಾಗಿ ಪಡಿತರ ವಿತರಿಸದೆ ವಂಚಿಸುತ್ತಿರುವ ಪ್ರಕರಣ ಅವರ ತವರು ಮೈಸೂರು ಜಿಲ್ಲೆಯಲ್ಲಿ ಬೆಳಕಿಗೆ ಬಂದಿದ್ದು, ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿ ಮಾಹಿತಿ ಸಂಗ್ರಹಿಸಿದ್ದಾರೆ.

ಸರಗೂರು ತಾಲೂಕಿನ ಲಂಕೆ ಗ್ರಾಮದಲ್ಲಿರುವ ರುಕ್ಮಿಣಿ ಮಾಲೀಕತ್ವದ ಅಂಗಡಿ ಸಂಖ್ಯೆ 76, ಕೇಂದ್ರದ ಸಂಖ್ಯೆ 14413ರ ನ್ಯಾಯಬೆಲೆ ಅಂಗಡಿಯಲ್ಲಿ ಸುಮಾರು ಹತ್ತಾರು ವರ್ಷಗಳಿಂದಲೂ ಪಡಿತರ ವಿತರಣೆಯಲ್ಲಿ ಮೋಸ ಮಾಡಲಾಗುತ್ತಿದೆ ಎಂದು ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಅಧಿಕಾರಿಗಳಾದ ಭಾರತಿ, ಶಶಿಧರ ನಾಯಕ, ವೇದಮೂರ್ತಿ ಅವರುಗಳು ಸ್ಥಳಕ್ಕೆ ಭೇಟಿ ನೀಡಿ, ಗ್ರಾಮಸ್ಥರ ಸಮ್ಮುಖದಲ್ಲಿ ಪರಿಶೀಲನೆ ನಡೆಸಿದರು. ಜತೆಗೆ ಫಲಾನುಭವಿಗಳಿಂದ ಮಾಹಿತಿ ಕಲೆ ಹಾಕಿದರು.

ಈ ವೇಳೆ ಗ್ರಾಹಕರು ನ್ಯಾಯಬೆಲೆ ಅಂಗಡಿ ಮಾಲೀಕರು ಆರಂಭದಿಂದಲೂ ಮೋಸ ಮಾಡುತ್ತಲೇ ಬಂದಿದ್ದಾರೆ. ಅಂತ್ಯೋದಯ ಪಡಿತರ ಕಾರ್ಡ್‌ಗಳಿಗೆ ಬಿಪಿಎಲ್ ಕಾರ್ಡ್‌ಗಳ ಮಾದರಿಯಲ್ಲಿಯೇ ಪಡಿತರ ವಿತರಿಸುವ ಮೂಲಕ ವಂಚಿಸುತ್ತಿದ್ದಾರೆ ಎಂದು ಅಧಿಕಾರಿಗಳಿಗೆ ದೂರಿದರು.

ಅಂತ್ಯೋದಯದ ಪಡಿತರ ನೀಡಿ: 2019 ರಿಂದಲೂ ಅಂತ್ಯೋದಯ ಪಡಿತರ ಕಾರ್ಡ್‌ಗಳಿಗೆ ತಲಾ 35 ಕೆ.ಜಿ. ಪಡಿತರ ವಿತರಿಸಬೇಕಿತ್ತು. ಆದರೆ, ಬಿಪಿಎಲ್ ಕಾರ್ಡ್‌ಗಳಿಗೆ ನೀಡುವಂತೆ ತಲಾ 6 ಕೆ.ಜಿ. ಪಡಿತರ ವಿತರಿಸುತ್ತಿದ್ದಾರೆ. ಹಾಗಾದರೆ ನ್ಯಾಯಬೆಲೆ ಅಂಗಡಿಯಲ್ಲಿ ಇನ್ನುಳಿದ 29 ಕೆ.ಜಿ. ಪಡಿತರ ಎಲ್ಲಿಗೆ ಹೋಯಿತು. ಒಂದು ಕಾರ್ಡ್‌ನಲ್ಲಿ 4, 5 ಮಂದಿ ಕುಟುಂಬದ ಸದಸ್ಯರಿದ್ದಾರೆ. ಹೀಗೆ ನ್ಯಾಯಬೆಲೆ ಕೇಂದ್ರದಲ್ಲಿ 100 ಕಾರ್ಡ್‌ಗಳಿವೆ 5 ವರ್ಷದ ಪಡಿತರ ಎಲ್ಲಿಗೆ ಹೋಯಿತು? ಅಧಿಕಾರಿಗಳು ಕೂಡಲೇ ಇದಕ್ಕೆ ಉತ್ತರ ನೀಡಬೇಕು ಎಂದು ಗ್ರಾಮಸ್ಥರು, ಪಡಿತರದಾರರು ಒತ್ತಾಯಿಸಿದರು.

ಅಧಿಕಾರಿಗಳೂ ಶಾಮೀಲು: ನ್ಯಾಯಬೆಲೆ ಅಂಗಡಿಯಲ್ಲಿ ಅಂತ್ಯೋದಯ ಪಡಿತರ ಚೀಟಿದಾರರಿಗೆ 5 ವರ್ಷದಿಂದ ವಿತರಿಸದೇ ಮೋಸ ಮಾಡಲಾದ ಪಡಿತರ ಅಂಗಡಿಯಲ್ಲಿ ದಾಸ್ತಾನು ಇರಬೇಕು. ಆದರೆ, ಈಗ ಜುಲೈ ತಿಂಗಳ ಪಡಿತರ ಮಾತ್ರ ಇದೆ. ಅಷ್ಟು ವರ್ಷದ್ದೂ ಏನಾಯಿತು. ಇದರ ಹಿಂದೆ ಅಧಿಕಾರಿಗಳೂ ಶಾಮೀಲಾಗಿದ್ದಾರೆ. ಅಧಿಕಾರಿಗಳು ಕುಮ್ಮಕ್ಕು ನೀಡಿ ಕಡು ಬಡವರ ಅಕ್ಕಿ ಉಳ್ಳವರ ಪಾಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಶಾಸಕ ಅನಿಲ್ ಚಿಕ್ಕಮಾದು ಅವರು ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮವಹಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

10 ರೂ.ಗೆ ಪಡಿತರ: ಲಂಕೆ ಗ್ರಾಮದಲ್ಲಿ ಫಲಾನುಭವಿಗಳಿಂದ 10 ರೂ. ವಸೂಲಿ ಮಾಡಿ, ಪಡಿತರ ವಿತರಿಸಲಾಗುತ್ತಿತ್ತು ಇದಕ್ಕೆ ಗ್ರಾಮಸ್ಥರು ಆಕ್ಷೇಪ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ 10 ರೂ. ಪಡೆಯುತ್ತಿದ್ದನ್ನು ಕೈಬಿಡಲಾಯಿತು. ಆದರೆ, ಸದ್ಯ ಇದೇ ಕೇಂದ್ರದಿಂದ ಪಡಿತರ ವಿತರಿಸಲಾಗುತ್ತಿರುವ ಕೂಲ್ಯ ಗ್ರಾಮದಲ್ಲಿ 10 ರೂ. ಪಡೆದು ಪಡಿತರ ವಿತರಿಸುತ್ತಿರುವುದು ಬೆಳಕಿಗೆ ಬಂದಿದೆ 10 ರೂ. ನೀಡಿದರೆ ಮಾತ್ರ ಪಡಿತರ ವಿತರಿಸಲಾಗುವುದು ಎಂದು ಬೆದರಿಕೆ ಹಾಕಲಾಗುತ್ತಿದೆ. ಇದಲ್ಲದೆ ವಯೋವೃದ್ಧರಿಗೆ ಬಯೋಮೆಟ್ರಿಕ್ ಬರುತ್ತಿಲ್ಲ ಎಂದು ನೆಪವೊಡ್ಡಿ ಅವರಿಗೆ ಪಡಿತರ ವಿತರಣೆ ಮಾಡುತ್ತಿಲ್ಲ ಎಂದು ವಯೋವೃದ್ಧರೊಬ್ಬರು ತಮ್ಮ ಅಳಲು ತೋಡಿಕೊಂಡರು.

ಗ್ರಾಮಸ್ಥರ ದೂರು ಆಲಿಸಿದ ಅಧಿಕಾರಿಗಳು ಈ ನ್ಯಾಯಬೆಲೆ ಅಂಗಡಿ ವಿರುದ್ಧ ಕ್ರಮ ಜರುಗಿಸುವಂತೆ ಮೇಲಾಧಿಕಾರಿಗಳಿಗೆ ಶಿಫಾರಸು ಮಾಡಿರುವುದಾಗಿ ತಿಳಿಸಿದ್ದಾರೆ.

ಗ್ರಾಪಂ ಸದಸ್ಯ ಎಲ್.ಎಂ.ರಮೇಶ್ ಮಾತನಾಡಿ, ಫಲಾನುಭವಿಗಳಿಗೆ ಸಮರ್ಪಕವಾಗಿ ಪಡಿತರ ವಿತರಣೆ ಮಾಡುತ್ತಿಲ್ಲ. 2018 ರಲ್ಲಿಯೂ ವಂಚನೆ ಆರೋಪದಡಿ ನ್ಯಾಯ ಬೆಲೆ ಅಂಗಡಿಗೆ ಬೀಗ ಹಾಕಿಸಲಾಗಿತ್ತು. ಹೀಗಾಗಿ ಕೂಡಲೇ ಮೇಲಾಧಿಕಾರಿಗಳು ನ್ಯಾಯಬೆಲೆ ಅಂಗಡಿ ಮಾಲೀಕರನ್ನು ವಜಾಗೊಳಿಸಿ, ಬದಲಿ ಮಾಲೀಕತ್ವದಡಿ ಪಡಿತರ ವಿತರಣೆಗೆ ಕ್ರಮವಹಿಸಬೇಕು. ತಪ್ಪಿದ್ದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದ್ದಾರೆ.

ಹೊಲದಲ್ಲಿ ಬೆಳೆದಿದ್ದ ಶುಂಠಿಯನ್ನೂ ಬಿಡದ ಕಳ್ಳರು

ಹುಣಸೂರು ಬಳಿ 5 ಲಕ್ಷ ರೂ. ಮೌಲ್ಯದ ಶುಂಠಿ ಕದ್ದೊಯ್ದರು



ಹುಣಸೂರು, ಜು.19– ಮನೆ–ಅಂಗಡಿಗಳಲ್ಲಿ ಕಳ್ಳತನ, ಪಂಪ್‌ಸೆಟ್, ಸ್ಪಿಂಕ್ಲರ್ ಸೆಟ್‌ಗಳನ್ನು ಹೊತ್ತೊಯ್ಯುತ್ತಿದ್ದ ಕಳ್ಳರು, ಇದೀಗ ಜಮೀನಲ್ಲಿ ಬೆಳೆದಿರುವ ಬೆಳೆಯನ್ನೆ ಕಿತ್ತು ಕದ್ದೊಯ್ಯುವ ಹೊಸ ಮಾದರಿಯ ಕಳ್ಳತನಕ್ಕೆ ಇಳಿದಿದ್ದಾರೆ. ಪ್ರಸ್ತುತ ಶುಂಠಿ ಬೆಲೆ ಗಗನಕ್ಕೇರಿರುವುದರಿಂದ ಶುಂಠಿಬೆಳೆ ಮೇಲೂ ಕಳ್ಳರು ಕಣ್ಣು ಹಾಯಿಸಿದ್ದು, ರೈತರು ಕಷ್ಟಪಟ್ಟು ಸಾಲಸೋಲ ಮಾಡಿ ಬೆಳೆದ ಬೆಳೆಯೂ ಕೈಗೆ ದಕ್ಕದಂತಾಗಿದೆ.

ತಾಲೂಕಿನ ಹನಗೋಡು ಹೋಬಳಿಯ ಸಣ್ಣೇನಹಳ್ಳಿ ಚಂದ್ರೇಗೌಡರ ಜಮೀನಿನಲ್ಲಿ ಬೆಳೆದಿದ್ದ ಶುಂಠಿ ಬೆಳೆಯನ್ನು ಕಳ್ಳರು ರಾತ್ರೋರಾತ್ರಿ ಕಿತ್ತು ಕದ್ದೊಯ್ದಿರುವ ಘಟನೆ ಇಂದು ಬೆಳಕಿಗೆ ಬಂದಿದೆ. ತಾಲೂಕಿನ ಚೆನ್ನಸೋಗೆಯ ಪ್ರಸನ್ನಕುಮಾರ್, ಹೊಸಕೋಟೆಯ ಶ್ರೀನಿವಾಸ್, ದೇವೇಂದ್ರ ಸೇರಿದಂತೆ ಮೂವರು ಸಣ್ಣೇನಹಳ್ಳಿಯ ಚಂದ್ರೇಗೌಡ ಮತ್ತಿತರ ರೈತರಿಂದ ಒಟ್ಟು 15ಎಕರೆ ಜಮೀನನ್ನು ಗುತ್ತಿಗೆ ಪಡೆದು ಶುಂಠಿ ಬೆಳೆದಿದ್ದರು. ಶುಂಠಿ ಬೆಳೆಯೂ ಉತ್ತಮವಾಗಿ ಬಂದಿದ್ದು, ಶನಿವಾರ ರಾತ್ರಿ ಯಾರೋ ಕಳ್ಳರು ಸುಮಾರು ಅರ್ಧ ಎಕರೆಯಷ್ಟು ಅಂದರೆ 5 ಲಕ್ಷ ರೂ. ಬೆಲೆ ಬಾಳುವ ಶುಂಠಿ ಬೆಳೆಯನ್ನು ಕಳುವು ಮಾಡಿಕೊಂಡು ಹೋಗಿದ್ದಾರೆ. ಈ ಬಗ್ಗೆ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಕಳ್ಳರ ಪತ್ತೆಗೆ ಪೊಲೀಸರು ಬಲೆ ಬೀಸಿದ್ದಾರೆ.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳ ಎಫೆಕ್ಟ್

ಹೆಚ್.ಡಿ.ಕೋಟೆ ಆಧಾರ್ ಕೇಂದ್ರಗಳಲ್ಲಿ ನೂಕು ನುಗ್ಗಲು

ಹೆಚ್.ಡಿ.ಕೋಟೆ, ಜು.19– ಕಾಂಗ್ರೆಸ್ ಸರ್ಕಾರದ ಗ್ಯಾರಂಟಿಗಳ ಎಫೆಕ್ಟ್ ಈಗ ಆಧಾರ್ ಕಾರ್ಡ್ ನೋಂದಣಿಗೆ ಸಾರ್ವಜನಿಕರು ಮುಗಿ ಬೀಳುವಂತಾಗಿದ್ದು, ಆಧಾರ್ ಲಿಂಕ್ ಕೇಂದ್ರಗಳಲ್ಲಿ ನೂಕು ನುಗ್ಗಲು ಉಂಟಾಗಿದೆ.

ಅನ್ನಭಾಗ್ಯ ಯೋಜನೆ ಮತ್ತು ಬುಧವಾರದಿಂದ ಆರಂಭವಾಗಿರುವ ಗೃಹಲಕ್ಷ್ಮಿ ಯೋಜನೆ ನೋಂದಣಿಗೆ ಆಧಾರ್ ಕಾರ್ಡ್ ಲಿಂಕ್ ಆಗಿರಬೇಕು ಎಂಬ ಹಿನ್ನೆಲೆಯಲ್ಲಿ ಈ ಸ್ಥಿತಿ ನಿರ್ಮಾಣವಾಗಿದ್ದು, ಜನರನ್ನು ನಿಯಂತ್ರಿಸುವುದೇ ತಲೆನೋವಾಗಿ ಪರಿಣಮಿಸಿದೆ.

ಆಧಾರ್ ನೋಂದಣಿ ಕೇಂದ್ರಗಳಾದ ಪಟ್ಟಣದ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಬ್ಯಾಂಕ್ ಆಫ್ ಬರೋಡ ಕೇಂದ್ರಗಳಲ್ಲಿ ಸಾವಿರಾರು ಸಂಖ್ಯೆಯಲ್ಲಿ ಆಧಾರ್ ನೋಂದಣಿ ಹಾಗೂ ಆಧಾರ್‌ಗೆ ದೂರವಾಣಿ ಸಂಖ್ಯೆ ಜೋಡಣೆ ಮಾಡಿಸಲು ಮುಗಿಬಿದ್ದಿರುವುದು ಕಂಡು ಬಂದಿತು.

ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿದ್ದ ಆಧಾರ್ ನೋಂದಣಿ ಕೇಂದ್ರ ಹಲವಾರು ತಿಂಗಳಿಂದ ಬಾಗಿಲು ಮುಚ್ಚಿರುವುದರಿಂದ ಈ ಎರಡು ಬ್ಯಾಂಕುಗಳಲ್ಲಿ ನೋಂದಣಿ ಕೇಂದ್ರಗಳಿಗೆ ಸಾವಿರಾರು ಸಂಖ್ಯೆಯಲ್ಲಿ ಜನರು ಮುಗಿಬೀಳುವಂತಾಗಿದೆ. ಈ ವಿಚಾರ ಅಧಿಕಾರಿಗಳಿಗೆ ತಿಳಿದಿದ್ದರೂ ಪರ್ಯಾಯ ವ್ಯವಸ್ಥೆ ಮಾಡದೆ ಕಣ್ಮುಚ್ಚಿ ಕುಳಿತಿರುವುದೇ ಈ ಅವ್ಯವಸ್ಥೆಗೆ ಕಾರಣವಾಗಿದೆ ಎಂಬ ಆರೋಪಗಳು ಕೇಳಿ ಬರುತ್ತಿವೆ.



ತಾಲೂಕು ಆಡಳಿತ ಸೌಧದಲ್ಲಿರುವ ಆಧಾರ್ ಕೇಂದ್ರವನ್ನು ಕೆಲವು ದಿನಗಳ ಹಿಂದೆ ತಾಂತ್ರಿಕ ಕಾರಣಗಳಿಂದ ಮುಚ್ಚಲಾಗಿತ್ತು. ನಾಳೆ (ಜು.20)ಯಿಂದ ಈ ಕೇಂದ್ರವು ಕಾರ್ಯವನ್ನು ಆರಂಭಿಸಲಿದೆ. ಅಲ್ಲದೇ ಇನ್ನೂ ಹೆಚ್ಚಿನ ಎರಡು ಕೇಂದ್ರವನ್ನು ತೆರೆಯಲು ಮೇಲ್ಮಟ್ಟದ ಅಧಿಕಾರಿಗಳೊಂದಿಗೆ ಚರ್ಚಿಸಲಾಗಿದ್ದು, ಮುಂದಿನ ದಿನಗಳಲ್ಲಿ ಅದನ್ನು ಮಾಡಲಾಗುವುದು. ಸಾರ್ವಜನಿಕರು ಇದರ ಸದುಪಯೋಗಪಡಿಕೊಳ್ಳಬೇಕು.
–ಸಣ್ಣರಾಮಪ್ಪ, ತಹಶೀಲ್ದಾರ್.

ಪಟ್ಟಣದ ವಡ್ಡರಗುಡಿ ನಿವಾಸಿ ಸುಗುಣ ಮಾತನಾಡಿ, ಏಕಕಾಲಕ್ಕೆ ಗೃಹಲಕ್ಷ್ಮಿ ಮತ್ತು ಪಡಿತರ ಯೋಜನೆಯ ಹಣವನ್ನು ಡಿಬಿಟಿ ಮೂಲಕ ಬಿಡುಗಡೆ ಮಾಡುತ್ತಿರುವುದರಿಂದ ಮಹಿಳೆಯರು ಆಧಾರ್ ಲಿಂಕ್ ಮಾಡಲು ಆಧಾರ್ ಕೇಂದ್ರಗಳಿಗೆ ಮುಗಿಬೀಳುತ್ತಿದ್ದಾರೆ. ಇದನ್ನು ಮನಗಂಡು ಮಹಿಳೆಯರಿಗೆ ತೊಂದರೆಯಾಗದ ರೀತಿ ತಾಲೂಕು ಆಡಳಿತ ಆಧಾರ್ ಕೇಂದ್ರವನ್ನು ಸ್ಥಾಪಿಸಬೇಕು, ಕಣ್ಮುಚ್ಚಿ ಕುಳಿತಿರುವ ತಾಲೂಕು ಆಡಳಿತವು ಕಣ್ತೆರೆದು ಇನ್ನಾದರೂ ಕಾರ್ಯೋನ್ಮುಖವಾಗಿ ಕೆಲಸ ಮಾಡಬೇಕು, ಆಧಾರ್ ಕೇಂದ್ರವನ್ನು ಹೆಚ್ಚಿನ ಸಂಖ್ಯೆಯಲ್ಲಿ ತೆರೆಯಬೇಕು ಎಂದು ಒತ್ತಾಯಿಸಿದರು.

ನನೆಗುದಿಗೆ ಬಿದ್ದಿರುವ ತಿ.ನರಸೀಪುರ ಪುರಸಭಾ ಮಳಿಗೆಗಳು

ಅವೈಜ್ಞಾನಿಕ ನಿರ್ಮಾಣ, ನೀರಿಲ್ಲ, ಗಾಳಿ, ಬೆಳಕು ಇಲ್ಲದೆ ಅವ್ಯವಸ್ಥೆ



ತಿ.ನರಸೀಪುರ, ಜು.19– ಪಟ್ಟಣದ ಪುರಸಭಾ ವ್ಯಾಪ್ತಿಯ ಲಿಂಕ್ ರಸ್ತೆಯಲ್ಲಿ ಎಸ್‌ಎಫ್‌ಸಿ ಯೋಜನೆಯಡಿ 1.30 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸಿರುವ 52 ಮಳಿಗೆಗಳು ಸಮರ್ಪಕವಾಗಿ ಬಳಕೆಯಾಗದೇ ನನೆಗುದಿಗೆ ಬಿದ್ದಿದೆ.

ಪಟ್ಟಣದಲ್ಲಿ ಫುಟ್ಪಾತ್ ವ್ಯಾಪಾರಿಗಳು, ತರಕಾರಿ ವ್ಯಾಪಾರಸ್ಥರು ಹಾಗೂ ಮಾಂಸ ಮಾರಾಟಕ್ಕೆ ಮಳಿಗೆಗಳನ್ನು ಕಲ್ಪಿಸುವ ಉದ್ದೇಶದಿಂದ ನಿರ್ಮಿಸಲಾಯಿತಾದರೂ ಬಳಕೆಗೆ ದೊರಕಿಲ್ಲ. ಇಂತಿಷ್ಟು ಬಾಡಿಗೆಯಂತೆ ನೀಡಿ ತರಕಾರಿ ವ್ಯಾಪಾರಸ್ಥರು ಒಂದು ಕಡೆ ವ್ಯಾಪಾರ ಮಾಡುತ್ತಿದ್ದಾರೆ. ಪುರಸಭೆಗೆ ಒಳ್ಳೆ ಆದಾಯ ಬರುವ ಯೋಜನೆಯ ಉದ್ದೇಶದಿಂದ ಕಟ್ಟಡ ನಿರ್ಮಾಣ ಮಾಡಿದ್ದರೆ ಚೆನ್ನಾಗಿತ್ತು. ಆದರೆ ಈ ಕಟ್ಟಡವು ಅವೈಜ್ಞಾನಿಕದಿಂದ ಕೂಡಿದ್ದು, ಇಲ್ಲಿ ಸರಿಯಾದ ನೀರು, ಬೆಳಕು ಹಾಗೂ ಗಾಳಿ ಇಲ್ಲದೇ ಮಾಂಸ ಹಾಗೂ ತರಕಾರಿ ವ್ಯಾಪಾರ ಎರಡನ್ನು ಇಲ್ಲಿಯೆ ಮಾರಾಟ ಮಾಡುವಂತೆ ಹೇಳಿ ಹರಾಜು ಪ್ರಕ್ರಿಯೆ ನಡೆಸಲಾಗಿತ್ತು.

ಇಲ್ಲಿನ ತರಕಾರಿ ವ್ಯಾಪಾರಸ್ಥರು ವ್ಯಾಪಾರ ಮಾಡಲು ಇದು ಸರಿಯಾದ ಜಾಗವಲ್ಲ, ಮಾಂಸ ಮಾರಾಟ ಮಾಡಲು ನೀಡಿದ್ದರೆ ನಮಗೆ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚು ಇನ್ನು ಮಾಂಸ ವ್ಯಾಪಾರ ಮಾಡಲು ಇಲ್ಲಿ ತ್ಯಾಜ್ಯ ಹಾಕಲು ಅನುಕೂಲವಿಲ್ಲ. ಈ ಕಟ್ಟಡವು ಉಪಯೋಗಕ್ಕೆ ಬಾರದಂತೆ ಕೋಟ್ಯಂತರ ರೂ. ಖರ್ಚು ಮಾಡಿ ಕಟ್ಟಿರುವುದರಿಂದ ಯಾವುದೇ ಪ್ರಯೋಜನವಾಗಿಲ್ಲ ಎಂದು ವ್ಯಾಪಾರಿಗಳು ದೂರಿದ್ದಾರೆ.

ಜೊತೆಗೆ ಮಾಂಸ ಹಾಗೂ ತರಕಾರಿ ಎರಡನ್ನು ಒಂದೇ ಕಡೆ ಮಾರಾಟ ಮಾಡುವುದರಿಂದ ತರಕಾರಿ ಕೊಳ್ಳುವವರು ಬರುವುದಿಲ್ಲ. ಹೆಸರಿಗಷ್ಟೇ ಕಟ್ಟಡ ಎಂದು ಹೇಳುತ್ತಾರೆ. ಹಾಗಾಗಿ ಕಟ್ಟಡ ಖಾಲಿ ಬಿದ್ದಿದೆ. ಈ ಬಗ್ಗೆ ಸ್ಥಳೀಯ ಪುರಸಭೆ ಸದಸ್ಯರುಗಳಾಗಲಿ, ಅಧಿಕಾರಿಗಳಾಗಲಿ ಆರು ವರ್ಷಗಳಿಂದ ಯಾರೂ ಕೂಡ ಇದರ ಬಗ್ಗೆ ಕಾಳಜಿ ವಹಿಸಿಲ್ಲ ಎಂದು ದೂರಿದ್ದಾರೆ.

ವ್ಯಾಪಾರಸ್ಥರಿಗೆ ಈ ಮಳಿಗೆಗಳನ್ನು ನೀಡಿದ್ದರೆ ಪುರಸಭೆಗೆ ಒಳ್ಳೆ ಆದಾಯ ಬರುತ್ತಿತ್ತು. ಇದರ ಬಗ್ಗೆ ಯಾರೂ ಕೂಡ ಗಮನ ಹರಿಸಿಲ್ಲ. ವ್ಯಾಪಾರಸ್ಥರು ಎಂದಿನಂತೆ ಫುಟ್ಪಾತ್ ಹಾಗೂ ಪಕ್ಕದಲ್ಲಿರುವ ಮೈದಾನದಲ್ಲಿ ವ್ಯಾಪಾರ ಮಾಡಿಕೊಂಡು ಬರುತ್ತಿದ್ದಾರೆ.
– ಗುರುಪ್ರಸಾದ್, ಸ್ಥಳೀಯ ನಿವಾಸಿ

ಈಗಾಗಲೇ ಇದು ನಮ್ಮ ಗಮನಕ್ಕೆ ಬಂದಿದ್ದು, ತರಕಾರಿ ಮಾರುಕಟ್ಟೆಯನ್ನು ಬಾಡಿಗೆ ಕೊಡಲು ಸ್ಥಳೀಯ ಸದಸ್ಯರುಗಳ ಸಭೆ ಮಾಡಿ ಅದಕ್ಕೆ ಬೇಕಾದಂತ ಮೂಲ ಸೌಕರ್ಯಗಳನ್ನು ವ್ಯವಸ್ಥೆ ಮಾಡಿ ಪುರಸಭೆಗೆ ಆದಾಯ ಬರುವಂತೆ ಯೋಜನೆ ರೂಪಿಸಲು ಕ್ರಮವಹಿಸುತ್ತೇವೆ.
– ವಸಂತಕುಮಾರಿ, ಪುರಸಭಾ ಮುಖ್ಯ ಅಧಿಕಾರಿ

ಈಗಿರುವ ಮಳಿಗೆಗಳು ನಮ್ಮ ತರಕಾರಿ ವ್ಯಾಪಾರಸ್ಥರಿಗೆ ಸಾಕಾಗುವುದಿಲ್ಲ. ಏಕೆಂದರೆ ಅಲ್ಲಿರುವುದು 50 ಮಳಿಗೆಗಳು ಅಷ್ಟೇ. ಆದರೆ ನಾವು ನೂರಕ್ಕೂ ಹೆಚ್ಚು ಮಂದಿ ಇಲ್ಲಿ ವ್ಯಾಪಾರ ಮಾಡುತ್ತಿದ್ದೇವೆ. ಜೊತೆಗೆ ಅದು ನಮಗೆ ಸಾಕಾಗುವುದಿಲ್ಲ. ಪಕ್ಕದಲ್ಲಿ ಇರುವ ಖಾಲಿ ನಿವೇಶನದಲ್ಲಿ ವ್ಯಾಪಾರ ಮಾಡುತ್ತೇವೆ. ಅದಕ್ಕೆ ದಿನವೊಂದಕ್ಕೆ 20 ರೂಗಳನ್ನು ನೆಲ ಬಾಡಿಗೆ ನೀಡಿ ಇಲ್ಲೇ ವ್ಯಾಪಾರ ಮಾಡುತ್ತೇವೆ. ಇನ್ನೇನು ಮಾಡುವುದಕ್ಕೆ ಆಗುವುದಿಲ್ಲ.
– ಸಣ್ಣಪ್ಪ, ತರಕಾರಿ ವ್ಯಾಪಾರಸ್ಥ

ಬಣ್ಣಾರಿ ಕಾರ್ಖಾನೆ ಮುಂದೆ ಕಬ್ಬು ಬೆಳೆಗಾರರ ಪ್ರತಿಭಟನೆ



ಸುತ್ತೂರು, ಜು.19– ರೈತರಿಗೆ ನ್ಯಾಯಯುತ ದರ ನೀಡಬೇಕೆಂದು ಆಗ್ರಹಿಸಿ ರೈತ ಸಂಘಟನೆ ಹಾಗೂ ಕಬ್ಬು ಬೆಳೆಗಾರರ ಸಂಘದ ವತಿಯಿಂದ ನಂಜನಗೂಡು ತಾಲೂಕು ಅಳಗಂಚಿ ಗ್ರಾಮದಲ್ಲಿರುವ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ಮುಂಭಾಗ ಭಾರೀ ಪ್ರತಿಭಟನೆ ನಡೆಸಲಾಯಿತು.

ನಂತರ ಮಾತನಾಡಿದ ರೈತ ಮುಖಂಡರು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದುಡಿಯುವ ರೈತಾಪಿ ವರ್ಗವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದು, ಕಬ್ಬಿಗೆ ಸರಿಯಾದ ವೈಜ್ಞಾನಿಕ ಬೆಲೆಯನ್ನು ನೀಡುತ್ತಿಲ್ಲ, ನಾವು ಪ್ರತಿ ಟನ್ನಿಗೆ 4500 ರೂ. ಕೇಳುತ್ತಿದ್ದೇವೆ. ಆದರೆ ಸ್ವಾಮಿನಾಥನ್ ವರದಿ ಪ್ರಕಾರ ಟನ್ನಿಗೆ 5700 ರೂ. ಕೊಡಬೇಕು, ರಂಗನಾಥನ್ ವರದಿ ಪ್ರಕಾರ ಕಬ್ಬಿನ ಉಪ ಉತ್ಪನ್ನಗಳ ಮಾರಾಟದಿಂದ ಬರುವ ನಿವ್ವಳ ಲಾಭದಲ್ಲಿ ಎಫ್‌ಆರ್‌ಪಿಯಲ್ಲಿ ಶೇ.70 ರಷ್ಟು ರೈತರಿಗೆ ಹಾಗೂ ಶೇ.30 ರಷ್ಟು ಕಾರ್ಖಾನೆಗೆ ಕೊಡಬೇಕು ಎಂದು ವರದಿ ನೀಡಿದ್ದರು, ಆ ವರದಿ ಅನ್ವಯ ಬಸವರಾಜ ಬೊಮ್ಮಾಯಿರವರ ಸರ್ಕಾರ ಕಬ್ಬು ಬೆಳೆಗಾರರ ಕಣ್ಣೊರೆಸಲು 150 ರೂ. ಕೊಡಬೇಕೆಂದು ಆದೇಶ ನೀಡಿತು, ಆದರೆ ಕಾರ್ಖಾನೆಗಳು ಆ ಆದೇಶಕ್ಕೂ ನ್ಯಾಯಾಲಯದಿಂದ ತಡೆ ತಂದಿವೆ ಎಂದರು.

ಈ ಕೂಡಲೇ ತಡೆಯಾಜ್ಞೆಯನ್ನು ತೆರವುಗೊಳಿಸಿ ರೈತರಿಗೆ ಕೊಡಬೇಕಾದ ಹಣವನ್ನು ಪಾವತಿಸಬೇಕು ಎಂದು ಆಗ್ರಹಿಸಿದ ರೈತರು ಆಡಳಿತ ಮಂಡಳಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.


ಶ್ರೀಮತಿ ನಂಜಮ್ಮ ನಿಧನ



ನಂಜನಗೂಡು, ಜು.19– ತಾಲೂಕಿನ ಅಡಕನಹಳ್ಳಿಹುಂಡಿ ಗ್ರಾಮದ ನಿವಾಸಿ ಮತ್ತು ಲೇಟ್ ಸಿರಿಗಯ್ಯ ಅವರ ಪತ್ನಿ ಶ್ರೀಮತಿ ನಂಜಮ್ಮ(80) ಅವರು ಅನಾರೋಗ್ಯದಿಂದ ಮಂಗಳವಾರ ನಿಧನರಾದರು.

ಮೃತರು ಮಕ್ಕಳಾದ ಮಹದೇವ, ಕಾಳಮ್ಮ, ಚಿಕ್ಕತಾಯಮ್ಮ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯನ್ನು ಮಂಗಳವಾರ ಸಂಜೆ ಅವರ ಜಮೀನಿನಲ್ಲಿ ನೆರವೇರಿಸಲಾಯಿತು.

ಶ್ರೀಮತಿ ವಿನೋದಮ್ಮ



ಬೆಟ್ಟದಪುರ, ಜು.19– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ನಿವಾಸಿ ಖ್ಯಾತ ರಂಗಭೂಮಿ ಕಲಾವಿದ ಬಿ.ಪಿ. ಸದಾನಂದ ಅವರ ಪತ್ನಿ ಶ್ರೀಮತಿ ವಿನೋದಮ್ಮ(67) ಅವರು ಬುಧವಾರ ಬೆಳಗ್ಗೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೈಸೂರಿನ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ದಿವಂಗತರ ಅಂತ್ಯಕ್ರಿಯೆ ನೆರವೇರಿಸಲಾಯಿತು. ದಿವಂಗತರು ಪತಿ ಬಿ.ಪಿ. ಸದಾನಂದ, ಪುತ್ರ ಶಿಕ್ಷಕ ಬಿ.ಎಸ್.ಸಂತೋಷ್, ಪುತ್ರಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿ ಶ್ರೀಮತಿ ಸಹನಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ.

ಹೊಸೂರು ಡೈರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಹೆಚ್.ಡಿ.ಕೋಟೆ: ತಾಲೂಕು ಹೊಸೂರು ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ಅಧ್ಯಕ್ಷರು ಮತ್ತು ನಿರ್ದೇಶಕರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಅಧ್ಯಕ್ಷರಾಗಿ ಮರಿಗಿರಿಗೌಡ, ಉಪಾಧ್ಯಕ್ಷರಾಗಿ ಶಿವರಾಜು, ನಿರ್ದೇಶಕರುಗಳಾದ ಪುಟ್ಟಣ್ಣ, ಮಲ್ಲೇಶ್, ಜವರೇಗೌಡ, ಸೋಮೇಶ್, ಭಾಗ್ಯ, ನೀಲಮ್ಮ, ಕೆ.ಪಿ. ಪವಿತ್ರ, ಚುನಾವಣಾ ಅಧಿಕಾರಿ ಅಶ್ವಿನ್‌ಕುಮಾರ್ ಅವರ ಸಮ್ಮುಖದಲ್ಲಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಇದೇ ಸಂದರ್ಭದಲ್ಲಿ ಅವಿರೋಧವಾಗಿ ಆಯ್ಕೆಯಾದ ಅಧ್ಯಕ್ಷ ಮರಿಗಿರಿಗೌಡ, ಉಪಾಧ್ಯಕ್ಷ ಶಿವರಾಜು, ನಿರ್ದೇಶಕರುಗಳಿಗೆ ಹಾಗೂ ಮೈಮುಲ್ ನಿರ್ದೇಶಕ ಹಿರೇಗೌಡ ಅವರುಗಳನ್ನು ಸನ್ಮಾನಿಸಲಾಯಿತು.

ಈ ವೇಳೆ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನವೀನ್ ಚಂದ್ರ ರಾಜಣ್ಣ ದಾಸಣ್ಣ ನಿಂಗೇಗೌಡ, ಸಿ.ಕೆರಮೇಶ್, ಗಣೇಶ್, ಬಿ.ಪಿ. ನಾಗಣ್ಣ ಸಿದ್ದೇಗೌಡ, ಕೆಎಚ್. ಅನುರಾಜ, ಕೃಷ್ಣ ಶಿವರಾಜ, ಗೋವಿಂದ ಹಾಜರಿದ್ದರು.

ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದ್ದ ಚಿರತೆ ಸೆರೆ

ತಾನೇ ಬೇಟೆಯಾಡಿದ್ದ ಮೇಕೆ ಮಾಂಸ ತಿನ್ನಲು ಬಂದು ಬೋನಿಗೆ ಬಿತ್ತು

ಹುಣಸೂರು, ಜು.19– ಮೇಕೆ ಬೀದಿನಾಯಿಗಳು ಮತ್ತು ಜಾನುವಾರುಗಳ ಮೇಲೆ ದಾಳಿ ನಡೆಸಿ ಭಕ್ಷಿಸಿ ವಡ್ಡಿಮನುಗನಹಳ್ಳಿ ಸುತ್ತಮುತ್ತಲ ಗ್ರಾಮಸ್ಥರಲ್ಲಿ ಆತಂಕವನ್ನು ಸೃಷ್ಟಿಸಿದ್ದ ಚಿರತೆ ಕೊನೆಗೂ ಬೋನಿಗೆ ಬಿದ್ದಿದೆ.

ಹುಣಸೂರು ತಾಲೂಕಿನ ವಡ್ಡಿಮನುಗನಹಳ್ಳಿಯಲ್ಲಿ ಗ್ರಾಮದಲ್ಲಿ ಮೂರು ಮೇಕೆಗಳು ಹಾಗೂ ಹಲವಾರು ಬೀದಿ ನಾಯಿಗಳನ್ನು ಕೊಂದು, ತಿಂದು ಹಾಕಿದ್ದ ಚಿರತೆಯು ಕಳೆದ ಒಂದೂವರೆ ತಿಂಗಳಿನಿಂದ ಗ್ರಾಮಸ್ಥರನ್ನು ಭಯ ಭೀತಗೊಳಿಸಿತ್ತು. ಮೂರು ದಿನಗಳ ಹಿಂದೆ ಗ್ರಾಮದ ಕುಮಾರನಾಯಕರ ಜಮೀನಿನಲ್ಲಿ ಮೇಯಲು ಬಿಟ್ಟಿದ್ದ ಮೇಕೆಯನ್ನು ಕೊಂದು ಹಾಕಿತ್ತು. ಕೊಂದು ಹಾಕಿದ್ದ ಮೇಕೆ ಮಾಂಸವನ್ನು ಬೋನಿನಲ್ಲಿಟ್ಟು ಚಿರತೆ ಸೆರೆಗೆ ಬಲೆ ಬೀಸಲಾಗಿತ್ತು ತಾನೇ ಬೇಟೆಯಾಡಿದ್ದ ಮೇಕೆ ಮಾಂಸತಿನ್ನಲು ಬಂದ ನಾಲ್ಕು ವರ್ಷದ ಹೆಣ್ಣು ಚಿರತೆ ಬೋನಿನಲ್ಲಿ ಬಂಧಿಯಾಗಿದೆ. ತಿಂಗಳ ಹಿಂದೆಯೂ ಈ ಭಾಗದಲ್ಲಿ ಬೋನಿಟ್ಟು ಚಿರತೆ ಸೆರೆಗೆ ಕ್ರಮವಹಿಸಲಾಗಿತ್ತಾದರೂ ಚಿರತೆಯು ಕೆಲವು ದಿನಗಳು ಇತ್ತ ಸುಳಿದಿರಲಿಲ್ಲ. ಮತ್ತೆ ಬೇಟೆಯಾಡಿದ್ದ ಬಗ್ಗೆ ಗ್ರಾಮಸ್ಥರು ಮಾಹಿತಿ ನೀಡಿದ್ದರು. ಎರಡು ದಿನಗಳ ಹಿಂದೆ ಮತ್ತೆ ಬೋನ್ ಇರಿಸಿ ಚಿರತೆ ಸೆರೆಗೆ ಕ್ರಮವಹಿಸಿದ್ದ ಅರಣ್ಯ ಸಿಬ್ಬಂದಿಗಳು ಕೊನೆಗೂ ಬಂಧಿಯಾಗಿಸುವಲ್ಲಿ ಸಫಲರಾಗಿದ್ದಾರೆ. ಬಂಧಿಯಾಗಿದ್ದ ಚಿರತೆಯನ್ನು ನಾಗರಹೊಳೆ ಉದ್ಯಾನದಲ್ಲಿ ಬಿಡಲಾಯಿತು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ.



ಡಿಆರ್‌ಸಿ ಸಿನಿಮಾಸ್
ದೂ : 4240422/4241800

- ಸ್ಕ್ರೀನ್ 1 ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.10.35ಕ್ಕೆ, ಸಂ.4.10ಕ್ಕೆ, ಬಂಪರ್ (ತ): ಮ.1.25ಕ್ಕೆ, ನೀಯತ್ (ಹಿಂ): ರಾ.7ಕ್ಕೆ, ರಾ.9.40ಕ್ಕೆ.
- ಸ್ಕ್ರೀನ್ 2 ಇನ್ಸಿಡಿಯಸ್ ದಿ ರೆಡ್ ಡೋರ್ (ಇಂ): ಬೆ.11.30ಕ್ಕೆ, ರಾ.7.20ಕ್ಕೆ, ರಾ.9.45ಕ್ಕೆ, ನ್ಯಾನೋ ನಾರಾಯಣಪ್ಪ (ಕ): ಮ.1.45ಕ್ಕೆ, ರುದ್ರಾಂಗಿ (ತೆ): ಸಂ.4.30ಕ್ಕೆ.
- ಸ್ಕ್ರೀನ್ 3 ರಾಯರು ಬಂದರು ಮಾವನ ಮನೆಗೆ (ಕ): ಬೆ.10.30ಕ್ಕೆ, ಓ ಸಾತಿಯಾ (ತೆ): ಮ.1.15ಕ್ಕೆ, ರಾ.10ಕ್ಕೆ, ಕಬಡಿ ಬ್ರೋ (ತ): ಸಂ.4ಕ್ಕೆ, 72 ಹೂರೇನ್ (ಹಿಂ): ಸಂ.6.25ಕ್ಕೆ, ರಾ.8.15ಕ್ಕೆ.
- ಸ್ಕ್ರೀನ್ 4 ಮಧುರ ಮನೋಹರ ಮೋಹನ (ಮ): ಬೆ.10.50ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.1.25ಕ್ಕೆ, ರಾ.9.40ಕ್ಕೆ, ಶ್ರೀ ಪ್ರಸನ್ನ ವೆಂಕಟದಾಸರು (ಕ): ಸಂ.4.30ಕ್ಕೆ, ರಾ.7ಕ್ಕೆ.

ಐನಾಕ್ಸ್ ಮೂವೀಸ್
ದೂ : 2533444 / 2433456

- ಸ್ಕ್ರೀನ್ 1 ಸತ್ಯಪ್ರೇಮ್ ಕಿ ಕಥಾ (ಹಿಂ): ಬೆ.9.20ಕ್ಕೆ, ಮ.12.30ಕ್ಕೆ, ಸಂ.3.40ಕ್ಕೆ, ಸಂ.6.50ಕ್ಕೆ, ರಾ.10ಕ್ಕೆ.
- ಸ್ಕ್ರೀನ್ 2 ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಬೆ.9.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಸ್ಪೈ (ತೆ): ಮ.1.10ಕ್ಕೆ, ಸಾಮಜವರಗಮನ (ತೆ): ಸಂ.4.10ಕ್ಕೆ.
- ಸ್ಕ್ರೀನ್ 3 ಸ್ಪೈ (ತೆ): ಬೆ.9.50ಕ್ಕೆ, ರಾ.10.20ಕ್ಕೆ, ಇಂಡಿಯಾನಾ ಜೋನ್ಸ್ ಅಂಡ್ ದಿ ಡಯಲ್ ಆಫ್ ಡೆಸ್ಟಿನಿ (ಇಂ): ಮ.12.45ಕ್ಕೆ, ಬೆಂಗಳೂರು ಬಾಯ್ಸ್ (ಕ): ಸಂ.4ಕ್ಕೆ.
- ಸ್ಕ್ರೀನ್ 4 ಮಾಮನ್ನನ್ (ತ): ಬೆ.10.50ಕ್ಕೆ, ಮ.2.10ಕ್ಕೆ, ಸರ್ಕಸ್ (ತು): ಸಂ.6.10ಕ್ಕೆ, ಸಾಮಜವರಗಮನ (ತೆ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
ಮೊ.ನಂ: 8951357139
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಮಂಡಲ (ಕ): ಮ.2.15ಕ್ಕೆ, 1 ರಾಬರಿ ಕಥೆ (ಕ): ಸಂ.4.50ಕ್ಕೆ, ಚೌಕಾಬಾರ (ಕ): ರಾ.7.50ಕ್ಕೆ, ಕ್ರಿಡ್ 3 (ಇಂ): ಬೆ.11.35ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.8.30ಕ್ಕೆ, ಮ.12ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.10.30ಕ್ಕೆ, ತು ಜೂಥಿ ಮೇನ್ ಮಕ್ಕರ್ (ಹಿಂ): ಬೆ.9.30ಕ್ಕೆ, ಬೆ.11ಕ್ಕೆ, ಮ.1ಕ್ಕೆ, ಮ.2.30ಕ್ಕೆ, ಸಂ.4.30ಕ್ಕೆ, ಸಂ.6ಕ್ಕೆ, ರಾ.8ಕ್ಕೆ, ರಾ.9.30ಕ್ಕೆ, ತುರಮುಖಂ (ಮ): ರಾ.10.30ಕ್ಕೆ, ಅಜಿಲನ್ ಕಿಂಗ್ ಆಫ್ ದಿ ಓಷನ್ (ತ): ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ, ಸ್ಕ್ರೀಮ್ 6 (ಇಂ): ಮ.2.45ಕ್ಕೆ, ರಾ.7.45ಕ್ಕೆ, 65 (ಇಂ): ಮ.12.30ಕ್ಕೆ, ಸಂ.5.30ಕ್ಕೆ, ರಾ.10.30ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಮಹಾವೀರುಡು (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಅಪರೂಪ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
1920 ಹಾರರ್ಸ್ ಆಫ್ ದಿ ಹಾರ್ಟ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಓ ಮನಸೇ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾಮನ್ನಾನ್ (ತ)	4 ಪ್ರದರ್ಶನಗಳು
ರಾಜ್‌ಕಮಲ್	
ಮಹಾವೀರನ್ (ತ)	4 ಪ್ರದರ್ಶನಗಳು
ಸಂಗಂ	
ಮಿಷನ್ ಇಂಪಾಸಿಬಲ್ (ಇ)	4 ಪ್ರದರ್ಶನಗಳು
ಲಿಡೋ	
ಬೇಬಿ (ತೆ)	4 ಪ್ರದರ್ಶನಗಳು
ತಿಬ್ಬಾದೇವಿ	
ರಾವಣಸುರ (ತ)	4 ಪ್ರದರ್ಶನಗಳು
ಪ್ರಭಾ	
ಮಿಷ್ಟರಿ (ಕ)	4 ಪ್ರದರ್ಶನಗಳು

ಮೈಸೂರು ಬೇಸಿಗೆ ರೇಸುಗಳು

1ನೇ ದಿನದ ಎಕ್ಸ್‌ಸ್ಟ್ರ ಡೇ ಗುರುವಾರ 20-7-2023

ಇಂದಿನ ರೇಸಿಗೆ ನಮ್ಮ ಆಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ)

I. ಪಶ್ಚಿಮ ವಾಹಿನಿ ಪ್ಲೇಟ್ ಡಿ2–1400 ಮೀ. ರೇಟೆಡ್ 00 ರಿಂದ 25. ಮ.1.30ಕ್ಕೆ
1. ಡೀಮೆಡ್ 2. ಮಿರಾಕಿ 3. ನಾಟ್ ಸೋ ನಾಟಿ

II. ಪಶ್ಚಿಮ ವಾಹಿನಿ ಪ್ಲೇಟ್ ಡಿ1–1400 ಮೀ. ರೇಟೆಡ್ 00 ರಿಂದ 25. ಮ.2.00ಕ್ಕೆ
1. ದಿ ಸ್ಟ್ರೈಕ್ 2. ಗ್ರೇಟ್ ಹೋಪ್ 3. ಐರನ್ ಕ್ಲಾಡ್

III. ಗಿರಿನಗರ ಪ್ಲೇಟ್–1200 ಮೀ. 3 ವರ್ಷದ (ಟರ್ಮ್ಸ್). ಮ.2.30ಕ್ಕೆ
1. ಬ್ರೈಟೆಸ್ಟ್ ಸ್ಟಾರ್ 2. ನ್ಯಾಚುರಲ್ ಹಂಟರ್ 3. ಸಿಯೋಲ್ ಫಾರ್ ಬುಲೆಟ್

IV. ಬನ್ನೇರ್‌ಘಟ್ಟ ಪ್ಲೇಟ್– 1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಮಾರ್ಚ್ ಟು ವಿಕ್ಟರಿ 2. NRI ಮಿಲೆನಿಯಮ್ 3. ಡಿ ಡಾನ್ ಕಿಂಗ್

V. ಸ್ಕೋನ್ ಸ್ಟೋನ್ ಪ್ಲೇಟ್ ಡಿ1–1200 ಮೀ. ರೇಟೆಡ್ 40 ರಿಂದ 65. ಮ.3.30ಕ್ಕೆ
1. ಕಿಂಗ್ ಆಫ್ ದಿ ಜಂಗಲ್ 2. ಇಂಪಿರಿಯಸ್ 3. ಅಸ್ತಾರ್

VI. ಸ್ಟೀವರ್ಡ್ಸ್ ಟ್ರೋಫಿ–1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಸಂ.4.00ಕ್ಕೆ
1. ಸ್ಮೈಲ್ ಅರೌಂಡ್ 2. ಮೊಘಲ್ 3. ಪರ್ಫೆಕ್ಟ್ ಜಸ್ಟಿಸ್

VII. ಡಯಾಬಾಲಿಕಲ್ ಪ್ಲೇಟ್– 1400 ಮೀ. ರೇಟೆಡ್ 20 ರಿಂದ 45. ಸಂ.4.30ಕ್ಕೆ
1. ದಿ ಗೋಲ್ಡನ್ ಸನ್‌ರೈಸ್ 2. ಅತುಲ್ಯಾ 3. ಫ್ಲಾಮಿಂಗೊಡ್ಯಾಸರ್

VIII. ಸ್ಕೋನ್ ಸ್ಟೋನ್ ಪ್ಲೇಟ್ ಡಿ2–1200 ಮೀ. ರೇಟೆಡ್ 40 ರಿಂದ 65. ಸಂ5.00ಕ್ಕೆ
1. ಪರ್ಫೆಕ್ಟ್ ಇಮ್ಯಾಜಿನೇಷನ್ 2. NRI ಟಚ್ 3. ಪವರ್ ಆಫ್ ಥಿಯಾ

ದಿನದ ಅತ್ಯುತ್ತಮ	ಬ್ರೈಟೆಸ್ಟ್ ಸ್ಟಾರ್
ಡಬ್ಬಲ್	ಡೀಮೆಡ್, ಪರ್ಫೆಕ್ಟ್ ಇಮ್ಯಾಜಿನೇಷನ್
ಜಾಕ್‌ಪಾಟ್	4, 5, 6, 7 ಮತ್ತು 8
ಮಿನಿ ಜಾಕ್‌ಪಾಟ್	5, 6, 7 ಮತ್ತು 8
I ಟ್ರಿಬಲ್	1, 2, ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 8

ಟಿಪ್ ಸ್ಟರ್ ಪಿಜೆಸಿ

ರಸ್ತೆ ಬದಿ ವ್ಯಾಪಾರಿಗಳ ತೆರವು ಕಾರ್ಯಾಚರಣೆ ಮುಂದುವರಿಕೆ

ಪಾಲಿಕೆ, ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚೆ: ಮೇಯರ್

ಮೈಸೂರು, ಜು.19(ಎಂಕೆ)– ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಅರಮನೆ ಸುತ್ತಲೂ ಬೀದಿ ಬದಿ ವ್ಯಾಪಾರಿಗಳನ್ನು ತೆರವುಗೊಳಿಸಲಾಗುತ್ತಿದ್ದು, ಸಯ್ಯಾಜಿರಾವ್ ರಸ್ತೆಯಲ್ಲಿ ತೆರವು ಕಾರ್ಯಾಚರಣೆಗೂ ಮುನ್ನ ಮತ್ತೊಮ್ಮೆ ಪಾಲಿಕೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ ತಿಳಿಸಲಾಗುವುದು. ಇದಕ್ಕೆ ರಸ್ತೆ ಬದಿ ವ್ಯಾಪಾರಿಗಳು ಸಹಕರಿಸಬೇಕು ಎಂದು ಮೇಯರ್ ಶಿವಕುಮಾರ್ ಕೋರಿದರು.

ನಗರಪಾಲಿಕೆಯ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಬೀದಿ ಬದಿ ವ್ಯಾಪಾರಿಗಳು ಹಾಗೂ ಡೇ–ನಲ್ಮ್ ಅಧಿಕಾರಿಗಳೊಂದಿಗೆ ನಡೆದ ಸಭೆಯಲ್ಲಿ ಅರಮನೆ ಸುತ್ತ ಹಾಗೂ ಸಯ್ಯಾಜಿರಾವ್ ರಸ್ತೆಯಲ್ಲಿ ನಿಯಮಾನುಸಾರ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು ಎಂಬ ರಸ್ತೆ ಬದಿ ವ್ಯಾಪಾರಿಗಳ ಮನವಿ ಆಲಿಸಿದ ಬಳಿಕ ಮಾತನಾಡಿದ ಅವರು, ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ತೊಂದರೆಯಾಗುತ್ತಿರುವ ಹಿನ್ನೆಲೆಯಲ್ಲಿ ಅರಮನೆ ಸುತ್ತ ಹಾಗೂ ಸಯ್ಯಾಜಿರಾವ್ ರಸ್ತೆ ಬದಿ ವ್ಯಾಪಾರಿಗಳನ್ನು ತೆರವು ಮಾಡಬೇಕು ಎಂದು ಕಳೆದ ಕೌನ್ಸಿಲ್ ಸಭೆಯಲ್ಲಿ ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಅರಮನೆ ಸುತ್ತ ತೆರವು ಕಾರ್ಯ ನಡೆಯುತ್ತಿದ್ದು, ಸಯ್ಯಾಜಿರಾವ್ ರಸ್ತೆಯಲ್ಲಿ ಕಾರ್ಯಾಚರಣೆ ನಡೆಸುವ ಮುನ್ನ ಪಾಲಿಕೆ ಹಾಗೂ ಪೊಲೀಸ್ ಅಧಿಕಾರಿಗಳೊಂದಿಗೆ ಚರ್ಚಿಸಿ, ವ್ಯಾಪಾರಿಗಳಿಗೂ ಮಾಹಿತಿ ನೀಡಲಾಗುವುದು ಎಂದರು.



ಇದಕ್ಕೂ ಮುನ್ನ ಬೀದಿ ಬದಿ ವ್ಯಾಪಾರಿಗಳ ಸಂಘದ ಬಾಸ್ಕರ್ ರಾಜೇ ಅರಸ್ ಮಾತನಾಡಿ, ಅರಮನೆ ಸುತ್ತ ಹಾಗೂ ಸಯ್ಯಾಜಿರಾವ್ ರಸ್ತೆ ಬದಿಯಲ್ಲಿ ವ್ಯಾಪಾರ ಮಾಡಲು ಅವಕಾಶ ನೀಡಿ, ಈಗಾಗಲೇ ಹಲವರಿಗೆ ಐಡಿ ಕಾರ್ಡ್ ಕೂಡ ನೀಡಲಾಗಿದೆ. ಈಗಿರುವಾಗ ಏಕಾಏಕಿ ತೆರವುಗೊಳಿಸುವುದು ಸರಿಯಲ್ಲ. ಅಲ್ಲದೆ ಬೀದಿ ಬದಿ ವ್ಯಾಪಾರಿಗಳ ಕಾಯಿದೆ ಅನ್ವಯ ಮೊದಲು ವ್ಯಾಪಾರಿಗಳ ಕುಂದು–ಕೊರತೆಗಳ ಬಗ್ಗೆ ಗಮನ ಹರಿಸಿದ ನಂತರ ತೆರವುಗೊಳಿಸುವ ತಿರ್ಮಾನ ತೆಗೆದುಕೊಳ್ಳಬೇಕು. ಇದ್ಯಾವುದನ್ನು ಮಾಡದೆ ತೆರವು ಮಾಡಿ ಎಂದರೆ ಹೇಗೆ ಎಂದು ಪ್ರಶ್ನಿಸಿದರು.

ಇದೇ ವೇಳೆ ಡೇ–ನಲ್ಮ್ ವಿಭಾಗದ ವ್ಯವಸ್ಥಾಪಕ ಭೈರಲಿಂಗಯ್ಯ ಮಾತನಾಡಿ, ಮೈಸೂರು ನಗರದೆಲ್ಲೆಡೆ ಬೀದಿ ಬದಿ ವ್ಯಾಪಾರಕ್ಕಾಗಿಯೇ 22 ಸ್ಥಳ(ರಸ್ತೆಗಳು ಸೇರಿ)ಗಳನ್ನು ಗುರ್ತಿಸಲಾಗಿದೆ. ಹಾಗೆಯೇ ಅರಮನೆ ಸುತ್ತ, ಸಯ್ಯಾಜಿರಾವ್ ರಸ್ತೆ ದೇವರಾಜ ಅರಸು ರಸ್ತೆ ಸೇರಿದಂತೆ 17 ಸ್ಥಳಗಳಲ್ಲಿ ಬೀದಿ ಬದಿ ವ್ಯಾಪಾರ ನಡೆಸುವಂತಿಲ್ಲ ಎಂದು ಪಾಲಿಕೆ ಕೌನ್ಸಿಲ್ ಸಭೆಯಲ್ಲಿಯೇ ತೀರ್ಮಾನಿಸಲಾಗಿತ್ತು. ಹಾಗೆಯೇ ಬೀದಿ ಬದಿ ವ್ಯಾಪಾರಿಗಳು ಬಡತನ ರೇಖೆಗಿಂತ ಕೇಳಗಿರುವವರಾಗಿದ್ದು, ಸ್ಥಳಿಯ ದಾಖಲೆಗಳನ್ನು ಹೊಂದಿರಬೇಕು. ಅದರಂತೆ ಐಡಿ ಕಾರ್ಡ್‌ಗಳನ್ನು ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.

ಪಾಲಿಕೆಯ ನಿರ್ಧಾರವೇ ಅಂತಿಮ: ಸಭೆಯ ಕಡೆಯಲ್ಲಿ ಪಾಲಿಕೆ ಆಯುಕ್ತ ಲಕ್ಷ್ಮಿಕಾಂತ್ ರೆಡ್ಡಿ ಮಾತನಾಡಿ, ಬೀದಿ ಬದಿ ವ್ಯಾಪಾರಕ್ಕೆ ಅವಕಾಶವಿಲ್ಲದ ಸ್ಥಳಗಳಲ್ಲಿಯೂ ಕೆಲವರಿಗೆ ಐಡಿ ಕಾರ್ಡ್ ನೀಡಲಾಗಿದೆ. ಐಡಿ ಕಾರ್ಡ್ ನೀಡಬಾರದಿತ್ತು. ಆದರೂ ವಿತರಣೆಯಾಗಿದೆ. ಬೀದಿ ಬದಿ ವ್ಯಾಪಾರಸ್ಥರಿಗೆ ಅನುಮತಿ ನೀಡಬೇಕೇ, ಬೇಡವೇ ಎಂಬುದು ಪಾಲಿಕೆಯ ಕೌನ್ಸಿಲ್‌ನಲ್ಲಿ ತೆಗೆದುಕೊಳ್ಳುವ ನಿರ್ಧಾರವೇ ಅಂತಿಮವಾಗಿರುತ್ತದೆ. ಕೌನ್ಸಿಲ್ ನಿರ್ಣಯವನ್ನೂ ಮೀರಿ ಐಡಿ ಕಾರ್ಡ್ ನೀಡಿದ್ದರೆ, ಅವುಗಳು ಅಸಿಂಧು ಆಗಲಿವೆ. ಆದ್ದರಿಂದ ಕೌನ್ಸಿಲ್‌ನಲ್ಲಿ ತೆಗೆದುಕೊಂಡ ನಿರ್ಣಯವೇ ಅಂತಿಮ ಎಂದರು.

ಸಭೆಯಲ್ಲಿ ಉಪ ಮೇಯರ್ ಡಾ.ರೂಪ, ಮಾಜಿ ಮೇಯರ್ ಅಯೂಬ್‌ಖಾನ್, ಪಾಲಿಕೆ ಸದಸ್ಯ ಎ.ಯು.ಸುಬ್ಬಯ್ಯ ಮತ್ತಿತರರು ಉಪಸ್ಥಿತರಿದ್ದರು.

ಶರಣ ಸಾಹಿತ್ಯ ಪರಿಷತ್ತಿಗೆ 20 ಲಕ್ಷ ರೂ. ದತ್ತಿ ನೀಡಿದ ಶರಣ ಶಿವಲಿಂಗಯ್ಯ



ಮೈಸೂರು, ಜು.19(ಎಂಕೆ)– ಮೈಸೂರಿನ ಸುತ್ತೂರು ಶಾಖಾ ಮಠಕ್ಕೆ ಭೇಟಿ ನೀಡಿ, ಸುತ್ತೂರು ಶ್ರೀಗಳ ಆಶೀರ್ವಾದ ಪಡೆದ ಮರಿಮಲ್ಲಪ್ಪ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಶಿವಲಿಂಗಯ್ಯ, ಶ್ರೀಗಳ ಸಮ್ಮುಖದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿಗೆ 20 ಲಕ್ಷ ರೂ. ದತ್ತಿ ನೀಡಿದ್ದಾರೆ.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನಿಂದ ನಡೆಯುವ ದತ್ತಿ ಕಾರ್ಯಕ್ರಮದಲ್ಲಿ ಸಾಹಿತ್ಯ, ಸಂಸ್ಕೃತಿಯಲ್ಲಿ ಪಿಹೆಚ್‌ಡಿ ಪಡೆದ ಉತ್ತಮ ಗ್ರಂಥಕ್ಕೆ ಶರಣೆ ಕಮಲಮ್ಮ ಹಾಗೂ ಎ.ಜಿ.ಶಿವಲಿಂಗಯ್ಯ ಅವರ ಹೆಸರಿನಲ್ಲಿ 15 ಸಾವಿರ ರೂ. ನಗದು, ಫಲಕ ಹಾಗೂ ಪ್ರಶಸ್ತಿ ನೀಡಲಾಗುವುದು ಎಂದು ಮೈಸೂರು ನಗರ ಘಟಕದ ಅಧ್ಯಕ್ಷ ಮ.ಗು.ಸದಾನಂದಯ್ಯ ತಿಳಿಸಿದ್ದಾರೆ.

ಈ ವೇಳೆ ಕಾರ್ಯದರ್ಶಿ ಕುಮಾರಸ್ವಾಮಿ, ಸಂಚಾಲಕ ಮುದ್ದು ಮಲ್ಲೇಶ್, ಹಾಸನ ಜಿಲ್ಲಾಧ್ಯಕ್ಷ ಎಂ.ಎನ್.ಕುಮಾರಸ್ವಾಮಿ ಉಪಸ್ಥಿತರಿದ್ದರು.

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ
ವಿ. ವಿಜಯಲಕ್ಷ್ಮಿ
ನಿಧನ: 10.07.2023

ಇವರು ದಿ: 10.07.2023 ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 20.07. 2023 ಗುರುವಾರ ಬೆಳಗ್ಗೆ 11 ರಿಂದ 12.30 ಗಂಟೆಗೆ #121, ಗಣೇಶನಗರ, 'ಎ' ಬ್ಲಾಕ್, 4ನೇ ಕ್ರಾಸ್, ಮೈಸೂರು. ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಕುಟುಂಬವರ್ಗದವರು ಮತ್ತು ಬಂದು ಮಿತ್ರರು
ಭೋಜನ: ಮಧ್ಯಾಹ್ನ 1 ಗಂಟೆಗೆ.

5ನೇ ವರ್ಷದ ಪುಣ್ಯಸ್ಮರಣೆ



ಪಿ.ಶಿವರುದ್ರಪ್ಪ
(ಮಾ॥ ಮಂಜುಳ ಧ್ವನಿ ಮತ್ತು ಬೆಳಕು, ಫರ್ನಿಚರ್ಸ್)
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಮಂಜುಳ ಧ್ವನಿ ಮತ್ತು ಬೆಳಕು, # 100 ಅಡಿ ರಸ್ತೆ, ನೇತಾಜಿ ಸರ್ಕಲ್, ದಟ್ಟಗಳ್ಳಿ ಮತ್ತು ಕುಟುಂಬವರ್ಗದವರು.

ಜು.29, ಕರ್ನಾಟಕ ಭಾರತ್ ಗೌರವ ಕಾಶಿ ದರ್ಶನ 4ನೇ ಟ್ರಿಪ್ ಆರಂಭ

ಬೆಂಗಳೂರು: ಕರ್ನಾಟಕ ರಾಜ್ಯ ಪುಣ್ಯ ಕ್ಷೇತ್ರಗಳಾದ ವಾರಣಾಸಿ, ಅಯೋಧ್ಯೆ ಮತ್ತು ಪ್ರಯಾಗ್–ರಾಜ್ ಕ್ಷೇತ್ರಗಳಿಗೆ ಕಡಿಮೆ ವೆಚ್ಚದಲ್ಲಿ ತೆರಳಲು ಅನುಕೂಲವಾಗುವಂತಹ ರಿಯಾಯಿತಿ ದರದಲ್ಲಿ ಪ್ಯಾಕೇಜ್ ರೂಪಿಸಿ "ಕರ್ನಾಟಕ ಭಾರತ್ ಗೌರವ ಕಾಶಿ ದರ್ಶನ'' ಯೋಜನೆಯನ್ನು IRCTC ಮತ್ತು ಭಾರತೀಯ ರೈಲ್ವೇ ಇಲಾಖೆಯ ಸಹಯೋಗದಲ್ಲಿ ಕೈಗೊಳ್ಳಲಾಗಿದೆ. ಈ ಕುರಿತಾಗಿ ಸರ್ಕಾರ ಪ್ರಕಟಣೆ ಹೊರಡಿಸಿದೆ.

ಈ ಯೋಜನೆಯಡಿ ಪ್ರಯಾಣಿಸುವ ಯಾತ್ರಾರ್ಥಿಗಳಿಗೆ ತಲಾ 20,000 ರೂ. ಪ್ಯಾಕೇಜ್ ನೀಡಲಾಗಿದ್ದು, ತಲಾ 5,000 ರೂ. ಅನ್ನು ರಾಜ್ಯ ಸರ್ಕಾರದ ವತಿಯಿಂದ ಭರಿಸಲಾಗುತ್ತದೆ. ಬಾಕಿ 15,000 ರೂ.ಅನ್ನು ಯಾತ್ರಾರ್ಥಿಗಳು ಪಾವತಿಸಬೇಕು. ಈ ವಿಶೇಷ ರೈಲಿನಲ್ಲಿ ತೆರಳುವ ಯಾತ್ರಾರ್ಥಿಗಳಿಗೆ ಉಪಹಾರ, ಊಟ, ತಂಗುವಿಕೆ, ಸ್ಥಳೀಯ ಸಾರಿಗೆ ಮತ್ತು ಸ್ಥಳೀಯ ವೀಕ್ಷಣೆ ಒಳಗೊಂಡಿದ್ದು, ಇದು ಒಟ್ಟು 07 ದಿನಗಳ ಪ್ರವಾಸವಾಗಿದೆ.

ಕರ್ನಾಟಕ ಭಾರತ್ ಗೌರವ ಕಾಶಿ ದರ್ಶನ ಯೋಜನೆಯಡಿ ಈವರೆಗೂ ಒಟ್ಟು 03 ಟ್ರಿಪ್‌ಗಳನ್ನು ಪೂರೈಸಲಾಗಿದೆ ಸದರಿ ವಿಶೇಷ ರೈಲಿನಲ್ಲಿ ಒಟ್ಟು 1644 ಯಾತ್ರಾರ್ಥಿಗಳು ಯಾತ್ರೆ ಪೂರೈಸಿದ್ದು, ಸದರಿ ಯಾತ್ರಾರ್ಥಿಗಳಿಗೆ ಪ್ರಯಾಣದ ಒಟ್ಟು ಪ್ಯಾಕೇಜ್ ದರ 20,000 ರೂ. ಪೈಕಿ ಸರ್ಕಾರದಿಂದ ತಲಾ 5,000 ರೂ. ಅಂತೆ ಒಟ್ಟು 82.20 ಲಕ್ಷ ರೂ. ಸಹಾಯಧನವನ್ನು ಒದಗಿಸಲಾಗಿದೆ.

ಸದ್ಯ 4ನೇ ಟ್ರಿಪ್ಪಿನ ವಿಶೇಷ ರೈಲು ಜು.29 ರಂದು ಬೆಂಗಳೂರಿನಿಂದ ಹೊರಡಲಿದ್ದು, ಸದರಿ ಯಾತ್ರೆಗೆ ತೆರಳುವ ಯಾತ್ರಾರ್ಥಿಗಳು ಈ ಕಳಕಂಡ ಲಿಂಕ್ ಮೂಲಕ ಅಥವಾ ಐ.ಆರ್.ಸಿ.ಟಿ.ಸಿ ಪೋರ್ಟಲ್ ಮೂಲಕ ತಮ್ಮ ಟಿಕೇಟ್ ಅನ್ನು ಕಾಯ್ದಿರಿಸಿಕೊಳ್ಳಬಹುದು. ಇದೀಗ ಹೊಸದಾಗಿ ಸುಸಜ್ಜಿತ ಐಲೂಃ ಕೋಚ್‌ಗಳನ್ನು ಅಳವಡಿಸಲಾಗಿದ್ದು, ಇದು ಸುಸಜ್ಜಿತವಾದ ಸ್ಥಳದಲ್ಲಿಯೇ ಅಡುಗೆ ತಯಾರು ಮಾಡುವ ಅಡುಗೆ ಮನೆ ಒಳಗೊಂಡಿದೆ. ಹಾಗೂ ಯಾತ್ರಾರ್ಥಿಗಳ ಹಿತ ದೃಷ್ಟಿಯಿಂದ ಇಬ್ಬರು ವೈದ್ಯರು ಸಹ ಪ್ರಯಾಣಿಸಲಿದ್ದಾರೆ. ಈ ಸೌಲಭ್ಯವನ್ನು ರಾಜ್ಯದ ಎಲ್ಲಾ ಭಕ್ತಾದಿಗಳು ಸದುಪಯೋಗ ಪಡಿಸಿಕೊಂಡು, ಶ್ರೀ ಕಾಶಿ ವಿಶ್ವನಾಥ ಸ್ವಾಮಿ ದರ್ಶನ ಪಡೆಯಲು ಪ್ರಕಟಣೆ ಮೂಲಕ ಕೋರಲಾಗಿದೆ.

IN THE COURT OF THE 2[ND] ADDL DISTRICT JUDGE AT MYSORE
COM. O.S. No: - 104/2023
Plaintiff: Canara Bank
A Branch at Yelwal branch, Mysore
V/s
Defendant: M/s RKS Enterprises By its prop Mr. Raj kumar sharma DEW DROP INN (Opp Indian oil petrol pump) Yelwal – Hunsur main road, Mysuru -571130
PAN- CKVPS9028P
Mobile: +91 8904920108/8757386350
Email: rksindustries@gmail.com
Form No. 1-A
Summons to appear in person
Order 5 rule 20
Whereas the plaintiff bank has instituted suit against you for recovery of amount of Rs. 14,32,615-00, you are hereby summoned to appear in this court in person or by a pleader on the **18 day of month August of 2023** at 11 O'clock to answer the claim, you are directed to produce on that day all the documents upon which you intend to rely in support of defense Failing which the suit will be disposed of exparte.
Given under my hand and the seal of the court on this 17th day of July 2023.
By the order of the court
Chief administrative officer
Principal District, Mysuru
Advocate for Plaintiff
S. Suresh B.B.M.; L.L.B.
Advocate, No. 974, 7th main, 3rd stage Gokulam, Mysore - 2

ಹಸಿರು ನಮ್ಮ ಉಸಿರು

Happy Birthday



JAYAPRASAD
JKP Fincap Solutions PVT LTD.. CEO, Mysore

Wishing you the best on your birthday and everything good in the year ahead." "Hope your day is filled with happiness." "Wishing you a happy birthday Boss and a wonderful year." "Our whole team is wishing you the happiest of birthdays."
- JKP Group..

ಪಾರ್ಟ್ ಟೈಂ ಜಾಬ್ ಹೆಸರಲ್ಲಿ ಇಬ್ಬರು ಮಹಿಳೆಯರಲ್ಲಿ ಲಕ್ಷಾಂತರ ರೂ. ವಂಚನೆ

ಮೈಸೂರು, ಜು.19– ಪಾರ್ಟ್ ಟೈಮ್ ಜಾಬ್ ಹೆಸರಿನಲ್ಲಿ ಆನ್‌ಲೈನ್ ಮೂಲಕ ಇಬ್ಬರು ಮಹಿಳೆಯರಿಗೆ ಲಕ್ಷಾಂತರ ರೂ. ವಂಚಿಸಲಾಗಿದೆ.



ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ವಿಜಯಲಕ್ಷ್ಮೀ ನಾಗಪ್ಪ ಸಿರಸಗಿ(29) ಎಂಬುವರಿಗೆ ವಾಟ್ಸಾಪ್ ಮೂಲಕ ಪಾರ್ಟ್ ಟೈಮ್ ಜಾಬ್ ಬಗ್ಗೆ ಸಂದೇಶ ಬಂದಿದ್ದು, ಮೋಜೋ ವಿಡಿಯೋಗಳನ್ನು ಲೈಕ್ ಮಾಡಿದರೆ ಪ್ರತೀ ವಿಡಿಯೋಗೆ 150 ರೂ. ನೀಡುವುದಾಗಿ ನಂಬಿಸಲಾಗಿತ್ತು. ಹಾಗೆ ವಿಡಿಯೋ ಲೈಕ್ ಮಾಡಬೇಕಾದರೆ ಲೈಕ್ ಮಾಡಲು ಹಣ ಹೂಡಿಕೆ ಮಾಡಬೇಕೆಂದು ತಿಳಿಸಲಾಗಿತ್ತು. ಅದರಂತೆ ವಿಜಯಲಕ್ಷ್ಮಿ ಅವರಿಂದ 52 ಲಕ್ಷ ರೂ.ಗಳನ್ನು ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ.

ಮತ್ತೊಂದು ಪ್ರಕರಣದಲ್ಲಿ ಬನ್ನಿಮಂಟಪ ಸಿ.ಲೇಔಟ್ ನಿವಾಸಿ ಪಿ. ಕುಶುಂದ(48) ಅವರಿಗೆ ಟೆಲಿಗ್ರಾಮ್ ಆಪ್‌ನಲ್ಲಿ ಯುಟ್ಯೂಬ್ ಚಾನೆಲ್ ಲೈಕ್, ಶೇರ್ ಮತ್ತು ರಿವ್ಯೂ ಕಂಪ್ಲೀಟ್ ಮಾಡುವ ಟಾಸ್ಕ್ ಅನ್ನು ಹಣ ಪಾವತಿಸಿ, ನಿರ್ವಹಿಸಿದರೆ ಕಮಿಷನ್ ನೀಡುವುದಾಗಿ ನಂಬಿಸಿ 2.93 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವೆರಡೂ ಪ್ರಕರಣಗಳು ಮೈಸೂರುನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಮನೆ ಬಾಗಿಲ ಲಾಕ್ ಮುರಿದು 7 ಲಕ್ಷ ಮೌಲ್ಯದ ನಗದು, ಚಿನ್ನಾಭರಣ ಕಳವು

ಮೈಸೂರು, ಜು.19– ಮನೆಯ ಬಾಗಿಲಿನ ಇನ್ನರ್‌ಲಾಕ್ ಮುರಿದು 7 ಲಕ್ಷ ರೂ. ನಗದು ಮತ್ತು ಚಿನ್ನಾಭರಣ ಕಳವು ಮಾಡಿರುವ ಘಟನೆ ಮೈಸೂರಿನ ಹೆಬ್ಬಾಳ್ 1ನೇ ಹಂತದಲ್ಲಿ ನಡೆದಿದೆ.



ಇಲಿನ ನಿವಾಸಿ, ವರ್ತಕ ಆರ್.ಎ. ತೇಜಸ್ ಪಟೇಲ್ ಹಣ ಮತ್ತು ಚಿನ್ನಾಭರಣ ಕಳೆದುಕೊಂಡವರಾಗಿದ್ದು, ಇವರು ಬೆಂಗಳೂರಿನಲ್ಲಿ ವಾಸವಿದ್ದು, ಹೆಬ್ಬಾಳ್‌ನ ಸ್ವಂತ ಮನೆಗೆ ಆಗಾಗ ಬಂದು ಹೋಗುತ್ತಿದ್ದರು. ಇವರ ಅಕ್ಕ ದಿವ್ಯಾ ಅವರು ಹುಣಸೂರು ತಾಲೂಕು ಗೆರಸನಹಳ್ಳಿಯಲ್ಲಿ ಫಾರ್ಮಾಸಿಸ್ಟ್ ಆಗಿದ್ದು, ಅಲ್ಲೇ ವಾಸವಿದ್ದರು. ಆಗಿಂದಾಗ್ಗೆ ಹೆಬ್ಬಾಳ್ ಮನೆಗೆ ಬಂದು–ಹೋಗುತ್ತಿದ್ದರು. ಈ ಕುಟುಂಬದವರು ಹಣ ಮತ್ತು ಚಿನ್ನಾಭರಣವನ್ನು ಈ ಮನೆಯಲ್ಲೇ ಇಟ್ಟಿದ್ದರು.

ಕಳೆದ ಜುಲೈ 10ರಂದು ತೇಜಸ್ ಪಟೇಲ್, ಅವರ ತಾಯಿ ಸುಶೀಲ ಮತ್ತು ಅಕ್ಕ ದಿವ್ಯಾ ಅವರು ಹೆಬ್ಬಾಳ್ ಮನೆಗೆ ಬಂದು–ಹೋಗಿದ್ದರು. ಜುಲೈ 18ರಂದು ಇವರ ಪಕ್ಕದ ಮನೆಯಲ್ಲಿರುವ ಗೀತಾ ಎಂಬುವವರು ಮನೆ ಬಾಗಿಲು ತೆರೆದಿರುವುದಾಗಿ ಮೊಬೈಲ್ ಮೂಲಕ ತಿಳಿಸಿದ್ದಾರೆ. ತೇಜಸ್ ಪಟೇಲ್ ಆಗಮಿಸಿ, ಪರಿಶೀಲಿಸಿದಾಗ ಖದೀಮರು ಮನೆಯ ಇನ್ನರ್ ಲಾಕ್ ಮುರಿದು, ಬೀರುವಿನ ಬಾಗಿಲು ಮೀಟಿ ಅಲ್ಲಿದ್ದ 7 ಲಕ್ಷ ನಗದು ಮತ್ತು 56 ಗ್ರಾಂ ತೂಕದ ಚಿನ್ನಾಭರಣ ಕಳವು ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಹೆಬ್ಬಾಳ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರೋಡ್ ಹಂಪ್ಸ್‌ನಲ್ಲಿ ಬೈಕ್ ನಿಯಂತ್ರಣ ತಪ್ಪಿ ಬಿದ್ದು ಸವಾರ ಸಾವು

ಮೈಸೂರು, ಜು.19– ರೋಡ್ ಹಂಪ್ಸ್‌ನಲ್ಲಿ ಬೈಕ್ ನಿಯಂತ್ರಣ ತಪ್ಪಿ ಬಿದ್ದು, ಮೆಡಿಕಲ್ ರೆಪ್ ಸಾವನ್ನಪ್ಪಿದ ಘಟನೆ ಮೈಸೂರಿನ ಶ್ರೀರಾಂಪುರ 2ನೇ ಹಂತದ ಬೆಮೆಲ್ ಆರ್ಚ್ ಬಳಿ ಸಂಭವಿಸಿದೆ.



ಕೊಳ್ಳೇಗಾಲ ಪಟ್ಟಣದ ನಾಯಕರ ಬೀದಿ ನಿವಾಸಿ ಸೇರಿ ಜಿ.ಎಂ. ಅಭಿಲಾಶ್ ನಾಯಕ(29) ಅಪಘಾತದಲ್ಲಿ ಸಾವನ್ನಪ್ಪಿದ್ದವರಾಗಿದ್ದು, ಇವರು ಮೈಸೂರಿನಲ್ಲಿ ಮೆಡಿಕಲ್ ರೆಪ್ ಆಗಿ ಕೆಲಸ ಮಾಡುತ್ತಿದ್ದಾರೆ. ಜುಲೈ 17ರಂದು ರಾತ್ರಿ 11.30ರ ಸುಮಾರಿನಲ್ಲಿ ಅಭಿಲಾಶ್ ಶ್ರೀರಾಂಪುರ 2ನೇ ಹಂತದ ಮುಖ್ಯರಸ್ತೆಯಲ್ಲಿ ಬೆಮೆಲ್‌ನಗರದ ಕಡೆ ರಾಯಲ್ ಎನ್‌ಫೀಲ್ಡ್ ಬೈಕ್ (ಕೆಎ 10–ಎಕ್ಸ್ 0055)ನಲ್ಲಿ ವೇಗವಾಗಿ ಹೋಗುತ್ತಿದ್ದಾಗ ಬೆಮೆಲ್ ಆರ್ಚ್ ಬಳಿ ಇದ್ದ ಹಂಪ್ಸ್‌ನಲ್ಲಿ ಬೈಕ್ ನಿಯಂತ್ರಣ ತಪ್ಪಿ ಬಿದ್ದು ಫುಟ್‌ಪಾತ್‌ಗೆ ಇವರ ತಲೆ ಅಪ್ಪಳಿಸಿದ ಪರಿಣಾಮ ತೀವ್ರವಾಗಿ ಗಾಯಗೊಂಡಿದ್ದಾರೆ. ಇವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಜುಲೈ 18ರಂದು ಮುಂಜಾನೆ 2.45ರ ಸುಮಾರಿನಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಕೆ.ಆರ್. ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐರಾವತ ಬಸ್‌ನಲ್ಲಿ ಜರ್ಮನಿಯ ಸಾಫ್ಟ್‌ವೇರ್ ಇಂಜಿನಿಯರ್ ಲ್ಯಾಪ್‌ಟಾಪ್, ಐಫೋನ್ ಕಳವು

ಮೈಸೂರು, ಜು.19– ಐರಾವತ ಬಸ್‌ನಲ್ಲಿ ಜರ್ಮನಿಯ ಎನ್–26 ಬ್ಯಾಂಕ್ ಕಂಪನಿಯ ಸಾಫ್ಟ್‌ವೇರ್ ಇಂಜಿನಿಯರ್‌ನ 3 ಲಕ್ಷ ರೂ. ಮೌಲ್ಯದ ಲ್ಯಾಪ್‌ಟಾಪ್ ಮತ್ತು ಐಫೋನ್ ಕಳವು ಮಾಡಲಾಗಿದೆ. ಮೈಸೂರಿನ ಗ್ರಾಮಾಂತರ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಘಟನೆ ನಡೆದಿದೆ.

ಮೂಲತಃ ಬೆಂಗಳೂರಿನ ಕೆಆರ್ ಪುರಂ ಭಟ್ಟರಹಳ್ಳಿ ನಿವಾಸಿಯಾಗಿದ್ದು, ಜರ್ಮನಿಯಲ್ಲಿ ಬ್ಯಾಂಕ್‌ವೊಂದರಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ ಎಸ್.ದಿವ್ಯಾ(28) ಲ್ಯಾಪ್‌ಟಾಪ್ ಮತ್ತು ಐಫೋನ್ ಕಳೆದುಕೊಂಡವರಾಗಿದ್ದು, ಇವರು ಜೂನ್ 14ರಂದು ಜರ್ಮನಿಯಿಂದ ಬೆಂಗಳೂರಿಗೆ ಬಂದಿದ್ದರು. ಈ ವೇಳೆ ಜರ್ಮನಿ ಬ್ಯಾಂಕ್‌ನಿಂದ ವರ್ಕ್ ಫ್ರಂ ಹೋಂಗಾಗಿ ಕೊಟ್ಟಿದ್ದ ಲ್ಯಾಪ್‌ಟಾಪ್ ಅನ್ನು ತಂದಿದ್ದರು. ಪತಿ ನವೀನ್ ರವಿಕುಮಾರ್ ಜೊತೆಗೂಡಿ ಜುಲೈ 14ರಂದು ಊಟಿ ಪ್ರವಾಸಕ್ಕೆ ಹೋಗಿದ್ದ ಇವರು ಜುಲೈ 16 ರಂದು ಮಧ್ಯಾಹ್ನ ಊಟಿ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ಐರಾವತ ಬಸ್ (ಕೆಎ 01–ಎಫ್ 1097) ಹತ್ತಿದ್ದಾರೆ. ಈ ವೇಳೆ ಲ್ಯಾಪ್‌ಟಾಪ್ ಮತ್ತು ಐಫೋನ್ ಇದ್ದ ಬ್ಯಾಗ್ ಅನ್ನು ಬಸ್‌ನ ಲಗ್ಗೇಜ್ ಕ್ಯಾರಿಯರ್‌ನಲ್ಲಿ ಇಟ್ಟಿದ್ದಾರೆ. ಈ ಬಸ್ ಅಂದು ರಾತ್ರಿ 8.45ಕ್ಕೆ ಮೈಸೂರಿನ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಕ್ಕೆ ಬಂದಾಗ ಇವರ ಬ್ಯಾಗ್ ಲಗ್ಗೇಜ್ ಕ್ಯಾರಿಯರ್‌ನಲ್ಲೇ ಇತ್ತು. ಈ ವೇಳೆ ಕೆಲವು ಪ್ರಯಾಣಿಕರು ಬಸ್‌ನಿಂದ ಇಳಿದರೆ ಮತ್ತೆ ಕೆಲವರು ಹತ್ತಿದ್ದರು. 9 ಗಂಟೆಗೆ ಬಸ್ ಹೊರಡುವ ವೇಳೆ ನೋಡಿದಾಗ ಲಗ್ಗೇಜ್ ಕ್ಯಾರಿಯರ್‌ನಿಂದ ಇವರ ಬ್ಯಾಗ್‌ನಿಂದ ಕಳವು ಮಾಡಿರುವುದು ಗೊತ್ತಾಯಿತು.

ತಕ್ಷಣವೇ ಬಸ್‌ನ ಚಾಲಕ ಮತ್ತು ನಿರ್ವಾಹಕರಿಂದ ಬಸ್‌ನಿಂದ ಇಳಿದು ಹೋದ ಪ್ರಯಾಣಿಕರ ಮೊಬೈಲ್ ನಂಬರ್‌ಗಳನ್ನು ಪಡೆದು ಕರೆ ಮಾಡಿ ವಿಚಾರಿಸಿದಾಗ ಅವರ್ಯಾರೂ ಇವರ ಬ್ಯಾಗ್ ಅನ್ನು ತೆಗೆದುಕೊಂಡು ಹೋಗಿಲ್ಲ ಎಂದು ತಿಳಿಸಿದ್ದಾರೆ. ಅದೇ ವೇಳೆ ಪ್ರಯಾಣಿಕರೊಬ್ಬರು ಬಸ್‌ನ ಮುಂದಿನ ಸೀಟ್‌ನಲ್ಲಿ ಕುಳಿತಿದ್ದ ವ್ಯಕ್ತಿ ಬ್ಯಾಗ್ ತೆಗೆದುಕೊಂಡು ಹೋಗಿರುವುದಾಗಿ ಇವರಿಗೆ ಹೇಳಿದ್ದಾರೆ. ಕಳವು ಆಗಿರುವ ಲ್ಯಾಪ್‌ಟಾಪ್ ಮತ್ತು ಆಪಲ್ ಐಫೋನ್‌ನ ಮೌಲ್ಯ ಸುಮಾರು 3 ಲಕ್ಷ ರೂ.ಗಳಾಗಬಹುದು ಎಂದು ತಿಳಿಸಿರುವ ದಿವ್ಯಾ ಅವರು ಲಷ್ಕರ್ ಠಾಣೆಗೆ ದೂರು ಸಲ್ಲಿಸಿದ್ದಾರೆ.

ಸಿಗರೇಟ್ ಖರೀದಿಸುವ ನೆಪದಲ್ಲಿ ಅಂಗಡಿ ಮಾಲೀಕರ ಸರ ಕಳವು

ಕೆ.ಆರ್.ನಗರ, ಜು.19– ಸಿಗರೇಟ್ ಖರೀದಿಸುವ ನೆಪದಲ್ಲಿ ಅಂಗಡಿ ಮಾಲೀಕರ ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾದ ಘಟನೆ ಕೆಆರ್‌ನಗರ ತಾಲೂಕು ಸುಗ್ಗನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಈ ಗ್ರಾಮದಲ್ಲಿ ಟೈಲರಿಂಗ್ ಜೊತೆ ಚಿಲ್ಲರೆ ಅಂಗಡಿ ನಡೆಸುತ್ತಿರುವ ಕುಮಾರಿ(37) ಮಾಂಗಲ್ಯಸರ ಕಳೆದುಕೊಂಡವರಾಗಿದ್ದು, ಜುಲೈ 18ರಂದು ಮಧ್ಯಾಹ್ನ 2 ಗಂಟೆ ಸುಮಾರಿನಲ್ಲಿ ಯುವಕನೋರ್ವ ಸ್ಕೂಟರ್‌ನಲ್ಲಿ ಬಂದು ಇವರ ಅಂಗಡಿಯಲ್ಲಿ ಒಂದು ಸಿಗರೇಟ್ ಮತ್ತು ಬಬಲ್‌ಗಮ್ ತೆಗೆದುಕೊಂಡು ಸಿಗರೇಟ್ ಸೇದುತ್ತಾ, ಬಬಲ್‌ಗಮ್ ಅಗಿಯುತ್ತಾ ಸುಮಾರು ಅರ್ಧ ಗಂಟೆ ಕಾಲ ನಿಂತು ಹೊರಟುಹೋಗಿದ್ದ. ಅದೇ ಯುವಕ ಮತ್ತೆ 3.45ರ ಸುಮಾರಿಗೆ ಸ್ಕೂಟರ್‌ನಲ್ಲಿ ಬಂದು 500 ರೂ. ನೋಟ್ ಕೊಟ್ಟು ಒಂದು ಪ್ಯಾಕ್ ಸಿಗರೇಟ್ ಕೇಳಿದ್ದಾನೆ. ಕುಮಾರಿಯವರು ಅರ್ಧ ಪ್ಯಾಕ್ ಮಾತ್ರ ಇದೆ ಎಂದು ಹೇಳಿದಾಗ, 500 ರೂ. ನೋಟ್ ವಾಪಸ್ ತೆಗೆದುಕೊಂಡು 100 ರೂ. ನೋಟನ್ನು ಕೊಟ್ಟಿದ್ದಾನೆ. ಅವರು ಸಿಗರೇಟ್ ಕೊಟ್ಟ ನಂತರ ಚಿಲ್ಲರೆ ಕೊಡಲು ಹೋದಾಗ ಅವರ ಕತ್ತಿನಲ್ಲಿದ್ದ 15 ಗ್ರಾಂ ತೂಕದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಸ್ಕೂಟರ್ ಹತ್ತಿ ಪರಾರಿಯಾಗಿದ್ದಾನೆ. ಈ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ: ಅರ್ಚಕ ಸಾವು

ಮೈಸೂರು, ಜು.19– ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಅರ್ಚಕರೊಬ್ಬರು ಸಾವನ್ನಪ್ಪಿದ ಘಟನೆ ಮೈಸೂರಿನ ರಾಜೀವ್‌ನಗರ ಯಾಸಿನ್ ಮಜೀದ್ ಮುಂಭಾಗ ರಿಂಗ್ ರಸ್ತೆಯಲ್ಲಿ ಸಂಭವಿಸಿದೆ. ಮೈಸೂರು ತಾಲೂಕು ಸಿಂಧುವಳ್ಳಿ ಗ್ರಾಮದ ಅರ್ಚಕ ಎಸ್. ಅಭಿಷೇಕ್(23) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಜು.17ರಂದು ಬೆಳಗ್ಗೆ 6.45ರ ಸುಮಾರಿನಲ್ಲಿ ರಿಂಗ್ ರಸ್ತೆಯಲ್ಲಿ ಕಲ್ಯಾಣಗಿರಿ ಕಡೆಗೆ ಪ್ಯಾಷನ್ ಪ್ರೊ ಬೈಕ್‌ನಲ್ಲಿ (ಕೆಎ 09–ಜೆಡಿ 3781) ಹೋಗುತ್ತಿದ್ದಾಗ ಇವರ ಬೈಕ್‌ಗೆ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ತೀವ್ರವಾಗಿ ಗಾಯಗೊಂಡರು. ಇವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾರೆ. ಈ ಸಂಬಂಧ ಸಿದ್ಧಾರ್ಥನಗರ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

IN THE COURT OF THE HONOURABLE SENIOR CIVIL JUDGE AT H.D KOTE
EX NO.63/2022
Decree Holder: Sri. Swamy Dead by lrs, Smt. Prema and others -VS-
Judgement debitors: Sri. Ningachari and others
PAPER PUBLICATION
That the above decree holder field the above petition aginst the JDrs for the execution of the regd. Sale deed in respect of the petition schedule property and hearing date of the above case has been fixed on-16.8.2023 At 11-00am the 1st JDr and (b) by name smt Doddamma wife of late ningachari Residing at halladamanuganahalli village hampapura hobali H.D kote taluk And smt Bhagya wife of sannasomachari residing at vodera hosahalli village bilikere hobli hunsuru taluk are hereby given notice by way of this paper publication to appear in person or through their counsil on the above date fixed for hearing failing which the honourable court will dispose the above case in accordance with law for the absence of the lrs of the 1st JDr.
SCHEDULE: Landed property bearing Sy .No:145/1 (old) and new Sy No: 224 measuring 4.00 acres situated at hallada manuganahalli village, hampapura hobli h.d kote taluk Mysure dist bounded on the East by: land of Chunchegowda, West by: land of Siddachari, North by : land of Gavisiddegowda South by: land of Shambappa, Given Under my hand and seal of this court dated 18.07.2023
By Order of the Court
Sd/- Chief Ministerial Officer,
Court of the Senior Civil Judge & JMFC, H D kote
Advocate for DHRs,
Sd/- B.SHIVANNA, B.A L.L.B, Advocates, KAR 2505/2003, Adith apartment, Flat No: 104,SJCE College Road Telecom layout, Chamaraja Mohalla, Mysore, Mob: 9880139649

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ. ಮೈಸೂರು
ದೂರವಾಣಿ:0821– 2424246

ಗುತ್ತಿಗೆದಾರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಸಮಾರಂಭದ ಆಹ್ವಾನ ಪತ್ರಿಕೆ

ದಿನಾಂಕ 21/07/2023ನೇ ಶುಕ್ರವಾರ ಸಮಯ ಸಂಜೆ–5.00 ಗಂಟೆಗೆ

ದಿವ್ಯಸಾನಿಧ್ಯ
ಶ್ರೀ.ಶ್ರೀ.ಶ್ರೀ. ಸೋಮೇಶ್ವರನಾಥ ಸ್ವಾಮೀಜಿಯವರು,
ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠ, ಮೈಸೂರು ಶಾಖೆಯ ಮುಖ್ಯಸ್ಥರು

ಅಧ್ಯಕ್ಷತೆ: **ಶ್ರೀ ಮಹಾಲಿಂಗಂ,**
ಅಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಮುಖ್ಯ ಅತಿಥಿಗಳು
ಮಾನ್ಯ ಶ್ರೀ ಕೆ. ಹರೀಶ್‌ಗೌಡ, ಶಾಸಕರು, ಚಾಮರಾಜ ಕ್ಷೇತ್ರ ಮೈಸೂರು.

ಮುಖ್ಯ ಭಾಷಣಕಾರರು
ಮಾನ್ಯ ಶ್ರೀ. ಪ್ರೊ. ಮೈಸೂರು ಕೃಷ್ಣಮೂರ್ತಿ, ಕನ್ನಡ ಪ್ರಾಧ್ಯಾಪಕರು, ವಿಮರ್ಶಕರು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕೆ.ಆರ್.ನಗರ

ಮಾನ್ಯ ಶ್ರೀ ಗೋವಿಂದೇಗೌಡ
ಉಪಾಧ್ಯಕ್ಷರು, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು.

ಸ್ಥಳ: ರಿಯೋ ಮೆರಿಡಿಯನ್ ಸಭಾಂಗಣ
ಯೂನಿಟ್ ಆಫ್‌ರಿಯೋ ಮೆರಿಡಿಯನ್ ಹೋಟೆಲ್ಸ್ ಪ್ರೈ ಲಿ.
ನ್ಯೂ ಸಯ್ಯಾಜಿ ರಾವ್ ರಸ್ತೆ, ಹೈವೇ ಸರ್ಕಲ್, ಮೈಸೂರು
ತಮ್ಮೆಲ್ಲರಿಗೂ ಸ್ವಾಗತ ಕೋರುವ
ಆಡಳಿತ ಮಂಡಳಿ ಸದಸ್ಯರು

ಸೊಸೈಟಿಯ ಆಡಳಿತ ಮಂಡಳಿ:
ಶ್ರೀ ಮಹಾಲಿಂಗಂ, ಅಧ್ಯಕ್ಷರು, ಶ್ರೀ ಗೋವಿಂದೇಗೌಡ, ಉಪಾಧ್ಯಕ್ಷರು,
ನಿರ್ದೇಶಕರುಗಳು : ಶ್ರೀ ಎಸ್.ಗೋಪಾಲರಾಜು, ಶ್ರೀ ವಿ.ಕುಮಾರ್,
ಶ್ರೀ ಬಿ.ಪುಟ್ಟಸ್ವಾಮಿ, ಶ್ರೀ ಚಂದ್ರಶೇಖರಯ್ಯ, ಶ್ರೀ ಕೆ.ವಿ.ಚಿನ್ನಯ್ಯ, ಶ್ರೀ ಸಿ.ಡಿ.ಕೃಷ್ಣ, ಶ್ರೀ ಹೆಚ್. ಎಂ. ಪರಶಿವಮೂರ್ತಿ, ಶ್ರೀ ರಾಜೇಗೌಡ, ಶ್ರೀ ಕೆ.ರವಿ, ಶ್ರೀ ಕೆ.ನಾಗರಾಜು, ಶ್ರೀ ಎಸ್.ಜೆ. ಜಗದೀಶ್, ಶ್ರೀ ದೇವೇಂದ್ರ, ಶ್ರೀ ಕೆ.ದಶರಥ, ಶ್ರೀಮತಿ ಟಿ.ಅನುಸೂಯ, ಶ್ರೀಮತಿ ಜಯಲಕ್ಷ್ಮಿ